08 July 2026 Wednesday | SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 219 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

**ಭಾವನಾಂತರಂಗ**

ಯೋಗದಿಂದ ಹಣಬರಹ, ಯೋಗ್ಯತೆಯಿಂದ ವ್ಯಕ್ತಿತ್ವ ಬದಲಾಗುತ್ತದೆ, ಹೀಗಾಗಿ ಯೋಗ,ಯೋಗ್ಯತೆ ಬದುಕಿಗೆ ಮುಖ್ಯ!

-ಸ್ನೇಹಾ ಆನಂದ್


ಮೀಸಲಾತಿ ನಮ್ಮ ಹಕ್ಕು, ನಮಗೆ ಕೊಡಲಿ: ಮಾಜಿ ಸಚಿವ ಬಿ.ಶ್ರೀರಾಮುಲು — ಪುಟ ಸಂ. 2


ಅರ್ಥಪೂರ್ಣವಾಗಿ ನಡೆದ ಡಾ.ಬಾಬು ಜಗಜೀವನ ರಾಮ್ ಪುಣ್ಯಸ್ಮರಣೆ — ಪುಟ ಸಂ. 3


ಮತದಾರರ ಹೆಸರು ಕೈ ಬಿಡದಿರಿ: ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ — ಪುಟ ಸಂ. 4

## ಮುಂಬೈನಲ್ಲಿ ಮಳೆರಾಯನ ರೌದ್ರನರ್ತನ: ರೈಲು ಸ್ಥಗಿತ

**ಮುಂಬೈ:** ಕಳೆದ ಮೂರು ದಿನಗಳಿಂದ ಮುಂಬೈ ಸೇರಿದಂತೆ ಮಹಾರಾಷ್ಟ್ರದ ಹಲವು ಭಾಗಗಳಲ್ಲಿ ಭಾರೀ ಮಳೆ ಸುರಿಯುತ್ತಿದೆ. ಜನಜೀವನ ಸಂಪೂರ್ಣ ಅಸ್ತವ್ಯಸ್ತವಾಗಿದೆ. ರಸ್ತೆಗಳು ಜಲಾವೃತವಾಗಿವೆ. ವಾಹನ ಸಂಚಾರ, ರೈಲು ಸೇವೆ ಮೇಲೆ ಮಳೆಯ ಪರಿಣಾಮ ತೀವ್ರವಾಗಿದೆ.

ಕಳೆದ ಆರು ದಿನಗಳಲ್ಲಿ ಮುಂಬೈ ನಗರದಲ್ಲಿ ಮಳೆಯ ಅವಾಂತರಕ್ಕೆ 10 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಭಾರಿ ಪುಟ 2ಕ್ಕೆ



## ವಿದ್ಯುತ್ ಬರಕ್ಕೆ ಸೂರ್ಯನೇ ದಿಕ್ಕು

**ಎಚ್ ಆರ್ ಶ್ರೀಶಾ** ಬೆಂಗಳೂರು

ಮಳೆರಾಯ ಕೈಕೊಡುವುದು ಖಚಿತವಾಗುತ್ತಿದ್ದಂತೆ ಕುಡಿಯುವ ನೀರು ಮತ್ತು ವಿದ್ಯುತ್ ಬರದ ಬಗ್ಗೆ ಚಿಂತನೆ ಆರಂಭಗೊಂಡಿದೆ. ಎಲ್ಲ ಜಲಾಶಯಗಳಲ್ಲಿರುವ ನೀರನ್ನು ಕುಡಿಯುವ ನೀರಿಗೆ ಮೀಸಲು ಇಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಆದರೆ ವಿದ್ಯುತ್ ಸಮಸ್ಯೆಯನ್ನು ಎದುರಿಸುವುದು ಸುಲಭದ ಕೆಲಸವೇನಲ್ಲ. ಅದಕ್ಕೆ ಸಾಕಷ್ಟು ಪೂರ್ವ ಸಿದ್ಧತೆ ಬೇಕು. ಅನುಭವಿ ಎಂಜಿನಿಯರ್‌ಗಳು ಮಾತ್ರ ಇದನ್ನು ಎದುರಿಸಬಲ್ಲರು. ಎಸ್. ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಭೀಕರ ವಿದ್ಯುತ್ ಕ್ಷಾಮ ಬಂದಿತ್ತು. ಆಗ ಎಂಜಿನಿಯರ್‌ಗಳೇ ಎಲ್ಲವನ್ನೂ ನಿಭಾಯಿಸಿದರರು. ಆಗ ಸರ್ಕಾರ ಎಂಜಿನಿಯರ್‌ಗಳಿಗೆ ಪೂರ್ಣ ಸ್ವಾತಂತ್ರ ನೀಡಿದ್ದರು. ಈಗ ಸರ್ಕಾರ ಹೇಳದೆ ಒಂದು ಹುಲುಕಡ್ಡಿಯೂ ಅಲುಗಾಡುವುದಿಲ್ಲ.



ರಾಜ್ಯದಲ್ಲಿ ಈಗ ವಿದ್ಯುತ್ ಬಳಕೆ ಪ್ರತಿದಿನ 281 ದಶಲಕ್ಷ ಯೂನಿಟ್ ತಲುಪಿದೆ. ಇದು ಇನ್ನೂ ಅಧಿಕಗೊಳ್ಳುತ್ತದೆ. ಮಳೆ ಆಶ್ರಯದಲ್ಲಿರುವ ಭೂಮಿಯಲ್ಲಿ ಕೃಷಿ ಚಟುವಟಿಕೆ ಇಲ್ಲದ ಕಾರಣ 36 ಲಕ್ಷ ಬಾವಿಗಳಿಗೆ ವಿದ್ಯುತ್ ಸರಬರಾಜು ಅನಿವಾರ್ಯವಾಗಲಿದೆ. ರೈತರು ಹಗಲು ವಿದ್ಯುತ್ ಕೇಳುವುದರಿಂದ ಸೋಲಾರ್ ವಿದ್ಯುತ್ ಬಳಸಿಕೊಳ್ಳಬಹುದು.

ಆದರೆ ಅದಕ್ಕೆ ಗ್ರಿಡ್ ಜಾಲದ ಸಾಮರ್ಥ್ಯ ಹೆಚ್ಚಿಸುವುದು ಅಗತ್ಯ. ಗ್ರಾಮೀಣ ಭಾಗದಲ್ಲಿ ಟ್ರಾನ್ಸ್ಫಾರ್ಮರ್‌ಗಳು ಓವರ್ ಲೋಡ್ ಆಗಿರುವುದರಿಂದ ಅವುಗಳು ಕೆಡುವ ಪ್ರಮಾಣ ಅಧಿಕಗೊಳ್ಳುತ್ತದೆ. ಅದನ್ನು ಸರಿಪಡಿಸಲು ಸೂಕ್ತ ವ್ಯವಸ್ಥೆ ಮಾಡಿಕೊಳ್ಳುವುದು ಅಗತ್ಯ. 25ಕೆವಿಎ ಗಿಂತ ಹೆಚ್ಚಿನ ಟಿಸಿಗಳನ್ನು ದುರಸ್ತಿ ಮಾಡಲು ಸೂಕ್ತ ತಜ್ಞರೇ ಬೇಕು. ಅಲ್ಲದೆ ಅವುಗಳನ್ನು ಕಂಬದಿಂದ ಇಳಿಸಿ ದುರಸ್ತಿ ಮಾಡಿ ಮತ್ತೆ ಕಂಬಕ್ಕೆ ಏರಿಸುವುದು ಶ್ರಮದ ಕೆಲಸ. ಅಲ್ಲದೆ ಗ್ರೀಡ್ ನಿರ್ವಹಣ ಸುಲಭದ ಕೆಲಸವಲ್ಲ. ಯಾವುದೇ ವಿದ್ಯುತ್ ಗ್ರಿಡ್ ಮೂಲಕ ನೀಡಿದರೆ ವಿದ್ಯುತ್ ನಷ್ಟ ಇದ್ದೇ ಇರುತ್ತದೆ. ಇದನ್ನು ತಪ್ಪಿಸಬೇಕು ಎಂದರೆ ಗ್ರಿಡ್ ರಹಿತ ಬ್ಯಾಟರಿ ಸಹಿತ ಸೋಲಾರ್ ವಿದ್ಯುತ್ ಬಳಸುವ ಕ್ರಮವನ್ನು ಹೆಚ್ಚಿಸಬೇಕು. ಈಗ ಎಲ್ಲ ಕಡೆ ಸೋಲಾರ್ ವಿದ್ಯುತ್ ಉತ್ಪಾದನೆ ಅಧಿಕಗೊಂಡಿದೆ. ಆದರೆ ಗ್ರೀಡ್ ರಹಿತ ಬಳಕೆ ಅಧಿಕಗೊಂಡಿಲ್ಲ. ಅದರೊಂದಿಗೆ ಬ್ಯಾಟರಿ ಮೂಲಕ ವಿದ್ಯುತ್ ದಾಸ್ತಾನು ಪುಟ 3ಕ್ಕೆ

## ದಸರಾ ಆನೆಗಳಿಗೆ ಇಸಿಜಿ ಪರೀಕ್ಷೆ

**ಮೈಸೂರು:** ನಾಡಹಬ್ಬ ಮೈಸೂರು ದಸರಾ ಮಹೋತ್ಸವದಲ್ಲಿ ಭಾಗವಹಿಸಲಿರುವ ಆನೆಗಳಿಗೆ ಮೊದಲ ಬಾರಿಗೆ ಇಸಿಜಿ ಪರೀಕ್ಷೆಯನ್ನೂ ನಡೆಸಲು ಅರಣ್ಯ ಇಲಾಖೆ ಮುಂದಾಗಿದೆ.

ಕೆ.ಗುಡಿ, ರಾಮಪುರ, ಮತ್ತಿಗೋಡು, ದುಬಾರೆ ಆನೆ ಶಿಬಿರಗಳ 20ಕ್ಕೂ ಹೆಚ್ಚು ಆನೆಗಳ ಆರೋಗ್ಯ ತಪಾಸಣೆಯನ್ನು ಪಶುವೈದ್ಯಾಧಿಕಾರಿಗಳ ತಂಡ ಕೈಗೊಂಡಿದೆ. ಆನೆಗಳ ಆರೋಗ್ಯ ಸ್ಥಿತಿಯನ್ನು ಪರಿಶೀಲಿಸಿದ ಬಳಿಕ ರಕ್ತ ಮತ್ತು ಪುಟ 2ಕ್ಕೆ



# ಬರ ನಿರ್ಲಕ್ಷಿಸಿದರೆ ಕಠಿಣ ಕ್ರಮ

## ಅಧಿಕಾರಿಗಳಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಚ್ಚರಿಕೆ

**ಕಲಬುರಗಿ:** ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಚ್ಚರಿಕೆ ನೀಡಿದರು.

ಕಲಬುರ್ಗಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಜನಪರ ಕೆಲಸ ಮಾಡದ ಅಧಿಕಾರಿಗಳನ್ನು ಸಹಿಸಿಕೊಳ್ಳುವುದಿಲ್ಲ. ಸರ್ವರನ್ನೂ ಒಳಗೊಂಡ ಪರಿಶುದ್ಧ ಆಡಳಿತ, ಅಭಿವೃದ್ಧಿ ಮತ್ತು ಕಟ್ಟಕಡೆಯ ವ್ಯಕ್ತಿಗೂ ಅವರ ನಾಗರಿಕ ಹಕ್ಕುಗಳನ್ನು ತಲುಪಿಸುವುದು ಸರ್ಕಾರದ ಪ್ರಮುಖ ಗುರಿ. ಈ ಗುರಿ ಸಾಧಿಸಲು ಅಧಿಕಾರಿ ವರ್ಗ ಅತ್ಯಂತ ಕ್ರಿಯಾಶೀಲ, ಜನಪರ ಮತ್ತು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು.

ನಾನು ಬಸವಾದಿ ಶರಣರ ಸಮಾನತೆಯ ತತ್ವವನ್ನು ನಂಬುವವನು. ನನ್ನ ಮೊದಲ ಉತ್ತರ ಕರ್ನಾಟಕ ಪ್ರವಾಸವನ್ನು ಬಸವಕಲ್ಯಾಣದಿಂದ ಆರಂಭಿಸಿದ್ದೇನೆ. ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಅಭಿವೃದ್ಧಿ ಒಂದೇ ವೇಗದಲ್ಲಿ ಸಾಗಬೇಕು ಎಂದು ಹೇಳಿದರು.

ನಾನು ತಾಲ್ಲೂಕು ಪಂಚಾಯಿತಿ ಅಧ್ಯಕ್ಷನಾಗಿ ಕೆಲಸ ಆರಂಭಿಸಿ ಮುಖ್ಯಮಂತ್ರಿ ಹುದ್ದೆಯವರೆಗೆ ಎಲ್ಲಾ ಹಂತಗಳನ್ನು ದಾಟಿಕೊಂಡು ಬಂದಿದ್ದೇನೆ. ಹೀಗಾಗಿ ಆಡಳಿತದ ಪ್ರತಿಯೊಂದು ಹಂತದಲ್ಲಿ ಏನು ನಡೆಯುತ್ತದೆ ಎಂಬುದು ನನಗೆ ಚೆನ್ನಾಗಿ ಗೊತ್ತಿದೆ. ಅಭಿವೃದ್ಧಿ ವಿಚಾರದಲ್ಲಿ ಯಾವುದೇ ನೆಪಗಳನ್ನು ಕೇಳಲು ನಾನು ಸಿದ್ಧನಿಲ್ಲ. ನನಗೆ ಫಲಿತಾಂಶವೇ ಮುಖ್ಯ ಎಂದು ಅಧಿಕಾರಿಗಳಿಗೆ ಸ್ಪಷ್ಟ ಸಂದೇಶ ನೀಡಿದರು.

ನಿಮ್ಮ ಕಾರ್ಯಕ್ಷಮತೆ ಉತ್ತಮವಾಗಿದ್ದರೆ ನಾಡಿನ ಜನತೆಯ ಋಣ ತೀರಿಸಿದಂತಾಗುತ್ತದೆ. ಆದರೆ ಜನಪರವಾಗಿ ಕೆಲಸ ಮಾಡದಿದ್ದರೆ ನಿಮ್ಮ ವಿರುದ್ಧ ಕ್ರಮ ಕೈಗೊಳ್ಳುವುದು ನನಗೆ ಅನಿವಾರ್ಯವಾಗುತ್ತದೆ ಎಂದು ಅವರು ಎಚ್ಚರಿಕೆ ನೀಡಿದರು.

ದೇಶಾದ್ಯಂತ ಮಳೆಯ ಅಭಾವದ ಬಗ್ಗೆ ಪುಟ 2ಕ್ಕೆ



### ಯಾರೂ ಮತದಾನದ ಹಕ್ಕು ಕಳೆದುಕೊಳ್ಳಬಾರದು: ಸಿಎಂ

**ಕಲಬುರ್ಗಿ:** ರಾಜ್ಯದ ಒಬ್ಬನೇ ಒಬ್ಬ ಅರ್ಹ ಮತದಾರ ತನ್ನ ಮತದಾನದ ಹಕ್ಕು ಕಳೆದುಕೊಳ್ಳಬಾರದು. ಇಲ್ಲಿ ರಾಜಕಾರಣ ಮುಖ್ಯವಲ್ಲ. ಪ್ರತಿಯೊಬ್ಬ ನಾಗರಿಕನ ಮತದಾನದ ಹಕ್ಕು ರಕ್ಷಿಸುವುದು ಸರ್ಕಾರದ ಜವಾಬ್ದಾರಿ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚಿಸಿದರು. ಬಿಎಲ್‌ಒಗಳು ಪ್ರತಿಯೊಂದು ಮನೆಗೆ ಕನಿಷ್ಠ ಮೂರು ಬಾರಿ ಭೇಟಿ ನೀಡಿ ಅರ್ಹ ಮತದಾರರ ಹೆಸರನ್ನು ಉಳಿಸುತ್ತಾರೆಯೇ ಎಂಬುದರ ಮೇಲೆ ನಿಗಾ ವಹಿಸಬೇಕು. ಈ ವಿಚಾರದಲ್ಲಿ ಯಾವುದೇ ರಾಜಿ ಪ್ರಶ್ನೆಯೇ ಇಲ್ಲ ಎಂದು ಸೂಚಿಸಿದರು. ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಅವಧಿ ಯಲ್ಲಿ ಆರಂಭಗೊಂಡಿರುವ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಯಥಾವತ್ತಾಗಿ ಮುಂದುವರಿಯಲಿವೆ. ಅಭಿವೃದ್ಧಿಯ ವೇಗವನ್ನು ಹೆಚ್ಚಿಸುವುದರ ಜೊತೆಗೆ ಆಡಳಿತದಲ್ಲಿ ಇನ್ನಷ್ಟು ಪಾರದರ್ಶಕತೆ, ಕಾರ್ಯಕ್ಷಮತೆ ಮತ್ತು ಜನಕೇಂದ್ರಿತ ದೃಷ್ಟಿಕೋನಕ್ಕೆ ಆದ್ಯತೆ ನೀಡಲಾಗುವುದು ಎಂದು ಸಿಎಂ ಭರವಸೆ ನೀಡಿದರು.

### ಪರಿಸ್ಥಿತಿ ನೋಡಿ ಬರ ಘೋಷಣೆ: ರೈತರಿಗೆ ಸಿಎಂ ಡಿಕೆಶಿ ಭರವಸೆ

**ಕಲಬುರಗಿ:** ರಾಜ್ಯದ ಎಲ್ಲಾ ಭಾಗಗಳ ಪರಿಸ್ಥಿತಿಯನ್ನು ಸಮಗ್ರವಾಗಿ ಪರಿಶೀಲಿಸಿ ನಂತರ ಬರ ಪ್ರದೇಶ ಘೋಷಣೆ ಮಾಡುವ ಬಗ್ಗೆ ನಿರ್ಧರಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಬರವಸೆ ನೀಡಿದರು.

ಕಲಬುರಗಿಯಲ್ಲಿ ರೈತ ಮುಖಂಡರು ತಮ್ಮ ಅಹವಾಲು ಸಲ್ಲಿಸಿ, ಮಳೆ ಕೊರತೆ ಉಂಟಾಗಿದೆ, ಬರಗಾಲ ಪೀಡಿತ ಎಂದು ಘೋಷಣೆ ಮಾಡಿ ಎಂದು ಮನವಿ ಮಾಡಿದರು. ಬರಗಾಲ ಪೀಡಿತ ಪ್ರದೇಶ ಎಂದು ಘೋಷಣೆ ಮಾಡಲು ಕಾನೂನು ಚೌಕಟ್ಟಿದೆ. ಅದನ್ನು ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು ಎಂದು ಸಿಎಂ ತಿಳಿಸಿದರು.

ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈ ಪರಿಸ್ಥಿತಿಯನ್ನು ಕಣ್ಣಾರೆ ನೋಡಲೆಂದೇ ನಾನು ಇಲ್ಲಿಗೆ ಬಂದಿದ್ದೇನೆ. ನಿಮ್ಮ ಪರಿಸ್ಥಿತಿ ನನಗೆ ಅರ್ಥವಾಗುತ್ತದೆ. ಇಲ್ಲಿನ ಜನರು ಮತ್ತು ಜನಪ್ರತಿನಿಧಿಗಳನ್ನು ಭೇಟಿ ಮಾಡಿದ್ದೇನೆ ಎಂದು ಹೇಳಿದರು.

ರೈತರ ಸಾಲ ಮನ್ನಾ ವಿಚಾರ ಪುಟ 2ಕ್ಕೆ

# ಕೊಡಗಿನಲ್ಲಿ ಬಿರುಸು ಮಳೆ: ಕಾವೇರಿ ನದಿಯಲ್ಲಿ ಜೀವಕಳೆ

**ಮಡಿಕೇರಿ:** ಕೊಡಗು ಜಿಲ್ಲೆಯಲ್ಲಿ ಮಳೆ ಬಿರುಸುಗೊಂಡಿರುವುದರಿಂದ ಕಾವೇರಿ ನದಿ ಜೀವಕಳೆಯಿಂದ ಹರಿಯುತ್ತಿದೆ. ಹಾರಂಗಿ ಮತ್ತು ಕೆಆರ್‌ಎಸ್ ಜಲಾಶಯಕ್ಕೆ ಒಳಹರಿವಿನ ಪ್ರಮಾಣ ಹೆಚ್ಚುತ್ತಿದೆ. ಕೆಆರ್‌ಎಸ್ ಗೆ 5734 ಕ್ಯೂಸೆಕ್ ನೀರು ಹರಿದು ಬರುತ್ತಿದೆ.

ಕೇರಳದಲ್ಲಿ ಸಹ ಮಳೆಯ ಪ್ರಮಾಣ ಹೆಚ್ಚಾಗಿರುವುದರಿಂದ ಕಬಿನಿ ಜಲಾಶಯಕ್ಕೂ ನೀರಿನ ಹರಿವಿನ ಪ್ರಮಾಣ ಹೆಚ್ಚಾಗಿದೆ. ಕಬಿನಿಗೆ 4394 ಕ್ಯೂಸೆಕ್ ನೀರು ಬರುತ್ತಿದೆ. ಆದರೆ ಕಬಿನಿ ಮತ್ತು ಕೆಆರ್‌ಎಸ್ ನಿಂದ ಹೊರಹರಿವಿನ ಪ್ರಮಾಣವನ್ನು ಸಹ ಹೆಚ್ಚಿಸಿರುವುದರಿಂದ ತಮಿಳುನಾಡಿಗೆ ಕದ್ದುಮುಚ್ಚಿ ನೀರು ಬಿಡುತ್ತಿರುವ ಬಗ್ಗೆ ಅನುಮಾನ ಉಂಟಾಗಿದೆ.

ಕೊಡಗು ಸುತ್ತಮುತ್ತ ನಿರಂತರ ಮಳೆಯ ಪರಿಣಾಮ ಪೊನ್ನಂಪೇಟೆ ತಾಲೂಕಿನ ಹಾತೂರು ಗ್ರಾಮದ ಬಸವೇಶ್ವರ ಬಡಾವಣೆಗೆ ಸಂಪರ್ಕ ಕಲ್ಪಿಸುವ ಸೇತುವೆ ಸಂಪೂರ್ಣ ಜಲಾವೃತವಾಗಿದೆ. ಗ್ರಾಮಸ್ಥರು ಜಲ ದಿಗ್ಬಂಧನಕ್ಕೆ ಸಿಲುಕಿದ್ದಾರೆ.

ಮುಂಗಾರು ಮಳೆ ದಿನೇದಿನೇ ಬಿರುಸು ಪಡೆಯುತ್ತಿದೆ. ಸೇತುವೆಯ ಮೇಲೆ ಸುಮಾರು ಮೂರು ಅಡಿ ಎತ್ತರದಲ್ಲಿ ನೀರು ಹರಿಯುತ್ತಿರುವುದರಿಂದ ವಾಹನ ಹಾಗೂ ಸಾರ್ವಜನಿಕರ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದೆ. ಏಕಾಏಕಿ ನೀರಿನ ಮಟ್ಟ ಹೆಚ್ಚಾದ ಕಾರಣ ಹೊರಗಿನ ಸಂಪರ್ಕ ಸಂಪೂರ್ಣ ಕಡಿತಗೊಂಡಿದೆ.

ಕೊಡಗು ಜಿಲ್ಲೆಯ ಹಲವು ಭಾಗಗಳಲ್ಲಿ ನದಿ ಮತ್ತು ಹೊಳೆಗಳು ಅಪಾಯದ ಮಟ್ಟದಲ್ಲಿ ಹರಿಯುತ್ತಿವೆ. ಅದರ ಪರಿಣಾಮ ಹಾತೂರು ಗ್ರಾಮದ ಬಸವೇಶ್ವರ ಬಡಾವಣೆಗೆ ಹೋಗುವ ಪ್ರಮುಖ ಸೇತುವೆಯೇ ನೀರಿನಲ್ಲಿ ಮುಳುಗಿದೆ. ಇದರಿಂದ ಗ್ರಾಮಸ್ಥರು ಅಗತ್ಯ ಕೆಲಸಗಳಿಗೂ ಹೊರ ಹೋಗಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ.

ಯಾವುದೇ ಅನಾಹುತ ಸಂಭವಿಸದಂತೆ ಮುಂಜಾಗ್ರತಾ ಕ್ರಮವಾಗಿ ಗೋಣಿಕೊಪ್ಪ ಪೊಲೀಸ್ ಠಾಣೆಯ ಸಿಬ್ಬಂದಿ ಸೇತುವೆಯ ಎರಡೂ ಬದಿಗಳಲ್ಲಿ ಬ್ಯಾರಿಕೇಡ್ ಅಳವಡಿಸಿ ಸಾರ್ವಜನಿಕರ ಸಂಚಾರವನ್ನು ತಡೆದಿದ್ದಾರೆ.



### ಹಾಸನದಲ್ಲೂ ಜೋರು ಮಳೆ

**ಹಾಸನ:** ಜಿಲ್ಲೆಯ ಸಕಲೇಶಪುರ, ಬೇಲೂರು, ಆಲೂರು ಭಾಗಗಳಲ್ಲಿ ಬಿರುಗಾಳಿ ಸಹಿತ ಭಾರೀ ಮಳೆ ಸುರಿದಿದೆ. ಬೇಲೂರು ತಾಲೂಕಿನ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಮಂಗಳವಾರ ರಜೆ ನೀಡಲಾಗಿತ್ತು. ಈ ಭಾಗಗಳಲ್ಲಿ ಹೆಚ್ಚು ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ರಜೆ ಘೋಷಣೆ ಮಾಡಲಾಗಿದೆ. ಸಕಲೇಶಪುರ ತಾಲೂಕಿನಲ್ಲಿಯೂ ಧಾರಾಕಾರವಾಗಿ ಮಳೆಯಾಗುತ್ತಿದೆ. ತಾಲೂಕಿನ ಎಲ್ಲಾ ಅಂಗನವಾಡಿ, ಪ್ರಾಥಮಿಕ, ಪ್ರೌಢಶಾಲೆಗಳು ಹಾಗೂ ಕಾಲೇಜಿಗೆ ರಜೆ ಘೋಷಿಸಿ ತಹಶೀಲ್ದಾರ್ ಸುಪ್ರಿತಾ ಆದೇಶಿಸಿದ್ದಾರೆ

ಸೇತುವೆ ದಾಟಲು ಯತ್ನಿಸಬಾರದು ಎಂದು ಅಧಿಕಾರಿಗಳು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ನೀರಿನ ಮಟ್ಟ ಇಳಿಯುವವರೆಗೆ ಸುರಕ್ಷಿತ ಸ್ಥಳದಲ್ಲೇ ಉಳಿಯುವಂತೆ ಸ್ಥಳೀಯ ಆಡಳಿತ ಸಾರ್ವಜನಿಕರಿಗೆ ಮನವಿ ಮಾಡಿದೆ. ಮುಂದಿನ ಕೆಲ ದಿನಗಳವರೆಗೆ ಮಳೆ ಮುಂದುವರಿಯುವ ಸಾಧ್ಯತೆ ಇರುವುದರಿಂದ ಎಚ್ಚರಿಕೆಯಿಂದ ಇರಲು ಸೂಚಿಸಲಾಗಿದೆ.

## ಇಡೀ ವಾರ ಮಳೆ ಸಾಧ್ಯತೆ

**ಬೆಂಗಳೂರು:** ರಾಜ್ಯದ ವಿವಿಧೆಡೆ ಈ ವಾರಾಂತ್ಯದವರೆಗೂ ಭಾರೀ ಮಳೆಯಾಗುವ ಸಾಧ್ಯತೆ ಇದೆ. ಉತ್ತರ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ರೆಡ್ ಅಲರ್ಟ್ ಘೋಷಣೆ ಮಾಡಲಾಗಿದೆ ಎಂದು ರಾಜ್ಯ ವಿಪತ್ತು ನಿರ್ವಹಣಾ ಕೇಂದ್ರ ಸೂಚನೆ ನೀಡಿದೆ.



ಅಲ್ಲದೇ ಜುಲೈ 7 ರಿಂದ 11ರವರೆಗೆ ರಾಜ್ಯದ ಘಟ್ಟ ಪ್ರದೇಶದ ಒಂದು ಅಥವಾ ಎರಡು ಕಡೆಗಳಲ್ಲಿ ಭೂಕುಸಿತ ಸಂಭವಿಸುವ ಸಾಧ್ಯತೆಯೂ ಇದೆ".ಜುಲೈ 8ರಂದು ಬುಧವಾರ ಉತ್ತರ ಕನ್ನಡ, ಉಡುಪಿ, ಶಿವಮೊಗ್ಗ, ದಕ್ಷಿಣ ಕನ್ನಡ, ಕೊಡಗು, ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಒಂದೆರಡು ಕಡೆಗಳಲ್ಲಿ ಭಾರೀ ಮಳೆಯಾಗುವ ಸೂಚನೆ ಇದೆ. ಆರೆಂಜ್ ಅಲರ್ಟ್ ಘೋಷಣೆ ಮಾಡಲಾಗಿದೆ. 64 ಮಿ.ಮೀ ನಿಂದ 115 ಮಿ.ಮೀ ಭಾರೀ ಮಳೆ ಜತೆಗೆ ಅತಿ ಭಾರೀ ಮಳೆಯು 115 ಮಿ.ಮೀ ನಿಂದ 204 ಮಿ.ಮೀ ವರೆಗೂ ಆಗಬಹುದು.

## ಲಿಂಗಾಯತ ಸ್ವತಂತ್ರ ಧರ್ಮ ಮನ್ನಣೆ, ಅಲ್ಪಸಂಖ್ಯಾತ ಸ್ಥಾನಮಾನಕ್ಕೆ ಒತ್ತಾಯ

**ಶರಣ ಸಾಹಿತ್ಯ ಸಮ್ಮೇಳನದಲ್ಲಿ ಚನ್ನಬಸಪ್ಪ ಆಗ್ರಹ**

**ಬೆಂಗಳೂರು:** ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮ ಮತ್ತು ಅದರ ಅನುಯಾಯಿಗಳಿಗೆ ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗದಲ್ಲಿ ಅಲ್ಪಸಂಖ್ಯಾತ ಸಮುದಾಯದವರೆಂಬ ಮನ್ನಣೆ ದೊರಕಿಸಬೇಕು ಎಂದು ಸಾಹಿತಿ ಗೊ.ರು. ಚನ್ನಬಸಪ್ಪ ಆಗ್ರಹಿಸಿದರು.



ನಗರದ ಶ್ರೀ ಬಸವೇಶ್ವರ ಸುಜ್ಞಾನ ಮಂಟಪದಲ್ಲಿ ಮಂಗಳವಾರ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ 14ನೇ ಶರಣ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಾಗತಿಕ ಲಿಂಗಾಯತ ಮಹಾಸಭಾದ ನೇತೃತ್ವದಲ್ಲಿ ಪುಟ 2ಕ್ಕೆ

## ಗ್ರಾಪಂನಲ್ಲಿ ಸಹಾಯ ಕೇಂದ್ರ

**ಬೆಂಗಳೂರು:** ರಾಜ್ಯದ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಪ್ರತ್ಯೇಕವಾದ ಸಹಾಯ ಮತ್ತು ಸೌಲಭ್ಯ ಕೇಂದ್ರಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಈ ಕೇಂದ್ರಗಳಲ್ಲಿ ಶಾಶ್ವತ ವಾಸಸ್ಥಳ ದೃಢೀಕರಣ ಪ್ರಮಾಣ ಪತ್ರ ಪಡೆಯಲು ಅರ್ಜಿ ಸಲ್ಲಿಸಲು ಅನುಕೂಲವಾಗುವಂತೆ ಕಂಪ್ಯೂಟರ್, ಇಂಟರ್ ನೆಟ್, ಪ್ರಿಂಟರ್, ಸ್ಕ್ಯಾನರ್ ಸೌಲಭ್ಯ ಹೊಂದಿರಬೇಕು. ಅಲ್ಲದೇ ಆಸನ ವ್ಯವಸ್ಥೆ ಸೇರಿದಂತೆ ಅಗತ್ಯ ಸೌಲಭ್ಯ ಒದಗಿಸಬೇಕು ಎಂದು ಸೂಚಿಸಲಾಗಿದೆ.

ಸಹಾಯ ಮತ್ತು ಸೌಲಭ್ಯ ಕೌಂಟರ್ ಗಳಲ್ಲಿ ಪಂಚಮಿತ್ರ ಸಹಾಯವಾಣಿ ಸಂಖ್ಯೆ 8277506000 ಪ್ರದರ್ಶಿಸಬೇಕು. ಇವುಗಳನ್ನು ಗ್ರಾಮ ಪಂಚಾಯಿತಿಯಲ್ಲಿ ಕಾರ್ಯ ನಿರ್ವಹಿಸುವ ಡಾಟಾ ಎಂಟ್ರಿ ಆಪರೇಟರ್ ನಿರ್ವಹಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತರು ಹೊರಡಿಸಿರುವ ಆದೇಶದಲ್ಲಿ ಉಲ್ಲೇಖಿಸಲಾಗಿದೆ. ಪುಟ 2ಕ್ಕೆ

## ಕೆಆರ್‌ಎಸ್, ಹಾರಂಗಿ, ಕಬಿನಿ ಜಲಾಶಯಗಳ ಒಳಹರಿವು ಹೆಚ್ಚಳ

**ಮೈಸೂರು:** ಕೊಡಗು, ಹಾಸನ, ಕೇರಳದಲ್ಲಿ ಮಳೆ ಬಿರುಸು ಪಡೆದಿರುವ ಹಿನ್ನೆಲೆಯಲ್ಲಿ ಕಾವೇರಿ ಕೊಳ್ಳದ ನದಿಗಳಿಗೆ ಒಳಹರಿವು ಹೆಚ್ಚಾಗಿದೆ. ಮಳೆ ಹೀಗೆ ಮುಂದುವರಿದರೆ ಬೆಂಗಳೂರು, ಮೈಸೂರು, ಮಂಡ್ಯ ಸೇರಿ ದಂತೆ ಹಲವು ನಗರಗಳ ಕುಡಿಯುವ ನೀರಿನ ಆತಂಕ ನಿವಾರಣೆ ಆಗಲಿದೆ.





ಮಳೆ ಹೆಚ್ಚಳದಿಂದ ಕೆಆರ್‌ಎಸ್, ಹಾರಂಗಿ, ಕಬಿನಿ ಜಲಾಶಯಗಳಿಗೆ ನೀರು ಹರಿದು ಬರುತ್ತಿದೆ. ಕೃಷ್ಣರಾಜಸಾಗರ ಜಲಾಶಯದಲ್ಲಿ ಈಗ 11.91 ಟಿಸಿಎಂ(ಶೇ.24) ನೀರು ಸಂಗ್ರಹವಿದೆ. ಕಳೆದ ವರ್ಷ ಇದೇ ದಿನ 45.97 ಟಿಎಂಸಿ ನೀರು ಲಭ್ಯವಿತ್ತು. ಜಲಾಶಯದ ಗರಿಷ್ಠ ಮಟ್ಟ 49.45 ಟಿಎಂಸಿ. ಈಗ ಜಲಾಶಯಕ್ಕೆ ನೀರಿನ ಪುಟ 2ಕ್ಕೆ

## ಕೆ.ಆರ್.ಎಸ್.ನಿಂದ ತ.ನಾಡಿಗೆ ಕದ್ದು ಮುಚ್ಚಿ ನೀರು: ರೈತರ ಆಕ್ರೋಶ

**ಶ್ರೀರಂಗಪಟ್ಟಣ:** ಕೆಆರ್‌ಎಸ್ ಜಲಾಶಯದಿಂದ ತಮಿಳುನಾಡಿಗೆ ಕದ್ದುಮುಚ್ಚಿ ಕಾವೇರಿ ನೀರು ಹರಿಸಲಾಗಿದೆ ಎಂದು ಆರೋಪಿಸಿ ಭೂಮಿತಾಯಿ ಹೋರಾಟ ಸಮಿತಿ ರೈತರು ಕಾವೇರಿ ನದಿಗಿಳಿದು ಪ್ರತಿಭಟಿಸಿದರು.

ಪಟ್ಟಣದ ಸ್ನಾನಘಟ್ಟದ ಬಳಿ ಭೂಮಿತಾಯಿ ಹೋರಾಟ ಸಮಿತಿ ಹಿರಿಯ ಮುಖಂಡ ಕೆಎಸ್.ನಂಜುಂಡೇಗೌಡ ಹಾಗೂ ಸಮಿತಿ ಅಧ್ಯಕ್ಷ ಬಲ್ಲೇನಹಳ್ಳಿ ಕೃಷ್ಣೇಗೌಡ ನೇತೃತ್ವದಲ್ಲಿ ರೈತ ಕಾರ್ಯಕರ್ತರು ಕಾವೇರಿ ನದಿಗಿಳಿದು ರಾಜ್ಯ ಸರ್ಕಾರ ಹಾಗೂ ನೀರಾವರಿ ಇಲಾಖೆ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮಳೆ ಇಲ್ಲದೆ ರೈತ ಬೆಳೆದಿರುವ ಕಟಾವು ಹಂತರದ ಬೆಳೆಗಳಾದ ಕಬ್ಬು, ಬಾಳೆ, ರಾಗಿ ಸೇರಿದಂತೆ ಇತರೆ ಬೆಳೆಗಳು ನೀರಿಲ್ಲದೆ ಬೆಳೆಗಳು ಒಣಗುತ್ತಿವೆ. ಸ್ಥಳೀಯ ನಾಲೆಗಳಿಗೆ ನೀರು ಹರಿಸಿ, ಬೆಳೆ ಉಳಿಸಿಕೊಡುವಂತೆ



ರೈತರು ಪ್ರತಿ ದಿನ ಇಲಾಖೆಗಳ ಬಳಿ ಧರಣಿ ನಡೆಸಿದರೂ, ನಾಲೆಗಳಿಗೆ ನೀರು ಹರಿಸದ ಸರ್ಕಾರ ಇದೀಗ ಕದ್ದು ಮುಚ್ಚಿ ತಮಿಳುನಾಡಿಗೆ ನೀರು ಹರಿಸುತ್ತಿರುವುದು ರೈತ ಸಮುದಾಯಕ್ಕೆ ಸರ್ಕಾರ ಮಾಡುತ್ತಿರುವ ದ್ರೋಹವಾಗಿದೆ. ಕನಿಷ್ಟ ಪರಿಜ್ಞಾನವಿಲ್ಲದ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ರೈತರ ಹಿತ ಕಾಯುವ ಬದಲು ಉಡಾಫೆ ಉತ್ತರ ನೀಡುತ್ತಿದ್ದಾರೆ. ಈ ಸ್ಥಾನಕ್ಕೆ ಯೋಗ್ಯವಲ್ಲದ ಮುಖ್ಯ ಮಂತ್ರಿಯಾಗಿದ್ದಾರೆ ಎಂದು ಕಿಡಿಕಾರಿದರು. ಸಮಿತಿಯ ಅಧ್ಯಕ್ಷ ಕೃಷ್ಣೇಗೌಡ ಪುಟ 2ಕ್ಕೆ

### ಸಿಎಂ ಸತೀಶನ್ ಸೂಚನೆ

**ಭೂಕುಸಿತ ದುರಂತದ ಬಗ್ಗೆ ಮಾಹಿತಿ ಪಡೆದ ಸಿಎಂ ವಿ.ಡಿ ಸತೀಶನ್, ಇಬ್ಬರು ಸಚಿವರು ಕೂಡಲೇ ಘಟನಾ ಸ್ಥಳಕ್ಕೆ ತೆರಳಿ ನಿರ್ವಹಣೆ ಮಾಡುವಂತೆ ಸೂಚನೆ ನೀಡಿದ್ದಾರೆ. ಕೇರಳದಲ್ಲಿ ಕಳೆದ 24 ಗಂಟೆಯಲ್ಲಿ 26 ಸೆಂಟಿಮೀಟರ್ ಮಳೆಯಾಗಿದೆ. ಚೂರ್‌ಮಲಕ್ಕೆ ಸಂಚಾರ ಸ್ಥಗಿತಗೊಳಿಸಲಾಗಿದೆ. ನಿರಂತರ ಮಳೆ ಕಾರಣ ನಿನ್ನೆಯಿಂದ ಸುರಂಗ ಕಾಮಗಾರಿ ಸ್ಥಗಿತಗೊಳಿಸಲಾಗಿತ್ತು. ಸದ್ಯ ಮಣ್ಣು ಕುಸಿದ ಪ್ರದೇಶದಲ್ಲಿ ಅನೇಕ ವಾಹನಗಳೂ ಸಮಾಧಿಯಾಗಿರುವ ಸಾಧ್ಯತೆ ಇದೆ.**




# ವೈನಾಡಿನಲ್ಲಿ ಭೂಕುಸಿತ: ಮೂವರು ಸಾವು

## 30ಕ್ಕೂ ಹೆಚ್ಚು ಮಂದಿ ನಾಪತ್ತೆ | ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆ

**ವೈನಾಡು:** ಕೇರಳದ ವೈನಾಡು ಜಿಲ್ಲೆಯ ಕಾಲಡಿ ಬಳಿ ಮಂಗಳವಾರ ಭಯಾನಕ ರೀತಿಯಲ್ಲಿ ಭೂಕುಸಿತ ಸಂಭವಿಸಿದೆ. ಮೆಪ್ಪಾಡಿಯ ಕಾಲಡಿ ಸಂಭವಿಸಿದ ಭೂ ಕುಸಿತದಲ್ಲಿ ಮೂವರು ಮೃತಪಟ್ಟಿದ್ದಾರೆ.

ಅವಶೇಷಗಳಡಿ ಸಿಕ್ಕಿ 7 ಮಂದಿ ಗಾಯಗೊಂಡಿದ್ದಾರೆ. ಅಲ್ಲದೆ, 30ಕ್ಕೂ ಹೆಚ್ಚು ಮಂದಿ ನಾಪತ್ತೆಯಾಗಿದ್ದಾರೆ. ನಾಪತ್ತೆ ಆಗಿರುವವರ ರಕ್ಷಣಾ ಕಾರ್ಯ ನಡೆಯುತ್ತಿದೆ. ಇದರಿಂದ ಸಾವಿನ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆಯಿದೆ ಎನ್ನಲಾಗಿದೆ.

2 ವರ್ಷಗಳ ಹಿಂದೆ ಕೇರಳದ ವೈನಾಡಿನ ಚೂರಲ್ಮಲದಲ್ಲಿ ಸಂಭವಿಸಿದ್ದ ಭೂಕುಸಿತ ನೂರಾರು ಜನರ ಜೀವವನ್ನ ಆಹುತಿ ಪಡೆದುಕೊಂಡಿತ್ತು. ಈಗ ವಯನಾಡಿನಲ್ಲಿ ಮತ್ತೆ ದುರಂತ ಸಂಭವಿಸಿದೆ. ವಯನಾಡಿನ ಮೆಪ್ಪಾಡಿಯಲ್ಲಿ ಭಾರೀ ಮಳೆಯಿಂದಾಗಿ ಭೂಕುಸಿತ ಉಂಟಾಗಿದೆ.

ಮಿನಾಕ್ಷಿ ಸೇತುವೆ ಬಳಿ ನಿರ್ಮಾಣ ಹಂತದ ವೈನಾಡು–ಮಲ್ಲಾಪುರಂ ಸುರಂಗ ರಸ್ತೆ ಯೋಜನೆ



ನಡೆಯುತ್ತಿರುವ ಸ್ಥಳದಲ್ಲಿ ಸುನಾಮಿಯಂತೆ ಮಣ್ಣು ಮಿಶ್ರಿತ ಕೆಸರು ನುಗ್ಗಿಬಂದಿದೆ. ಭೂ ಕುಸಿತದ ರಭಸಕ್ಕೆ ಟ್ಯಾಂಕರ್ ಕೊಚ್ಚಿ ಬಂದಿದೆ. ಇದರಿಂದ ಭೀತಿಗೊಂಡ ಜನರು ತಮ್ಮ ಪ್ರಾಣ ಉಳಿಸಿಕೊಳ್ಳಲು ದಿಕ್ಕಾ ಪಾಲಾಗಿ ಓಡಿ ಹೋಗಿದ್ದಾರೆ. ಈ ವಿಡಿಯೋ ಸಾಮಾಜಿಕ ಪುಟ 2ಕ್ಕೆ

## ಮೊದಲ ಪುಟದಿಂದ

### ಬರ ಘೋಷಣೆ: ಸಿಎಂ ಡಿಕೆಶಿ

ಹಾಗೂ ತಮಿಳುನಾಡು, ಮಹಾರಾಷ್ಟ್ರಗಳಲ್ಲಿ ರೈತರ ಸಾಲ ಮನ್ನಾ ಮಾಡಿರುವ ಬಗ್ಗೆ ಕೇಳಿದಾಗ, ಎಲ್ಲಿಯ ಸಾಲ, ಯಾವ ಸಾಲ ಎಂಬುದನ್ನು ಪರಿಶೀಲನೆ ಮಾಡೋಣ ಎಂದು ಹೇಳಿದರು.

### ಮಳೆರಾಯನ ರೌದ್ರನರ್ತನ

ಮಳೆಯ ಕಾರಣ ಹಲವೆಡೆ ಭೂಕುಸಿತ, ನೀರು ನಿಲ್ಲುವುದು ಮತ್ತು ಅಪಘಾತಗಳು ಹೆಚ್ಚಾಗಿವೆ. ಮಳೆಯ ಹೊಡೆತಕ್ಕೆ ರೈಲು ಸಂಚಾರ ತೀವ್ರ ವಾಗಿ ಹದಗೆಟ್ಟಿದೆ. ಸೆಂಟ್ರಲ್ ಮತ್ತು ವೆಸ್ಟರ್ನ್ ರೈಲ್ವೆ ವ್ಯಾಪ್ತಿಯಲ್ಲಿ 200ಕ್ಕೂ ಹೆಚ್ಚು ರೈಲು ಸೇವೆ ಗಳಲ್ಲಿ ವ್ಯತ್ಯಯ ಉಂಟಾಗಿದೆ. 43 ರೈಲುಗಳ ಸಂಚಾರವನ್ನು ರದ್ದುಗೊಳಿಸಲಾಗಿದೆ.

### ಗ್ರಾಪಂನಲ್ಲಿ ಸಹಾಯ ಕೇಂದ್ರ

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಸಹಾಯ ಮತ್ತು ಸೌಲಭ್ಯ ಕೌಂಟರ್ ಗಳ ಕಾರ್ಯನಿರ್ವಹಣೆಯ ಒಟ್ಟಾರೇ ಉಸ್ತುವಾರಿ ನೋಡಿಕೊಳ್ಳಬೇಕು. ಪ್ರತಿ ಗ್ರಾಮ ಪಂಚಾಯಿತಿ ಯಲ್ಲಿ ಸಹಾಯ ಮತ್ತು ಸೌಲಭ್ಯ ಕೌಂಟರ್ ಗಳನ್ನು ಸ್ಥಾಪಿಸಲು ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿ ರ್ವಾಹಕ ಅಧಿಕಾರಿಗಳು ವೈಯಕ್ತಿಕ ಗಮನಹರಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

### ಬರ ನಿರ್ಲಕ್ಷ್ಯಿಸಿದರೆ ಕಠಿಣ ಕ್ರಮ

ಆತಂಕ ವ್ಯಕ್ತವಾಗುತ್ತಿದೆ. ರಾಜ್ಯದ ಪರಿಸ್ಥಿತಿ ಸಮಾಧಾನಕರವಾಗಿದೆ. ಅಂತರರಾಜ್ಯ ನೀರಿನ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ತೆಲಂಗಾಣ ಮತ್ತು ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಸಚಿವರೊಂದಿಗೆ ಐತಿಹಾಸಿಕ ಮಟ್ಟದ ಚರ್ಚೆ ನಡೆಸಿದ್ದೇವೆ ಎಂದು ತಿಳಿಸಿದರು.

ಕೃಷ್ಣ, ಕಾವೇರಿ ಮತ್ತು ಗೋದಾವರಿ ನದಿಗಳ ಜೋಡಣೆ ಯೋಜನೆಯನ್ನು ಸುಮಾರು ಒಂದು ಲಕ್ಷ ಕೋಟಿ ರೂಪಾಯಿ ವೆಚ್ಚದಲ್ಲಿ ಮುಂದುವರಿಸುವ ಪ್ರಸ್ತಾವನೆಗೆ ಕೇಂದ್ರ ಸರ್ಕಾರವೂ ಸಕಾರಾತ್ಮಕ ಸ್ಪಂದನೆ ನೀಡಿದೆ. ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮೀರಿ ರಾಜ್ಯದ ಜನರ ಹಿತಾಸಕ್ತಿ ರಕ್ಷಣೆ ಆದ್ಯತೆಯಾಗಿಸಿ ಒಟ್ಟಾಗಿ ಕೆಲಸ ಮಾಡಲು ತೀರ್ಮಾನಿಸಿದ್ದೇವೆ ಎಂದು ಡಿಕೆಶಿ ಹೇಳಿದರು.

### ವೈನಾಡಿನಲ್ಲಿ ಭೂಕುಸಿತ:

ಜಾಲತಾಣಗಳಲ್ಲಿ ವೈರಲ್ ಆಗಿದೆ. ಭೂ ಕುಸಿತದಿಂದ ಖಾಸಗಿ ಬಸ್ ಒಂದು ಮೀನಾಕ್ಷಿ ನದಿ ಬಿದಿದ್ದೆ. ನೀರಿನಲ್ಲಿ ಅರ್ಧಭಾಗ ಬಸ್ ಮುಳುಗಿದೆ. ಬಸ್ ನಲ್ಲಿದ್ದವರ ರಕ್ಷಣಾ ಕಾರ್ಯ ನಡೆಯುತ್ತಿದೆ. ಅಗ್ನಿಶಾಮಕ ಸಿಬ್ಬಂದಿ, ಪೊಲೀಸರು ಮತ್ತು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ತಂಡ ಸ್ಥಳಕ್ಕೆ ಧಾವಿಸಿವೆ. ರಕ್ಷಣಾ ಕಾರ್ಯ ಆರಂಭಿಸಿದೆ. ನಾಪತ್ತೆಯಾದವರಿಗಾಗಿ ಹುಡುಕಾಟ ನಡೆಸುತ್ತಿದೆ.

ಸುರಂಗ ನಿರ್ಮಾಣ ಕಾರ್ಯ ನಡೆಯುತ್ತಿದ್ದ ಸ್ಥಳದಲ್ಲಿ ಉಂಟಾದ ಭೂಕುಸಿತದ ಅವಶೇಷಗಳಡಿ ಸಿಲುಕಿದವರನ್ನು ಸ್ಥಳೀಯರು ರಕ್ಷಿಸಿದ್ದಾರೆ. ಘಟನೆಯಲ್ಲಿ 7ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಕೇರಳ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಹೇಳಿದೆ. ವೈನಾಡಿನಲ್ಲಿ ಭಾರತೀಯ ಹವಾಮಾನ ಇಲಾಖೆ ರೆಡ್ ಅಲರ್ಟ್ ಘೋಷಿಸಿದೆ.

### ದಸರಾ ಆನೆಗಳಿಗೆ ಇಸಿಜಿ ಪರೀಕ್ಷೆ

ಮಲದ ಮಾದರಿಗಳನ್ನು ಸಂಗ್ರಹಿಸಿ ವಿವಿಧ ಪ್ರಯೋಗಾಲಯಗಳಿಗೆ ಕಳುಹಿಸಲಾಗಿದೆ. ಶಿಬಿರಗಳಲ್ಲಿರುವ ಹೆಣ್ಣಾನೆಗಳ ಗರ್ಭಧಾರಣೆ ಪರೀಕ್ಷೆಯನ್ನು ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಮೂಲಕ ನಡೆಸಲಾಗುತ್ತಿದೆ. ಈ ಬಾರಿ ಮೊದಲ ಬಾರಿಗೆ ಆನೆಗಳ ಹೃದಯ ಆರೋಗ್ಯ ತಪಾಸಣೆಯನ್ನೂ ಕೈಗೊಳ್ಳಲಾಗುತ್ತಿದೆ.

ಪ್ರಯೋಗಾಲಯ ವರದಿಗಳು ಬಂದ ಬಳಿಕ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನೇತೃತ್ವದ ತಂಡ ವಿವಿಧ ಆನೆ ಶಿಬಿರಗಳಿಗೆ ಭೇಟಿ ನೀಡಿ ದಸರಾ ಆನೆಗಳ ಆಯ್ಕೆ ಪ್ರಕ್ರಿಯೆ ಆರಂಭಿಸಲಿದೆ. ಬಳಿಕ ತಾತ್ಕಾಲಿಕವಾಗಿ ಆಯ್ಕೆಯಾದ ಆನೆಗಳ ಪಟ್ಟಿಯನ್ನು ಮಾಹಿತಿಗಳೊಂದಿಗೆ ರಾಜ್ಯಮಟ್ಟದ ದಸರಾ ಆನೆಗಳ ಆಯ್ಕೆ ಸಮಿತಿಗೆ ಸಲ್ಲಿಸಲಾಗುವುದು.

ವಿಜಯದಶಮಿಯ ಜಂಬೂಸವಾರಿ ಮೆರವಣಿಗೆ ಕಳೆದ ವರ್ಷಕ್ಕಿಂತ ಸುಮಾರು 20 ದಿನ ತಡವಾಗಿ ನಡೆಯಲಿರುವುದರಿಂದ ದಸರಾ ಆನೆಗಳ ಆಯ್ಕೆ ಪ್ರಕ್ರಿಯೆಯೂ ಕಳೆದ ಸಾಲಿಗೆ ಹೋಲಿಸಿದರೆ ತಡವಾಗಿ ಆರಂಭವಾಗಲಿದೆ ಎಂದು ಮೈಸೂರು ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರಭುಗೌಡ ತಿಳಿಸಿದ್ದಾರೆ.

### ಹೆಣ್ಣು ಮಕ್ಕಳ ರಕ್ಷಣೆ, ಶಿಕ್ಷಣ ಹಾಗೂ ಸಬಲೀಕರಣದ ಕುರಿತು ಸಾರ್ವಜನಿಕರಲ್ಲಿ ಅರಿವು

# ಮಗಳನ್ನು ಉಳಿಸಿ, ಮಗಳನ್ನು ಓದಿಸಿ ಜಾಗೃತಿ ಜಾಥಾ

ಎಚ್.ಡಿ.ಕೋಟೆ: ಹೆಣ್ಣು ಮಕ್ಕಳ ರಕ್ಷಣೆ, ಶಿಕ್ಷಣ ಹಾಗೂ ಸಬಲೀಕರಣದ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಸವ್ವೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಬೇಟಿ ಬಚಾವೋ?ಬೇಟಿ ಪಢಾವೋ (ಮಗಳನ್ನು ಉಳಿಸಿ, ಮಗಳನ್ನು ಓದಿಸಿ) ಜಾಗೃತಿ ಕಾರ್ಯಕ್ರಮ ಹಾಗೂ ಜಾಥಾ ನಡೆಯಿತು.

ಸವ್ವೆ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಭೀಮಪ್ಪ ಮಾತನಾಡಿ, ಹೆಣ್ಣು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವುದು ಸಮಾಜದ ಅಭಿವೃದ್ಧಿಗೆ ಅತ್ಯಗತ್ಯವಾಗಿದೆ. ಗಂಡು?ಹೆಣ್ಣು ಎಂಬ ಭೇದಭಾವವನ್ನು ತೊರೆದು ಎಲ್ಲ ಮಕ್ಕಳಿಗೂ ಸಮಾನ ಅವಕಾಶಗಳನ್ನು ಕಲ್ಪಿಸ ಬೇಕು. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡುವ ಮೂಲಕ ಅವರನ್ನು ಸ್ವಾವಲಂಬಿಗಳನ್ನಾಗಿ ರೂಪಿಸಲು ಪೋಷಕರು ಹಾಗೂ ಸಮಾಜ ಕೈಜೋಡಿಸಬೇಕು ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೇಲ್ವಿಚಾರಕಿ ರಜಿತ ಮಾತನಾಡಿ, ಬೇಟಿ




ಬಚಾವೋ?ಬೇಟಿ ಪಢಾವೋ ಯೋಜೆಯು ಹೆಣ್ಣು ಮಕ್ಕಳ ರಕ್ಷಣೆ, ಶಿಕ್ಷಣ ಹಾಗೂ ಸಬಲೀಕರಣಕ್ಕೆ ಒತ್ತು ನೀಡುವ ಮಹತ್ವದ ರಾಷ್ಟ್ರೀಯ ಯೋಜನೆಯಾಗಿದೆ. ಹೆಣ್ಣು ಭ್ರೂಣ ಹತ್ಯೆ ತಡೆ, ಹೆಣ್ಣು ಮಕ್ಕಳ ಜನನ ಪ್ರಮಾಣ ಹೆಚ್ಚಳ, ಬಾಲಕಿಯರಿಗೆ ಸಮಾನ ಶಿಕ್ಷಣದ ಅವಕಾಶ ಕಲ್ಪಿಸುವುದು, ಮಹಿಳೆಯರ ಹಕ್ಕುಗಳ ಕುರಿತು ಜಾಗೃತಿ ಮೂಡಿಸುವುದು ಹಾಗೂ ಬಾಲ್ಯ ವಿವಾಹ ತಡೆಗೆ ಸಾರ್ವಜನಿಕರು ಕೈಜೋಡಿಸಬೇಕು ಎಂದು ಹೇಳಿದರು.

ಅಂಗನವಾಡಿ ಕಾರ್ಯಕರ್ತೆಯರು ಗರ್ಭಿಣಿ ಯರು ಹಾಗೂ ಕುಟುಂಬಗಳಲ್ಲಿ ಜಾಗೃತಿ ಮೂಡಿ ಸುವುದು, ಹೆಣ್ಣು ಮಗುವಿನ ಜನನ ಮತ್ತು ಶಿಕ್ಷಣದ ಮಹತ್ವ ತಿಳಿಸುವುದು, ಶಾಲೆ ಬಿಟ್ಟ ಬಾಲಕಿಯರನ್ನು ಪುನಃ ಶಾಲೆಗೆ ಸೇರಿಸಲು ಸಹಕರಿಸುವುದು ಸೇರಿದಂತೆ ಗ್ರಾಮ ಮಟ್ಟದಲ್ಲಿ ನಿರಂತರ ಜಾಗೃತಿ ಕಾರ್ಯ ಕ್ರಮಗಳನ್ನು ನಡೆಸುವ ಮೂಲಕ ಯೋಜನೆಯ ಯಶಸ್ಸಿಗೆ ಶ್ರಮಿಸಬೇಕು ಎಂದು ತಿಳಿಸಿದರು.

ಬಳಿಕ ಸವ್ವೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಜಾಗೃತಿ ಜಾಥಾ ನಡೆಸಲಾಯಿತು. ಜಾಥಾದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿನಿಯರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಮಹಿಳೆಯರು ಮಗಳನ್ನು ಉಳಿಸಿ, ಮಗಳನ್ನು ಓದಿಸಿ, ಹೆಣ್ಣು ಮಕ್ಕಳ ಶಿಕ್ಷಣವೇ ಸಮಾಜದ ಪ್ರಗತಿ, ಬಾಲ್ಯ ವಿವಾಹಕ್ಕೆ ಇಲ್ಲ ಎನ್ನೋಣ ಹೆಣ್ಣು?ಗಂಡು ಸಮಾನರು ಸೇರಿದಂತೆ ವಿವಿಧ ಜಾಗೃತಿ ಘೋಷಣೆಗಳನ್ನು ಕೂಗಿ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.

ಗ್ರಾ.ಪಂ ಕಾರ್ಯದರ್ಶಿ ಕಲಾವತಿ, ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮದ ಮಹಿಳೆಯರು, ಪ್ರೌಢಶಾಲೆಯ ವಿದ್ಯಾರ್ಥಿನಿಯರು ಹಾಗೂ ಸಾರ್ವಜನಿಕರು ಇದ್ದರು.

# ಸ್ತ್ರೀ, ಮಕ್ಕಳ ಸುರಕ್ಷತೆಗೆ ವಿಶೇಷ ಕ್ರಮ

## 24/7 ಆಪ್ತಸಮಾಲೋಚನೆ ಮತ್ತು ಸಖಿ ಕೇಂದ್ರದ ಸೇವೆಗಳು: ಎಡಿಸಿ ಆರ್. ಐಶ್ವರ್ಯ



ಮೈಸೂರು: ಕೌಟುಂಬಿಕ ಕಲಹ, ವರದಕ್ಷಿಣೆ ಕಿರುಕುಳ ಹಾಗೂ ಲೈಂಗಿಕ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ನೆರವಾಗಲು ಜಿಲ್ಲೆಯ ಪ್ರತಿ ತಾಲೂಕಿನಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ದಿನದ 24 ಗಂಟೆಯೂ ಉಚಿತ ಕಾನೂನು ಸಲಹೆ ಮತ್ತು ಆಪ್ತಸಮಾಲೋಚನೆ ನೀಡಲಾಗುತ್ತಿದೆ ಎಂದು ಅಪರ ಜಿಲ್ಲಾಧಿಕಾರಿ ಆರ್. ಐಶ್ವರ್ಯ ಅವರು ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವತಿಯಿಂದ ಅಪರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆಯೋಜಿಸಿದ್ದ ಜಿಲ್ಲಾಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸಖಿ ಒನ್ ಸ್ಟಾಪ್ ಸೆಂಟರ್ ಮೂಲಕ ದೌರ್ಜನ್ಯಕ್ಕೊಳಗಾದ ಮಹಿಳೆಯರು ಮತ್ತು ಹೆಣ್ಣುಮಕ್ಕಳಿಗೆ ಒಂದೇ ಸೂರಿನಡಿ ಉಚಿತ ಆಪ್ತಸಮಾಲೋಚನೆ, ಪೊಲೀಸ್ ಹಾಗೂ ಕಾನೂನು ನೆರವು, ವೈದ್ಯಕೀಯ ಸೇವೆ ಮತ್ತು 5 ದಿನಗಳ ತಾತ್ಕಾಲಿಕ ಆಶ್ರಯವನ್ನು ಒದಗಿಸಲಾಗುತ್ತಿದೆ ಎಂದು ವಿವರಿಸಿದರು.

**ಉದ್ಯೋಗಸ್ಥ ಮಹಿಳೆಯರಿಗೆ ವಸತಿ ಹಾಗೂ ಶಿಶುಪಾಲನಾ ಕೇಂದ್ರಗಳು**

ಗ್ರಾಮೀಣ ಪ್ರದೇಶಗಳಿಂದ ಬಂದು ನಗರದ ಕಾರ್ಖಾನೆ, ಹೋಟೆಲ್, ಆಸ್ಪತ್ರೆ ಹಾಗೂ ಗಾರ್ಮೆಂಟ್ಸ್ ಮುಂತಾದೆಡೆ ಕೆಲಸ ಮಾಡುವ ಮಹಿಳೆಯರ ಸುರಕ್ಷಿತ ವಾಸ್ತವ್ಯಕ್ಕಾಗಿ ಮೈಸೂರು ಜಿಲ್ಲೆಯ ಬೆಳವಾಡಿ ಹಾಗೂ ಹೂಟಗಳ್ಳಿಯಲ್ಲಿ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ. ಇದಲ್ಲದೆ, ಉದ್ಯೋಗಸ್ಥ ತಾಯಂದಿರ 6 ತಿಂಗಳಿಂದ 6 ವರ್ಷದೊಳಗಿನ ಮಕ್ಕಳ ಪೋಷಣೆಗಾಗಿ 4 ಶಿಶು ಪಾಲನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಇವುಗಳು ಜಿಲ್ಲಾಧಿಕಾರಿಗಳ ಕಚೇರಿ, ಜಿಲ್ಲಾ ಪಂಚಾಯತ್, ನಂಜನಗೂಡಿನ ಸ್ತ್ರೀಶಕ್ತಿ ಭವನ ಹಾಗೂ ಹುಣಸೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಮಕ್ಕಳಿಗೆ ಪೌಷ್ಟಿಕ ಆಹಾರ, ಪ್ರಾಥಮಿಕ ಶಿಕ್ಷಣ ಮತ್ತು ಬೌದ್ಧಿಕ ಬೆಳವಣಿಗೆಯ ಚಟುವಟಿಕೆಗಳನ್ನು ಒದಗಿಸುತ್ತಿವೆ ಎಂದು ತಿಳಿಸಿದರು.

**ಬಾಲಭವನಕ್ಕೆ ಭದ್ರತೆ ಗಣ್ಯರ ಉಪಸ್ಥಿತಿ**

ಬನ್ನಿಮಂಟಪದ ಆವರಣದಲ್ಲಿರುವ ಜಿಲ್ಲಾ ಬಾಲಭವನದ ಸುರಕ್ಷತೆಗಾಗಿ ಪೊಲೀಸ್ ಸಿಬ್ಬಂದಿ ನಿಯೋಜನೆ ಹಾಗೂ ಕಬ್ಬಿಣದ ಗೇಟ್ ಮತ್ತು ಬಾಗಿಲು ಅಳವಡಿಸಲು ಕ್ರಮ ವಹಿಸಲಾಗುತ್ತಿದೆ. ಜೊತೆಗೆ 2026-27ನೇ ಸಾಲಿಗೆ ಮಕ್ಕಳಿಗಾಗಿ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಬೇಸಿಗೆ ಶಿಬಿರಗಳನ್ನು ನಡೆಸುವಂತೆ ನಿರ್ದೇಶನ ನೀಡಿದರು. ಈ ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ನಾಗರಾಜ ಆರ್., ಜಿಲ್ಲಾ ನಿರೂಪಣಾಧಿಕಾರಿ ವಿಜಯಕುಮಾರ್, ಅಧಿಕಾರಿ ರಶ್ಮಿ ಎಸ್., ಅಪರ ಪೊಲೀಸ್ ಆಯುಕ್ತ ಎಲ್. ನಾಗೇಶ್ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಿರಾಜ್ ಅವರು ಉಪಸ್ಥಿತರಿದ್ದರು.

### ಮಾತೃವಂದನಾ ಯೋಜನೆ, ಜಾಗೃತಿ ಅಭಿಯಾನ

ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರ ಆರೋಗ್ಯ ಸುಧಾರಣೆಗಾಗಿ ನೇರ ನಗದು ವರ್ಗಾವಣೆ ಮೂಲಕ ಆರ್ಥಿಕ ನೆರವು ನೀಡಲಾಗುತ್ತಿದೆ. 150 ದಿನಗಳೊಳಗಾಗಿ ಅಂಗನವಾಡಿಯಲ್ಲಿ ನೋಂದಣಿ ಮಾಡಿಕೊಂಡರೆ 5,000 ರೂ.ಗಳನ್ನು ಎರಡು ಕಂತುಗಳಲ್ಲಿ (ಮೊದಲ ಕಂತು 3,000 ರೂ. ಹಾಗೂ ಎರಡನೇ ಕಂತು 2,000 ರೂ.) ನೀಡಲಾಗುತ್ತದೆ. ಎರಡನೇ ಮಗು ಹೆಣ್ಣಾಗಿದ್ದರೆ, ಹೆಣ್ಣು ಮಗುವಿನ ಜನನವನ್ನು ಪ್ರೋತ್ಸಾಹಿಸಲು ಒಟ್ಟಿಗೆ 6,000 ರೂ.ಗಳ ಸಹಾಯಧನವನ್ನು ಒಂದೇ ಕಂತಿನಲ್ಲಿ ನೀಡಲಾಗುತ್ತದೆ ಎಂದರು. ಅಲ್ಲದೆ, ಹೆಣ್ಣು ಭ್ರೂಣ ಹತ್ಯೆ ತಡೆ ಹಾಗೂ ಶಿಕ್ಷಣ ಉತ್ತೇಜನಕ್ಕಾಗಿ 'ಬೇಟಿ ಬಚಾವೋ, ಬೇಟಿ ಪಡಾವೋ' ಅಭಿಯಾನದಡಿ ಜೂನ್ 22, 2026 ರಿಂದ ಜಿಲ್ಲೆಯ ಎಲ್ಲಾ 255 ಗ್ರಾಮ ಪಂಚಾಯಿತಿಗಳಲ್ಲಿಯೂ ವ್ಯಾಪಕ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

### ಅಕ್ಕಪಡೆ ವಿಸ್ತರಣೆ-ಶಕ್ತಿ ಸದನ ಸ್ಥಾಪನೆಗೆ ಪ್ರಸ್ತಾವನೆ

ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗಾಗಿ ಸದ್ಯ ಜಿಲ್ಲೆಯಲ್ಲಿ ನಗರ ಹಾಗೂ ತಾಲೂಕು ವಿಭಾಗದಲ್ಲಿ ತಲಾ ಒಂದರಂತೆ ಎರಡು 'ಅಕ್ಕಪಡೆ' ತಂಡಗಳನ್ನು ನಿಯೋಜಿಸಲಾಗಿದ್ದು, ಇವು ಜನನಿಬಿಡ ಪ್ರದೇಶಗಳಲ್ಲಿ ಜಾಗೃತಿ ಮೂಡಿಸುತ್ತಿವೆ. ಪ್ರಸ್ತುತ ಹುಣಸೂರು ತಾಲೂಕಿಗೆ ಮತ್ತೊಂದು ಹೆಚ್ಚುವರಿ ಅಕ್ಕಪಡೆ ಮಂಜೂರು ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದೆ. ಕಷ್ಟಕರ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗೆ ಪುನರ್ವಸತಿ ಕಲ್ಪಿಸುವ 'ಶಕ್ತಿ ಸದನ' ಕೇಂದ್ರವು ಮೈಸೂರಿನಲ್ಲಿ ಇಲ್ಲದ ಕಾರಣ, ಮಂಡ್ಯ ಜಿಲ್ಲೆಯ ಪಾಂಡವಪುರದ ಜ್ಞಾನ ವಿಕಾಸ ಎಜುಕೇಷನ್ ಟ್ರಸ್ಟ್‌ನ ಕೇಂದ್ರವನ್ನು ಮೈಸೂರಿಗೆ ಸ್ಥಳಾಂತರಿಸಲು ಹಾಗೂ ನಂಜನಗೂಡು ತಾಲೂಕಿಗೂ ಹೊಸದಾಗಿ ಶಕ್ತಿ ಸದನ ಮಂಜೂರು ಮಾಡುವಂತೆ ಪ್ರಧಾನ ಕಚೇರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

### ಒಳಹರಿವು ಹೆಚ್ಚಳ

ಒಳ ಹರಿವು 5734 ಕ್ಯುಸೆಕ್ ಇದೆ. 777 ಕ್ಯುಸೆಕ್ ನೀರು ಹೊರ ಹರಿಸಲಾಗುತ್ತಿದೆ. ಜಲಾಶಯದಲ್ಲಿ 82.45 ಅಡಿ ನೀರು ಸಂಗ್ರಹವಿದೆ. ಜಲಾಶಯದಲ್ಲಿ 124.80 ಅಡಿ ನೀರು ಸಂಗ್ರಹಿಸುವ ಅವಕಾಶವಿದೆ. ಕಳೆದ ವರ್ಷ ಇದೇ ದಿನ 122.25 ಅಡಿ ನೀರಿತ್ತು

ಕೊಡಗು ಜಿಲ್ಲೆಯ ಹಾರಂಗಿ ಜಲಾಶಯದಲ್ಲಿ ಸದ್ಯ 3.87 ಟಿಸಿಎಂ (ಶೇ 45) ನೀರು ಸಂಗ್ರಹವಿದೆ. ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 6.64 ಟಿಎಂಸಿ ನೀರು ಲಭ್ಯವಿತ್ತು. ಜಲಾಶಯದ ಗರಿಷ್ಠ ಮಟ್ಟ 8.50 ಟಿಎಂಸಿ. ಈಗ ಜಲಾಶಯಕ್ಕೆ ನೀರಿನ ಒಳ ಹರಿವು 1657 ಕ್ಯುಸೆಕ್ ಇದೆ. 180 ಕ್ಯುಸೆಕ್ ನೀರು ಹೊರ ಹರಿಸಲಾಗುತ್ತಿದೆ. ಜಲಾಶಯದಲ್ಲಿ 2837.12 ಅಡಿ ನೀರು ಸಂಗ್ರಹವಿದೆ. ಜಲಾಶಯದಲ್ಲಿ 2859 ಅಡಿ ನೀರು ಸಂಗ್ರಹಿಸುವ ಅವಕಾಶವಿದ್ದು, ಕಳೆದ ವರ್ಷ ಇದೇ ದಿನ 2853.25 ಅಡಿ ನೀರಿತ್ತು. ಮೈಸೂರು ಜಿಲ್ಲೆಯ ಕಬಿನಿ ಜಲಾಶಯದಲ್ಲಿ ಸದ್ಯ 7.08 ಟಿಸಿಎಂ (ಶೇ.36) ನೀರು ಲಭ್ಯವಿದೆ. ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 17.61 ಟಿಎಂಸಿ ನೀರು ಸಂಗ್ರಹವಿತ್ತು. ಜಲಾಶಯದ ಗರಿಷ್ಠ ಮಟ್ಟ 19.52 ಟಿಎಂಸಿ. ಸದ್ಯ ಜಲಾಶಯಕ್ಕೆ ನೀರಿನ ಒಳ ಹರಿವು 4394 ಕ್ಯುಸೆಕ್ ಇದೆ. ಹೊರ ಹರಿವು 500 ಕ್ಯುಸೆಕ್ ಇದೆ. ಜಲಾಶಯದಲ್ಲಿ 2259.32 ಅಡಿ ನೀರು ಸಂಗ್ರಹವಿದೆ. ಜಲಾಶಯದಲ್ಲಿ 2284 ಅಡಿ ನೀರು ಸಂಗ್ರಹಿಸುವ ಅವಕಾಶವಿದ್ದು, ಕಳೆದ ವರ್ಷ ಇದೇ ದಿನ 2280.79 ಅಡಿ ನೀರಿತ್ತು.

### ಸ್ಥಾನಮಾನಕ್ಕೆ ಒತ್ತಾಯ

ನಾಡು- ಹೊರನಾಡುಗಳ ಬಸವ ಧರ್ಮಾನುಯಾಯಿಗಳು ನಡೆಸಿರುವ ಹೋರಾಟವನ್ನು ಪರಿಗಣಿಸಿ ಸ್ವತಂತ್ರ ಧರ್ಮದ ಸ್ಥಾನ ಸಿಗಬೇಕು ಎಂದು ಹೇಳಿದರು. ಬಸವಣ್ಣ ವೈದಿಕ ಧರ್ಮದ ಮತ್ತು ಜಾತಿ ಜಾಡ್ಯದ ಸಮಾಜ ವ್ಯವಸ್ಥೆಯನ್ನು ಧಿಕ್ಕರಿಸಿ, ಧಾರ್ಮಿಕ ಮತ್ತು ಸಾಮಾಜಿಕ ಸಮಾನತೆ ಘೋಷಿಸಿದರು. ಶತಮಾನಗಳಿಂದ ಸನಾತನಿಗಳೆನ್ನುವವರು ಆಚರಿಸುತ್ತಿದ್ದ ಅಸ್ಪೃಶ್ಯತೆಯ ಅನಿಷ್ಟವನ್ನು ತೊಡೆದುಹಾಕಲು ಪ್ರಯತ್ನಿಸಿದರು. ಕಾಯಕ-ದಾಸೋಹದ ಮೂಲಕ ಸಹಬಾಳ್ವೆ, ವರ್ಗ-ವರ್ಣ ಭೇದವಿಲ್ಲದ 'ಅನುಭವ ಮಂಟಪ ಸ್ಥಾಪಿಸಿದರು' ಎಂದು ಸ್ಮರಿಸಿದರು. ಸಂಪ್ರದಾಯ ವ್ಯವಸ್ಥೆ ಬದಲು ಶರಣರು ಪ್ರಗತಿಪರ ಪರ್ಯಾಯ ವ್ಯವಸ್ಥೆ ನೆಲೆಗೊಂಡಿದ್ದರಿಂದ ಸಹಸ್ರಾರು ವರ್ಷದ ಮೌನ ಮುರಿದು ದೀನ- ದಲಿತರು ಮುಕ್ತವಾಗಿ ದನಿಮಾಡತೊಡಗಿದರು. ಶರಣರ ಆಂದೋಲನದಿಂದಲೇ ಕನ್ನಡದ ನೆಲದಲ್ಲಿ ದಲಿತರ ದನಿ ಮೊದಲು ಕೇಳಿ ಬಂದಿತ್ತು ಎಂದರು. ಸಚಿವ ಎಂ.ಬಿ.ಪಾಟೀಲ ಮಾತನಾಡಿದರು. ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಪಾಲ್ಗೊಂಡಿದ್ದರು.

# ಮೀಸಲಾತಿ ನಮ್ಮ ಹಕ್ಕು, ನಮಗೆ ಕೊಡಲಿ

## ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿಕೆ | ಸಾಮಾಜಿಕ ನ್ಯಾಯಕ್ಕಾಗಿ ಜಾಗೃತಿ ಸಮಾವೇಶ



ಮೈಸೂರು: ಪರಿಶಿಷ್ಟ ಪಂಗಡಕ್ಕೆ ಜನಸಂಖ್ಯೆಗೆ ಅನುಗುಣವಾಗಿ ಸಂವಿಧಾನಬದ್ಧವಾಗಿ ನೀಡಬೇಕಾಗಿರುವ ಮೀಸಲಾತಿ ನಮ್ಮ ಹಕ್ಕು, ನಮ್ಮ ಹಕ್ಕನ್ನು ಕಳೆದುಕೊಂಡರೆ ಪ್ರಶ್ನೆ ಮಾಡಲು ಆಗುವುದಿಲ್ಲ. ಎಂತಹ ಪರಿಸ್ಥಿತಿಯಿದ್ದರೂ ನಮಗೆ ಇರುವ ಮೀಸಲಾತಿಯನ್ನು ಕೊಡಲೇಬೇಕು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದರು.

ಭಾರತೀಯ ಜನತಾ ಪಾರ್ಟಿ ಎಸ್.ಟಿ.ಮೋರ್ಚಾ ವತಿಯಿಂದ ಮಂಗಳವಾರ ನಗರದ ಬಲ್ಲಾಳ ವೃತ್ತದ ಖಾಸಗಿ ಸಭಾಂಗಣದಲ್ಲಿ ಮಂಗಳವಾರ ನಡೆದ ಸಾಮಾಜಿಕ ನ್ಯಾಯಕ್ಕಾಗಿ ಜಾಗೃತಿ ಸಮಾವೇಶ ಕಾರ್ಯಕ್ರಮದಲ್ಲಿ ಮಾತನಾಡಿದರು. ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ವರದಿಯಂತೆ ಶೇ.3ರಿಂದ ಶೇ.7ಕ್ಕೆ ಮೀಸಲಾತಿ ಪ್ರಮಾಣವನ್ನು ಹೆಚ್ಚು ಮಾಡಿ ಬಸವರಾಜ ಬೊಮ್ಮಾಯಿ ಸರ್ಕಾರ ಆದೇಶ ಹೊರಡಿಸಿತ್ತು. ಈಗ ಇಬ್ಬರು ಖಾಸಗಿ ವ್ಯಕ್ತಿಗಳು ನ್ಯಾಯಾಲಯದ ಮೊರೆ ಹೋಗಿದ್ದರಿಂದ ಈಗ ತಡೆಯಾಜ್ಞೆ ದೊರೆತಿದೆ. ಸರ್ಕಾರದ ಪರ ವಕೀಲರು ನ್ಯಾಯಾಲಯಕ್ಕೆ ಹಾಜರಾಗಿ ಸಮರ್ಪಕವಾದ ಮಾಹಿತಿ, ದಾಖಲೆಗಳನ್ನು ಒದಗಿಸಲು ಸಾಧ್ಯವಾಗದೆ ಕೈ ಚೆಲ್ಲಿ ಕುಳಿತಿದ್ದಾರೆ. ಇಂದು ನಮ್ಮ ಸಮುದಾಯ, ಸಮುದಾಯದ ಯುವಕರು ಉಸಿರಾಡಬೇಕಾದರೆ, ಬದುಕಬೇಕಾದರೆ ನಮಗೆ ಮೀಸಲಾತಿ ಬೇಕು. ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನವನ್ನು ಜಾರಿಗೆ ತರುವ ಸಮಯದಲ್ಲೇ ಜನಸಂಖ್ಯೆ ಆಧಾರದ ಮೇಲೆ ಮೀಸಲಾತಿಯನ್ನು ಕೊಡಬೇಕು ಎಂದು ತಿಳಿಸಿದ್ದರು. ಬೇರೆ ಮೀಸಲಾತಿಯ ಜತೆ ನಮ್ಮ ಮೀಸಲಾತಿಯನ್ನು ಹೋಲಿಸಲು ಹೋಗಬೇಡಿ ಎಂದರು.

ರಾಜ್ಯ ಸರ್ಕಾರ 56 ಸಾವಿರ ಹುದ್ದೆಗಳನ್ನು ಕರೆದಿದ್ದಾರೆ. ಮೀಸಲಾತಿ ಶೇ.7ರಷ್ಟು ಇದ್ದಿದ್ದರೆ ಎಷ್ಟು ಹುದ್ದೆಗಳನ್ನು ಪಡೆದುಕೊಳ್ಳಬಹುದಿತ್ತು. ಆದರೆ ನಮ್ಮ ಮೀಸಲಾತಿಯನ್ನು ಶೇ.7 ರಿಂದ ಶೇ.3ಕ್ಕೆ ಇಳಿಸಿದ್ದಾರೆ.

> ಯಾವುದೇ ಸರ್ಕಾರ ಇರಲಿ ಆದರೆ ನಮ್ಮ ಸಮಾಜ ಒಗ್ಗಟ್ಟಿನಿಂದ ಇರಬೇಕು. ನಮ್ಮ ಸಮಾಜದ ಒಗ್ಗಟ್ಟು ಮನಸ್ಸು ಮಾಡಿದರೆ ಮಾತ್ರ ಸರ್ಕಾರ ನಮ್ಮ ಕಡೆ ನೋಡುತ್ತದೆ ಹಾಗೂ ಸ್ಪಂದಿಸುತ್ತದೆ. ಎಸ್ಸಿ, ಎಸ್ಟಿಗೆ ಪದೇ ಪದೇ ಅನ್ಯಾಯವಾಗುತ್ತಿದೆ. ಕಾಂಗ್ರೆಸ್ ನಾಯಕರು ತಪ್ಪು ಹೇಳಿಕೆ ನೀಡಿ ಜನರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಸರ್ಕಾರದ ಬಗ್ಗೆ ಮೂರು ತಿಂಗಳು ಮಾತನಾಡಲ್ಲ ಎಂದಿದ್ದೇನೆ. ಈಗ ಒಂದು ತಿಂಗಳು ಕಳೆದಿದೆ. ಇನ್ನೂ ಎರಡು ತಿಂಗಳ ಬಳಿಕ ಮಾತನಾಡುತ್ತೇನೆ.
>
> – **ರಮೇಶ್ ಜಾರಕಿಹೊಳಿ** ಮಾಜಿ ಸಚಿವ

ಈಗ ಕೊಟ್ಟಿರುವ ಶೇ.3ರಷ್ಟು ಮೀಸಲಾತಿಯಲ್ಲಿ ಏನು ಮಾಡಲು ಸಾಧ್ಯವಾಗುತ್ತದೆ ಎಂದು ಒಮ್ಮೆ ಯೋಚಿಸಿ. ಬಹಳಷ್ಟು ಮಂದಿ ಯುವಕರು ಓದಿಕೊಂಡಿದ್ದರೂ ಉದ್ಯೋಗದಿಂದ ವಂಚಿತರಾಗುತ್ತಿದ್ದಾರೆ. ನಮಗೆ ಕೊಟ್ಟಿರುವ ಶೇ.3ರಷ್ಟು ಮೀಸಲಾತಿಯಲ್ಲಿ ಅವರನ್ನು ಹೇಗೆ ಸಮಾಧಾನ ಮಾಡಲು ಸಾಧ್ಯ ಎಂದು ಪ್ರಶ್ನಿಸಿದರು. ಮೀಸಲಾತಿಗಾಗಿ ಕಳೆದ 30 ವರ್ಷಗಳಿಂದ ಹೋರಾಟ ಮಾಡಿಕೊಂಡು ಬರಲಾಗಿದೆ. ಈ ಹೋರಾಟದಲ್ಲಿ ಅನೇಕರು ಜೀವ ಕೊಟ್ಟಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಇಲ್ಲಿನ ರಾಜಕೀಯ ನಾಯಕರ ಮನವಿಯಂತೆ ಮೈಸೂರು ಮತ್ತು ಚಾಮರಾಜನಗರ ಭಾಗದ ಪರಿವಾರ, ತಳವಾರ ಸಮುದಾಯಗಳನ್ನು ಪರಿಶಿಷ್ಟ ಪಂಗಡಕ್ಕೆ (ಎಸ್ಸಿ) ಸೇರಿಸುವ ಕೆಲಸ ಮಾಡಿದರು ಎಂದು ತಿಳಿಸಿದರು.

ಶಾಸಕ ರಾಜೂಗೌಡ ಮಾತನಾಡಿ, ಬಾಬಾಸಾಹೇಬರ ಸಂವಿಧಾನವನ್ನು ಬದಲಾಯಿಸುವ ಶಕ್ತಿ ಯಾರಿಗೂ ಇಲ್ಲ. ಆದರೆ ಮೀಸಲಾತಿ ಪರ ಎನ್ನುವ ಕಾಂಗ್ರೆಸ್ ಪಕ್ಷದವರು ಎಸ್‌ಟಿ ಮೀಸಲಾತಿ ಇಳಿಸಿ ಅಂಬೇಡ್ಕರ್ ಉದ್ದೇಶವನ್ನು ಹಾಳು ಮಾಡಿದ್ದಾರೆ. ಬಿಜೆಪಿ ಸರ್ಕಾರ 7ಕ್ಕೆ ಏರಿಸಿದ ಎಸ್‌ಟಿ ಮೀಸಲಾತಿಯನ್ನು 3ಕ್ಕೆ ಇಳಿಸಿ ಅನ್ಯಾಯಮಾಡಿದರು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸತೀಶ್ ಜಾರಕಿಹೊಳಿ ಅವರನ್ನು ಪಕ್ಷದ ಅಧ್ಯಕ್ಷರನ್ನಾಗಿಯೂ ಮಾಡಲಿಲ್ಲ. ಈಗಲಾದರೂ ಅವರು ಸಮುದಾಯದ ಪರ ಕೆಲಸ ಮಾಡದಿದ್ದರೆ ಮುಂದೆ ಮುಖ್ಯಮಂತ್ರಿಯಾಗುವುದೂ ಕನಸು. ಮೀಸಲಾತಿ ಹೆಚ್ಚಿಸಿ ಸಮಾಜ ಇರಿಸಿರುವ ನಂಬಿಕೆಯನ್ನು ಉಳಿಸಿಕೊಳ್ಳದಿದ್ದರೆ ಅವರ ಅಸ್ತಿತ್ವವೂ ಉಳಿಯುವುದಿಲ್ಲ ಎಂದರು.

ಮಾಜಿ ಮೇಯರ್ ಶಿವಕುಮಾರ್ ಮಾತನಾಡಿ, ಸಿದ್ದರಾಮಯ್ಯ ಸಾಮಾಜಿಕ ನ್ಯಾಯಕ್ಕೆ ಅನ್ಯಾಯಕಾರ. ಎಸ್‌ಟಿ ಮೀಸಲಾತಿ ಕಾನೂನು ಹೋರಾಟದಲ್ಲಿ ಸರ್ಕಾರದಿಂದ ಸೂಕ್ತ ವಾದ ಮಂಡಿಸಲಿಲ್ಲ, ಅದೇ, ಮುಡಾ ಹಗರಣದಲ್ಲಿ ದೆಹಲಿಯಿಂದ ವಕೀಲರನ್ನು ಕರೆಸಿದರು, ಅವರ ಸ್ವಾರ್ಥ ಪ್ರೇರಣೆಯಿಂದ ಮೂಲೆಗುಂಪಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಎಸ್.ಟಿ.ಮೋರ್ಚಾ ಅಧ್ಯಕ್ಷ ಬಂಗಾರು ಹನು ಮಂತು, ಮಾಜಿ ಅಧ್ಯಕ್ಷ ತಿಪ್ಪರಾಜು ಹವಾಲ್ದಾರ್, ಎನ್.ಮಹೇಶ್, ಶಾಸಕ ರಾಜೂಗೌಡ, ಪಿ.ವಿ.ನಾಯಕ್, ಎಸ್.ವಿ.ರಾಮಚಂದ್ರ, ಪ್ರತಾಪ ಗೌಡ ಪಾಟೀಲ್, ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ, ಸಿದ್ದರಾಜು, ಮಾಜಿ ಮೇಯರ್ ಶಿವಕುಮಾರ್, ಗಂಗಾಧರ ನಾಯಕ, ಸಿದ್ದರಾಜು, ರಾಜ್ಯ ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ಅನಿಲ್ ಕುಮಾರ್, ಓಬಳೇಶ್, ಮಂಜುಳಾ, ಸುಬ್ಬಣ್ಣ, ನಾಗೇಂದ್ರ, ಬಸವರಾಜು, ಮಲ್ಲೇಶ್, ಆರ್.ಸುಂದ್ರಣ್ಣ, ಚಂದ್ರು, ರಾಮಕೃಷ್ಣ, ನವೀನ್ ಕುಮಾರ್, ವಾದಿರಾಜ್, ಗರ ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ ರಾಮಕೃಷ್ಣ,ಪ್ರಧಾನ ಕಾರ್ಯದರ್ಶಿ ಕೆ.ನಾಗೇಶ್ ನಾಯಕ, ಕೃಷ್ಣಕುಮಾರ್,ಎಸ್ ಮಹೇಶ್ ಕುಮಾರ್, ರಾಜ್ಯ ಸಮಿತಿಯ ಸದಸ್ಯ ಮಂಜುನಾಥಪುರಂ ಎಂ.

### ಸಿದ್ದರಾಮಯ್ಯರನ್ನು ಮೂಲೆಗುಂಪು ಮಾಡಿದ ಕಾಂಗ್ರೆಸ್

**ಮೈಸೂರು:** ಸಿದ್ದರಾಮಯ್ಯ ಅವರಿಂದ ಅಧಿಕಾರ ಪಡೆಯುವರೆಗೆ ಅತಿಯಾಗಿ ಓಲೈಸಿದ ಕಾಂಗ್ರೆಸ್ ಈಗ ಅವರನ್ನು ಕಾವೇರಿ ನಿವಾಸದಲ್ಲಿ ಕೂಡಿ ಹಾಕಿ ಮೂಲೆಗುಂಪು ಮಾಡುತ್ತಿದ್ದಾರೆ ಎಂದು ಮಾಜಿ ಸಚಿವ ಶ್ರೀರಾಮುಲು ಹೇಳಿದರು.

ನಗರದ ಬಿಜೆಪಿ ಕಚೇರಿಯಲ್ಲಿಂದು ಮಾಧ್ಯಮಗಳ ಜೊತೆ ಮಾತನಾಡಿದ ಅವರು, ದೇವರಾಜ ಅರಸು ಅವರಿಗೆ ಕಾಂಗ್ರೆಸ್ ಮೋಸ ಮಾಡಿದಂತೆ ಸಿದ್ದರಾಮಯ್ಯ ಅವರಿಗೂ ಮೋಸ ಮಾಡಿದೆ. ಅಧಿಕಾರ ಹಸ್ತಾಂತರದ ಬಳಿಕ ಸಿದ್ದರಾಮಯ್ಯ ಅವರನ್ನು ಸಂಪೂರ್ಣ ಮೂಲೆಗುಂಪು ಮಾಡಿದ್ದಾರೆ. ಅವರ ಅಶೀರ್ವಾದದಿಂದ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಈಗ ಅವರನ್ನೇ ಕಾವೇರಿ ನಿವಾಸದಲ್ಲಿ ಕೂಡಿಹಾಕಿದೆ. ಸಿದ್ದರಾಮಯ್ಯ ಈಗ ಲೆಕ್ಕಕ್ಕೆ ಇಲ್ಲದ ಮನುಷ್ಯ ಎಂಬ ರೀತಿ ವರ್ತಿಸಲಾಗುತ್ತಿದೆ. ಅಧಿಕಾರ ತೆಗೆದುಕೊಳ್ಳುವ ತನಕ ಸಿದ್ದರಾಮಯ್ಯ ಅವರನ್ನು ಅತಿಯಾಗಿ ಓಲೈಸಿದರು. ಒಂದೇ ಒಂದು ಕಾರ್ಯಕ್ರಮಕ್ಕೂ ಸಿದ್ದರಾಮಯ್ಯ ಅವರನ್ನು ಕರೆಯುತ್ತಿಲ್ಲ. ಸಿದ್ದರಾಮಯ್ಯ ಅವರು ಈಗ ಬೇಕಾಗಿಲ್ಲ. ಸಿಎಂ ಮನಸ್ಸು ಮಾಡಿದರೆ ಕೆಂಪೇಗೌಡ ಜಯಂತಿಯಲ್ಲಿ ಸಿದ್ದರಾಮಯ್ಯನವರ ಫೋಟೋ ಹಾಕಿಸಬಹುದಿತ್ತು. ಕಾಂಗ್ರೆಸ್ 2023ರಲ್ಲಿ ಅಧಿಕಾರಕ್ಕೆ ಬಂದಿದ್ದು ಸಿದ್ದರಾಮಯ್ಯ ಅವರ ಆಶೀರ್ವಾದದಿಂದ. ಈಗ ಅದೇ ಜನ 2028ಕ್ಕೆ ಜನ ಪಾಠ ಕಲಿಸುತ್ತಾರೆ ಎಂದರು.

**ಯತೀಂದ್ರ ಖಾತೆ ಬಿಡಲಿ**

ಯತೀಂದ್ರ ಅವರಿಗೆ ನಗರಾಭಿವೃದ್ಧಿ ಖಾತೆ ಏಕೆ ಎಂದು ಚರ್ಚೆ ಶುರು ಮಾಡಿರುವುದೇ ಕಾಂಗ್ರೆಸ್ನ ಒಂದು ಗುಂಪು. ಕೆಲವರಿಗೆ ಯತೀಂದ್ರ ಸಿದ್ದರಾಮಯ್ಯ ಆ ಖಾತೆಯಲ್ಲಿರುವುದು ಇಷ್ಟ ಇಲ್ಲ. ಮುಡಾ ಹಗರಣದಲ್ಲಿ ಯತೀಂದ್ರ ಕುಟುಂಬದ ಮೇಲೆ ಆರೋಪ ಇದೆ. ಹೀಗಾಗಿ ಯತೀಂದ್ರ ನಗರಾಭಿವೃದ್ಧಿ ಖಾತೆ ವಹಿಸಿಕೊಂಡಿರುವುದು ಸರಿಯಲ್ಲ. ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಯತೀಂದ್ರ ಆ ಖಾತೆ ಬಿಡಬೇಕು. ಈ ಚರ್ಚೆ ಕಾಂಗ್ರೆಸ್ನಿಂದಲೇ ಬಂದಿರುವ ಕಾರಣ ಕಾಂಗ್ರೆಸ್ ಒಳಗಡೆ ಬೇರೆ ಬೆಳವಣಿಗೆ ನಡೆಯುತ್ತಿರಬಹುದೆಂದರು.

ಸಿಎಂಗೆ ಬೆಂಗಳೂರು ಅಷ್ಟೇ ಸಾಕಾಗಿದೆ. ಬೆಂಗಳೂರು ಇದ್ದರೆ ರಾಜ್ಯ ಇದ್ದಂತೆ ಎಂಬ ಭ್ರಮೆಯಲ್ಲಿ ದ್ದಾರೆ. ಈ ಸರ್ಕಾರಕ್ಕೆ ನಾಚಿಕೆ, ಮಾನ, ಮರ್ಯಾದೆ ಏನೂ ಇಲ್ಲ. ಡಿ.ಕೆ.ಶಿವಕುಮಾರ್ ಅಧಿಕಾರಕ್ಕೆ ಬಂದು ಒಂದು ತಿಂಗಳಾದರೂ ಬೆಂಗಳೂರು ಬಿಟ್ಟು ಹೊರ ಬರುತ್ತಿಲ್ಲ. ನಿನ್ನೆ ಮಾತ್ರ ಕಲಬುರ್ಗಿಗೆ ಹೋಗಿದ್ದಾರೆ. ರಾಜ್ಯದಲ್ಲಿ ಅತಿವೃಷ್ಟಿ-ಅನಾವೃಷ್ಟಿ ಇದೆ. ಕನಕೋತ್ಸವ ದಲ್ಲಿ ಮುಳುಗಿದ್ದಾರೆ. ಈ ವೇಳೆ ಕನಕೋತ್ಸವ ಬೇಕಾ ಗಿತ್ತಾ? ಎಂದು ಪ್ರಶ್ನಿಸಿದ ಶ್ರೀರಾಮುಲು, ಕಂದಾಯ ಸಚಿವರು ಎಲ್ಲಿದ್ದಾರೆ, ಏನು ಮಾಡುತ್ತಿದ್ದಾರೆ ಎಂಬುದೇ ಗೊತ್ತಾಗುತ್ತಿಲ್ಲ. ಅಧಿಕಾರಿಗಳನ್ನು ಜನರ ಬಳಿಗೆ ಕಳು ಹಿಸಿ ಕೆಲಸ ಮಾಡಿಸಬೇಕು. ಆದರೆ, ಸಚಿವರು ನನಗೂ ಇದಕ್ಕೂ ಸಂಬಂಧ ಇಲ್ಲ ಎಂಬ ರೀತಿಯಲ್ಲಿದ್ದಾರೆ ಎಂದು ಹೇಳಿದರು.

# ಪಿಎಸಿಎಸ್‌ನ ಸಿಇಓ ಬಸವಲಿಂಗಪ್ಪ ಅವರಿಗೆ ಕಿಡ್ನಿ ದಾನ

**ಚನ್ನಪಟ್ಟಣ:** ಇಂದು ತನ್ನ ಗಂಡನ ಆಸ್ತಿ, ಆತ ಹೊಂದಿರುವ ಹಣವನ್ನು ನೋಡುವ ಕೆಲ ಪತ್ನಿಯರ ನಡುವೆ ತನ್ನ ದೇಹದ ಅಂಗವನ್ನೇ ಕತ್ತರಿಸಿ ಪತಿಗೆ ಜೀವದಾನ ಮಾಡಿರುವ ಹುಣಸನಹಳ್ಳಿ ಪಿಎಸಿಎಸ್ ಸಿಇಓ ವಂದಾರಗುಪ್ಪೆಯ ಬಸವಲಿಂಗಪ್ಪ ಅವರ ಪತ್ನಿ ಕುಸುಮ ಅವರ ಕಾರ್ಯ ಮಾದರಿಯಾಗಿದೆ ಎಂದು ಕಕಜ ವೇದಿಕೆ ರಾಜ್ಯಾಧ್ಯಕ್ಷ ರಮೇಶ್‌ಗೌಡರು ಬಣ್ಣಿಸಿದರು.

ಕಿಡ್ನಿ ಸಮಸ್ಯೆಯಿಂದ ಬಳಲುತ್ತಿದ್ದ ವಂದಾರಗುಪ್ಪೆ ಗ್ರಾಮದ ವಾಸಿ ಹುಣಸನಹಳ್ಳಿ ಪಿಎಸಿಎಸ್‌ನ ಸಿಇಓ ಬಸವಲಿಂಗಪ್ಪ ಅವರಿಗೆ ಕಿಡ್ನಿ ದಾನ ಮಾಡಿ ಅವರನ್ನು ಪ್ರಾಣಾಪಾಯದಿಂದ ಪಾರು ಮಾಡಿಕೊಂಡು ಬಂದಿರುವ ಪತ್ನಿ ಕುಸುಮ ಅವರಿಗೆ ಪಟ್ಟಣದ ರೇಷ್ಮೆಸೀಮೆ ಕಾರ್ಯಾಲಯದಲ್ಲಿ ಕಕಜವೇದಿಕೆ ಮತ್ತು ತಾಲೂಕಿನ ಪಿಎಸಿಎಸ್ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಮಂಗಳವಾರ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿ ಇಂದು ಅನಾರೋಗ್ಯಕ್ಕೆ ಒಳಗಾದ ಪತಿಯನ್ನು ಬಿಟ್ಟು ತನ್ನ ಮುಂದಿನ ಜೀವನ ನೋಡಿಕೊಳ್ಳುವ ಕೆಲ ಮಹಿಳೆಯರ ನಡುವೆ ಪತಿಯನ್ನು



ಹತ್ತಾರು ವರ್ಷ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕುಸುಮ ಅವರು ತಮ್ಮ ಕಿಡ್ನಿಯನ್ನೇ ದಾನ ಮಾಡಿ ಸತಿ ಸಾವಿತ್ರಿ ಯಮನೊಂದಿಗೆ ಹೋರಾಡಿ ಗಂಡನ ಪ್ರಾಣವನ್ನು ಉಳಿಸಿಕೊಂಡಂತೆ ಸಾವಿನಂಚಿನಲ್ಲಿದ್ದ ಪತಿಯನ್ನು ತನ್ನ ದೇಹದ ಅಂಗವನ್ನೇ ಕತ್ತರಿಸಿಕೊಟ್ಟಿದ್ದು ಇದು ಇತರೆ ಮಹಿಳೆಯರಿಗೆ ಮಾದರಿಯಾಗಿದೆ. ಇವರಿಗೆ ಕ್ಷೇತ್ರದ ಶಾಸಕರು ಆರ್ಥಿಕ ಸಹಕಾರ ನೀಡುವ ಜೊತೆಗೆ ಮುಖ್ಯಮಂತ್ರಿಗಳ ಫಂಡ್ ಕೊಡಿಸಲು ಶ್ರಮಿಸಬೇಕು ಜೊತೆಗೆ ದಾನಿಗಳಿಂದ ಆರ್ಥಿಕ ಸಹಕಾರ ಸಿಗುವಂತೆ ಮಾಡಬೇಕಿದೆ ಎಂದು ಕರೆ ನೀಡಿದರು.

ನಿವೃತ್ತ ಪ್ರೊ.ಮಾಯಿಗೇಗೌಡರು ಮಾತನಾಡಿ, ಸಾವಿತ್ರಿ ಯಮನನ್ನೇ ಸೋಲಿಸಿ ಗಂಡ ಪ್ರಾಣ ಉಳಿಸಿಕೊಂಡ ಕಥೆಗಳನ್ನು ಪುರಾಣದಲ್ಲಿ ಕೇಳಿದ್ದೇವೆ. ಆದರೆ ಇಂದು ಕಲಿಯುಗದಲ್ಲಿ ಅಂತಹ ಮಹಿಳೆಯನ್ನು ನೋಡುವ ಸೌಭಾಗ್ಯ ನಮ್ಮ ಕಣ್ಣಮುಂದೆ ಇದೆ ಎಂದರೆ ತಪ್ಪಾಗದು. ಪತಿಯ ಪ್ರಾಣ ಉಳಿಸಿಕೊಳ್ಳುವ ನಿಟ್ಟಿನಲ್ಲಿ ತನ್ನ ಮೂತ್ರಪಿಂಡವನ್ನೇ ದಾನ ಮಾಡಿರುವ ಕುಸುಮ ಅವರು ಸಮಾಜಕ್ಕೆ ಹೊಸ ಸಂದೇಶ ನೀಡಿದ್ದಾರೆ. ಅವರ ತ್ಯಾಗವನ್ನು ಗೌರವಿಸುತ್ತಿರುವುದು ನಮ್ಮ ಪುಣ್ಯ. ಇವರ ಮುಂದಿನ ಜೀವನ ಸುಖಮಯವಾಗಿ ಆರೋಗ್ಯವಾಗಿ ನಡೆಸಲು ಸರ್ಕಾರದಿಂದ ಇವರ ಚಿಕಿತ್ಸೆಗೆ ಖರ್ಚು ಮಾಡಿರುವ ಹಣವನ್ನು ಮುಖ್ಯಮಂತ್ರಿಗಳ ಅನುದಾನದಲ್ಲಿ ಕೊಡಿಸಲು ಕ್ಷೇತ್ರದ ಶಾಸಕರು ಶ್ರಮಿಸಬೇಕು ಎಂದು ಆಗ್ರಹಿಸಿದರು.

ತಾಲೂಕಿನ ಪಿಎಸಿಎಸ್‌ಗಳ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ತಗಚಗೆರೆ ಶ್ರೀನಿವಾಸ್‌ಅವರು ಮಾತನಾಡಿ, ಇಂದು ಕೆಲ ಕುಟುಂಬದ ಹೆಂಡತಿ ಮಕ್ಕಳು ಆಸ್ತಿ, ಬ್ಯಾಂಕ್ ಬ್ಯಾಲೆನ್ಸ್ ನೋಡಿ ಗಂಡನನ್ನು ಉಪಚಾರ ಮಾಡುವುದು ಇದೆ.

ತಾಲೂಕಿನ ಪಿಎಸಿಎಸ್ ಸಿಇಓಗಳಾದ ಮೈಲನಾಯ್ಕನಹಳ್ಳಿ ಮೋಹನ್, ಕಸಬಾ ಲಿಂಗರಾಜು, ಮತ್ತೀಕೆರೆ ರಾಜು, ದೊಡ್ಡಮಳೂರು ಸಂತೋಷ್, ಮುದಗೆರೆ ಸಂಜುಕುಮಾರ್ ಹೊನ್ನಾಯ್ಕನಹಳ್ಳಿ ಶೋಭಾ, ಮಾಕಳಿ ಮಂಜುಳ., ಬ್ರಹ್ಮಣೀಪುರ ನವೀನ, ಅಕ್ಕೂರು ದೇಶಿಗೌಡ, ಕಕಜ ವೇದಿಕೆ ಜಿಲ್ಲಾಧ್ಯಕ್ಷ ಬೇವೂರು ಯೋಗೀಶ್‌ಗೌಡ ಇದ್ದರು.

> ಇಂದು ಪತ್ರಿಕೆ, ನ್ಯೂಸ್‌ಗಳನ್ನು ನೋಡಿದರೆ ಕೆಲವರು ಚನ್ನಾಗಿರುವ ಗಂಡ ಮಕ್ಕಳನ್ನೇ ಬಿಟ್ಟು ಬೇರೆ ಸಂಸಾರವನ್ನು ಕಟ್ಟಿಕೊಂಡು ಹೋಗುತ್ತಿರುವ ಘಟನೆಗಳ ವರದಿಗಳನ್ನೇ ಕಾಣುವ ಈ ಸಂದರ್ಭದಲ್ಲಿ ಪತಿಯನ್ನು ಪ್ರಾಣಾಪಾಯದಿಂದ ಉಳಿಸಲು ತನ್ನ ದೇಹದ ಪ್ರಮುಖ ಭಾಗವಾದ ಕಿಡ್ನಿಯನ್ನೇ ಕೊಟ್ಟು ಪತಿಯನ್ನು ಉಳಿಸಿಕೊಂಡಿರುವ ವಂದಾರಗುಪ್ಪೆ ಬಸವಲಿಂಗಪ್ಪ ಅವರ ಪತ್ನಿ ಕುಸುಮ ಅವರ ಕಾರ್ಯ ಶ್ಲಾಘನೀಯವಾಗಿದ್ದು ಅಂದು ಸತಿಸಾವಿತ್ರಿ ಅರ್ಧ ಆಯಸ್ಸಿನಲ್ಲಿ ಮೃತಪಟ್ಟ ಪತಿಯ ಪ್ರಾಣ ಎಳೆದುಕೊಂಡು ಹೋಗುತ್ತಿದ್ದ ಯಮನೊಂದಿಗೆ ಹೋರಾಡಿ ಪತಿಗೆ ಪೂರ್ಣಾಯಸ್ಸು ನೀಡಿದ ಕತೆಯನ್ನು ಕೇಳಿದ್ದ ನಮಗೆ ಇಂದು ಸತಿ ಸಾವಿತ್ರಿಯ ಸ್ಥಾನದಲ್ಲಿ ಕುಸಮ ಅವರನ್ನು ನೋಡುವ ಭಾಗ್ಯ ಸಿಕ್ಕಿದೆ. ಇವರ ಮುಂದಿನ ಜೀವನ ಆರೋಗ್ಯವಾಗಿರಲಿ ಅವರಿಗೆ ಅಗತ್ಯ ಔಷಧಿ, ಚಿಕಿತ್ಸೆ ಪಡೆಯಲು ಜಿಲ್ಲೆಯವರೇ ಆದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಅವರಿಂದ ಮುಖ್ಯಮಂತ್ರಿಗಳ ವಿಶೇಷ ಅನುದಾನ ಕೊಡಿಸುವಲ್ಲಿ ಶಾಸಕ ಸಿ.ಪಿ.ಯೋಗೇಶ್ವರ್ ಮತ್ತು ತಾಲೂಕಿನ ಕಾಂಗ್ರೆಸ್ ಮುಖಂಡರುಗಳು ಶ್ರಮಿಸಬೇಕು.
>
> ▸▸ **ನಿಂಗೇಗೌಡರು(ಎನ್‌ಜಿ)** ನಿವೃತ್ತ ಪ್ರಾಂಶುಪಾಲ

## ಮೊದಲ ಪುಟದಿಂದ

### ವಿದ್ಯುತ್ ಬರಕ್ಕೆ ಸೂರ್ಯನೇ ದಿಕ್ಕು

ಕೇಂದ್ರಗಳಲ್ಲಿ ಪಂಪ್ಡ್ ಸ್ಟೋರೇಜ್ ಸಿಸ್ಟಂ ಅಳವಡಿಸಬಹುದು. ಆದರೆ ಅಲ್ಲಿ ಪರಿಸರ ಸಮಸ್ಯೆ ಉದ್ಭವಿಸುತ್ತದೆ. ಈಗ ಶರಾವತಿ ಪಂಪ್‌ಡ್ ಸ್ಟೋರೇಜ್ ಸಿಸ್ಟಂಗೆ ಸ್ಥಳೀಯರ ವಿರೋಧ ವಿದೆ. ಅದಕ್ಕಿಂತ ಬ್ಯಾಟರಿ ದಾಸ್ತಾನು ವ್ಯವಸ್ಥೆ ಹೆಚ್ಚಿಸುವುದು ಸೂಕ್ತ. ರಾಜ್ಯ ಸರ್ಕಾರ ಮುಖ್ಯ ಕಾರ್ಯದರ್ಶಿಯವರು ವಿದ್ಯುತ್ ಉಳಿತಾಯಕ್ಕೆ ವಿಶೇಷ ಮನವಿ ಮಾಡಿದ್ದಾರೆ. ಸೋಲಾರ್ ವಿದ್ಯುತ್ ಉಳಿತಾಯ ಅವರ ಕೈಯಲ್ಲೇ ಇದೆ. ದೇಶದಲ್ಲಿ 91,574 ಸರ್ಕಾರಿ ಕಟ್ಟಡಗಳಿವೆ. ಇದರ ಮೇಲೆ ಸೋಲಾರ್ ವಿದ್ಯುತ್ ಉತ್ಪಾದನೆ ಕೈಗೊಂಡಲ್ಲಿ 1825 ಮೆಗಾವ್ಯಾಟ್ ವಿದ್ಯುತ್ ಪಡೆಯಬಹುದು. ಚಂದೀಪಗಢದಲ್ಲಿ ಶೇ. 100 ರಷ್ಟು ಸೋಲರ್ ವಿದ್ಯುತ್ ಉತ್ಪಾದನೆ ಸರ್ಕಾರದ ಕಟ್ಟಡಗಳ ಮೇಲೆ ಕೈಗೊಳ್ಳಲಾಗಿದೆ. ಅದೇರೀತಿ ಗುಜರಾತ್ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೇಲೆ ಸೋಲಾರ್ ಅಳವಡಿಸಿ ಅದೇ ವಿದ್ಯುತ್ ಬಳಕೆಯಾಗುತ್ತಿದೆ. ದೆಹಲಿಯಲ್ಲೂ ಸೋಲಾರ್ ಬಳಕೆ ಉತ್ತಮಗೊಂಡಿದೆ. ನಮ್ಮ ರಾಜ್ಯದಲ್ಲಿ ಮಾತ್ರ ಪ್ರಗತಿ ಸಾಲದು. ಒಟ್ಟು 2391 ಕಟ್ಟಡಗಳಿಂದ 24.25 ಮೆಗಾವ್ಯಾಟ್ ವಿದ್ಯುತ್ ಮಾತ್ರ ಲಭಿಸುತ್ತಿದೆ. ಪ್ರತಿ ಸರ್ಕಾರಿ ಇಲಾಖೆಯು ಕೇಂದ್ರದಿಂದ ಸಹಾಯಧನ ಪಡೆದು ತನ್ನ ಕಟ್ಟಡಗಳ ಮೇಲೆ ಸೋಲಾರ್ ಅಳವಡಿಸಲು ಟೆಂಡರ್ ಕರೆಯಬಹುದು. ರಾಜ್ಯ ಮುಖ್ಯ ಕಾರ್ಯದರ್ಶಿಗಳು ಪ್ರತಿ ಇಲಾಖೆಗೂ ಒಂದು ನಿಗದಿತ ಸಮಯದೊಳಗೆ ಸೋಲಾರ್ ಅಳವಡಿಸುವಂತೆ ಸೂಚನೆ ನೀಡಿದರೆ ಬಹುತೇಕ ಕಟ್ಟಡಗಳ ಮೇಲ ಸೋಲಾರ್ ಫಲಕಗಳನ್ನು ಕಾಣಬಹುದು. ಅದರಲ್ಲೂ ಕಂದಾಯ, ಪೊಲೀಸ್ ಮತ್ತು ಗ್ರಾಮೀಣ ಅಭಿವೃದ್ಧಿ ಇಲಾಖೆ ಮನಸ್ಸು ಮಾಡಿದರೆ ಸುಲಭವಾಗಿ ವಿದ್ಯುತ್ ಸಮಸ್ಯೆ ನಿವಾರಿಸಬಹುದು. ಈಗ ಸರ್ಕಾರಿ ಇಲಾಖೆಗಳೇ ವಿದ್ಯುತ್ ವಿತರಣ ಕಂಪನಿಗಳಿಗೆ ಅತಿ ಹೆಚ್ಚು ಬಾಕಿ ಉಳಿಸಿಕೊಂಡಿವೆ. ಅದರಿಂದ ಸೋಲಾರ್ ವಿದ್ಯುತ್ ಉತ್ಪಾದನೆಗೆ ಆಸಕ್ತಿ ತೋರಿಸಿದರೆ ಸರ್ಕಾರಕ್ಕೆ ಹಣ ಉಳಿತಾಯವಾಗುವುದರಲ್ಲಿ ಸಂದೇಹವಿಲ್ಲ. ಕಿತ್ತೂರು ಕರ್ನಾಟಕದಲ್ಲಿ 19 ಸಾವಿರ ಸರ್ಕಾರಿ ಕಟ್ಟಡಗಳಿವೆ ಎಂದು ಅಂದಾಜು ಮಾಡಲಾಗಿದೆ. ಅದರಲ್ಲಿ 733 ಕಟ್ಟಡಗಳು ಮಾತ್ರ ಸೋಲಾರ್ ಹೊಂದಿದೆ.ಮೈಸೂರು ವಿಭಾಗದಲ್ಲಿ 12 ಸಾವಿರ ಕಟ್ಟಡಗಳಿವೆ. ಇದರಲ್ಲಿ 1354 ಮಾತ್ರ ಸೋಲಾರ್ ಸಂಪರ್ಕ ಹೊಂದಿದೆ. ಅಸ್ಸಾಂ ರಾಜ್ಯದಲ್ಲಿ ಸರ್ಕಾರಿ ಕಟ್ಟಡಗಳು ಒಟ್ಟು 2.5 ಮೆಗಾವ್ಯಾಟ್ ವಿದ್ಯುತ್ ನೀಡುತ್ತಿದೆ ಎಂದ ಮೇಲೆ ನಮ್ಮಲ್ಲಿ ಇನ್ನೂ ಹೆಚ್ಚು ವಿದ್ಯುತ್ ಪಡೆಯಬಹುದು. ಸರ್ಕಾರಿ ಕಚೇರಿಗಳು ಭಾನುವಾರ ಮತ್ತು ರಜೆ ದಿನಗಳಲ್ಲಿ ಕೆಲಸ ಮಾಡುವುದಿಲ್ಲ. ಬರುವ ಜನರಿಗೆ ನಾಳೆ ಬಾ ಎಂದು ಹೇಳುವುದೇ ಹೆಚ್ಚು. ಆದರೆ ಸೂರ್ಯ ಎಂದೂ ಹೇಳುವುದಿಲ್ಲ. 365 ದಿನಗಳೂ ಹಗಲು ವಿದ್ಯುತ್ ಕೊಟ್ಟೇಕೊಡುತ್ತಾನೆ. ಇದಕ್ಕಾಗಿ ಹೂಡಿದ ಬಂಡವಾಳ 6 ವರ್ಷಗಳಲ್ಲಿ ಹಿಂದಕ್ಕೆ ಬರುತ್ತದೆ. ಅಲ್ಲದೆ ಸೋಲಾರ್‌ಫಲಕಗಳು 25 ವರ್ಷ ವಿದ್ಯುತ್ ನೀಡುವುದು ಗ್ಯಾರಂಟಿ. ಹೀಗಿದ್ದರೂ ಸರ್ಕಾರ ಇದರತ್ತ ಗಮನ ಹರಿಸಿಲ್ಲ ಎಂದರೆ ಜನಪರ ಕಾಳಜಿ ಇಲ್ಲ ಎಂದೇ ಅರ್ಥ.

ಈಗ ರಾಜ್ಯದಲ್ಲಿ ಮೂರುಜಲ ವಿದ್ಯುತ್ ಕೇಂದ್ರಗಳಿವೆ. ಅವುಗಳಲ್ಲಿ ಒಟ್ಟು 29 ದಿನಗಳಿಗೆ ಆಗುವಷ್ಟು ಮಾತ್ರ ನೀರಿನ ಸಂಗ್ರಹವಿದೆ. ಆಮೇಲೆ ಅದೂ ಇರುವುದಿಲ್ಲ. ಇನೂ ನಮ್ಮಲ್ಲಿರುವ ಕಲ್ಲಿದ್ದಲು ಆಧರಿತ ವಿದ್ಯುತ್ ಉತ್ಪಾದನೆ ಕೇಂದ್ರಗಳು ಹಳೆಯದಾಗಿದ್ದು ಅವುಗಳ ಪಿಎಲ್‌ಎಫ್ ಶೇ. 50ಕ್ಕೆ ಇಳಿದಿದೆ. ಅದರಿಂದ ಹೆಚ್ಚು ವಿದ್ಯುತ್ ಪಡೆಯುವುದು ಕಷ್ಟ. ಬೇರೆ ರಾಜ್ಯಗಳಿಂದ ವಿದ್ಯುತ್ ಖರೀದಿ ಕಷ್ಟ. ಈ ಬಾರಿ ಉತ್ತಮ ಮಳೆ ಯಾವ ರಾಜ್ಯದಲ್ಲೂ ಬಂದಿಲ್ಲ. ಎಲ್ಲ ಕಡೆ ವಿದ್ಯುತ್ ಅಭಾವ ತಲೆದೋರಿದೆ. ಸೋಲಾರ್‌ನಿಂದ ಪ್ರತಿದಿನ 33 ದಶಲಕ್ಷ ಯೂನಿಟ್ ಮತ್ತುಪವನ ವಿದ್ಯುತ್ ನಿಂದ 59 ದಶಲಕ್ಷ ಯೂನಿಟ್ ವಿದ್ಯುತ್ ಲಭಿಸುತ್ತಿದೆ. ಸೋಲಾರ್ ಹೆಚ್ಚು ಲಭಿಸುತ್ತಿದ್ದರೂ ಅದನ್ನು ಬಳಸಿಕೊಳ್ಳಲು ಬೇಕಾದ ವಿದ್ಯುತ್ ಜಾಲದ ಸಾಮರ್ಥ್ಯವನ್ನು ಹೆಚ್ಚಿಸಲು ಬಂಡವಾಳದ ಕೊರತೆ ಇದೆ. ಸೋಲಾರ್ ಉತ್ಪಾದನೆಗೆ ಖಾಸಗಿ ಬಂಡವಾಳ ಹರಿದು ಬರುತ್ತಿದೆ. ಅದರೆ ಕೆಪಿಟಿಸಿಎಲ್ ಸಾಮರ್ಥ್ಯ ಹೆಚ್ಚಿಸುವ ಯೋಜನೆಗೆ ಖಾಸಗಿ ಬಂಡವಾಳ ಬರುತ್ತಿಲ್ಲ. ಕೆಪಿಟಿಸಿಎಲ್ ತನ್ನ ತಾಂತ್ರಿಕ ಗುಣಮಟ್ಟ ಹೆಚ್ಚಿಸಿಕೊಳ್ಳುತ್ತಿಲ್ಲ. 400 ಕೆವಿಯಂಥ ಬೃಹತ್ ಟಿಸಿಗಳನ್ನು ಯಾವುದೇ ಪೂರ್ವ ಪರೀಕ್ಷೆ ಇಲ್ಲದೆ ಅಳವಡಿಸುತ್ತಿರುವುದರಿಂದ ಖಾಸಗಿ ಕಂಪನಿಗಳು ಇದರಲ್ಲಿ ಭಾಗವಹಿಸಲು ಇಚ್ಛಿಸುತ್ತಿಲ್ಲ. ಬರುವ ಕಂಪನಿಗಳಿಗೆ ಉತ್ತಮ ಹೆಸರು ಇಲ್ಲ. ಹೀಗಾಗಿ ಕೆಪಿಟಿಸಿಎಲ್ ತನ್ನ ವರ್ಚಸ್ಸು ಕಳೆದುಕೊಳ್ಳುತ್ತಿದೆ. ಅದರಲ್ಲೂ ಪ್ರಸರಣ ರಂಗದಲ್ಲಿ ಬಳಸುವ ಟ್ರಾನ್ಸ್‌ಫಾರ್ಮರ್‌ಗಳು ಬಹಳ ದುಬಾರಿ. ಒಂದೊಂದು 100 ಕೋಟಿ ರೂ. ಬಂಡವಾಳ ಕೇಳುತ್ತಿದೆ. ಅದರಲ್ಲಿ ಗುಣಮಟ್ಟ ಕಾಯುಕೊಳ್ಳದೇ ಹೋದಲ್ಲಿ ವಿದ್ಯುತ್ ಸರಬರಾಜು ವ್ಯವಸ್ಥೆ ಕುಸಿಯುವುದು ಸ್ಪಷ್ಟ. ಇದಕ್ಕೆ ಈಗ ಶಾರ್ಟ್ ಸರ್ಕ್ಯೂಟ್ ಗಳು ಅಧಿಕಗೊಂಡಿರುವುದೇ ಸಾಕ್ಷಿ. ವಿದ್ಯುತ್ ಆಡಿಟಿಂಗ್ ಎಂಬ ಶಬ್ದವೇ ಕೆಪಿಟಿಸಿಎಲ್ ನಿಂದ ದೂರ ಉಳಿದಿದೆ. ಈಗ ಕೆಪಿಟಿಸಿಎಲ್ ಬಳಿ ಇರುವ ಎಲ್ಲ ವಿದ್ಯುತ್ ಉಪಕರಣಗಳ ಗುಣಮಟ್ಟವನ್ನು ಮೂರನೇವರಿಂದ ಆಡಿಟ್ ಮಾಡಿಸಿದರೆ ನಿಜವಾದ ಬಣ್ಣ ಬಯಲಾಗುತ್ತದೆ. ಅಲ್ಲಿ ಬಳಸುತ್ತಿರುವ ಕೇಬಲ್ ಕೂಡ ಉತ್ತಮ ಗುಣಮಟ್ಟದಲ್ಲ ಎಂಬ ದೂರು ಕೇಳಿ ಬರುತ್ತಿದೆ. ಇದರ ಬಗ್ಗೆ ಕೆಇಆರ್‌ಸಿ ತಲೆಕೆಡಿಸಿಕೊಂಡಿಲ್ಲ. ವಿದ್ಯುತ್ ರಂಗದಲ್ಲಿ ಗುಣಮಟ್ಟ ಕಾಯ್ದುಕೊಳ್ಳಬೇಕು ಎಂದರೆ ಸೂಕ್ತ ಪರಿಶೀಲನೆ ಅಗತ್ಯ. ರಾಜ್ಯದಲ್ಲಿ ವಿದ್ಯುತ್ ಪರಿವೀಕ್ಷಕರು ನೀಡುವ ವರದಿಗಳಿಗೆ ಕವಡೆ ಕಾಸಿನ ಕಿಮ್ಮತ್ತಿಲ್ಲ.

# ಜಗಜೀವನ ರಾಮ್ ಪುಣ್ಯಸ್ಮರಣೆ

ಚಾಮರಾಜನಗರ: ಹರಿಕಾರ, ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನ ರಾಮ್ ಅವರ 40ನೇ ವರ್ಷದ ಪುಣ್ಯ ಸ್ಮರಣೆ ಕಾರ್ಯಕ್ರಮವು ನಗರದಲ್ಲಿಂದು ಅರ್ಥಪೂರ್ಣವಾಗಿ ನಡೆಯಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಈ ಸರಳ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಶ್ರೀರೂಪ ಅವರು ದೀಪ ಬೆಳಗಿಸಿ, ಡಾ. ಬಾಬು ಜಗಜೀವನ ರಾಮ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಇದಕ್ಕೂ ಮೊದಲು ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಬಸವಣ್ಣನವರ ಪುತ್ಥಳಿಗೆ ಜಿಲ್ಲಾಧಿಕಾರಿ ಹಾಗೂ ಗಣ್ಯರು ಮಾಲಾರ್ಪಣೆ ಮಾಡಿದರು.

**ಕಾರ್ಮಿಕರ ಭದ್ರತೆಗೆ ವಿಮೆ ಸೌಲಭ್ಯ**

ಇದೇ ಸಂದರ್ಭದಲ್ಲಿ ಮುಖಂಡರಾದ ಬಸವನಪುರ ರಾಜಶೇಖರ್ ಅವರು ಮಾತನಾಡಿ, "ಬಾಬು ಜಗಜೀವನ ರಾಮ್ ಅವರು ದೇಶಕ್ಕೆ ಅಪಾರವಾದ ಕೊಡುಗೆ ನೀಡಿದ್ದಾರೆ. ಕಾರ್ಮಿಕ ಮಂತ್ರಿಗಳಾಗಿದ್ದ ಕಾಲದಲ್ಲಿ ಕಾರ್ಮಿಕರ ಭದ್ರತೆಗಾಗಿ ವಿಮೆ ಸೌಲಭ್ಯವನ್ನು ಜಾರಿಗೆ ತಂದರು. ಮುಂಬಡ್ತಿಯ ಸೌಲಭ್ಯವು ಸಹ ಇವರ ಅವಧಿಯಲ್ಲಿಯೇ ಅನುಷ್ಠಾನವಾಯಿತು. ರಕ್ಷಣಾ ಮಂತ್ರಿಯಾಗಿ ಅನೇಕ ಗಮನಾರ್ಹ ಸಾಧನೆಗಳನ್ನು ಮಾಡಿದ್ದಾರೆ.



ಆಹಾರ ಭದ್ರತೆಗಾಗಿ ತಂದ ಹಸಿರು ಕ್ರಾಂತಿಯ ಹರಿಕಾರರು ಬಾಬುಜಿ ಆಗಿದ್ದಾರೆ," ಎಂದರು.

**ಗೀತೆ ಗಾಯನ ಹಾಗೂ ಗಣ್ಯರ ಉಪಸ್ಥಿತಿ**

ಕಾರ್ಯಕ್ರಮದಲ್ಲಿ ಜಾನಪದ ಗಾಯಕರಾದ ಸಿ.ಎಂ. ನರಸಿಂಹಮೂರ್ತಿ ಅವರು ಡಾ. ಬಾಬು ಜಗಜೀವನ ರಾಮ್ ಅವರ ಕುರಿತು ಗೀತ ಗಾಯನ ಪ್ರಸ್ತುತಪಡಿಸಿದರು. ಈ ಸಂದರ್ಭದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಮುನಿರಾಜು, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಹೆಚ್.ಎಸ್. ಬಿಂದ್ಯಾ, ವಿವಿಧ ಸಮುದಾಯ ಹಾಗೂ ಸಂಘಟನೆಗಳ ಮುಖಂಡರು, ಪ್ರತಿನಿಧಿಗಳು ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

### ಹಸಿರು ಕ್ರಾಂತಿಯ ಮೂಲಕ ಆಹಾರ ಸ್ವಾವಲಂಬನೆ

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾಧಿಕಾರಿ ಶ್ರೀರೂಪ, "ಬಾಬು ಜಗಜೀವನ ರಾಮ್ ಅವರು ಕೃಷಿ ಸಚಿವರಾಗಿ ನೂತನ ತಂತ್ರಜ್ಞಾನವನ್ನು ಅಳವಡಿಸಿ ದೇಶದಲ್ಲಿ ಹಸಿರು ಕ್ರಾಂತಿಯ ಮೂಲಕ ಆಹಾರ ಸ್ವಾವಲಂಬನೆ ಸಾಧಿಸಿದರು. ಕಾರ್ಮಿಕ, ರಕ್ಷಣೆ ಸೇರಿದಂತೆ ಹಲವಾರು ಮಹತ್ವದ ಖಾತೆಗಳನ್ನು ನಿರ್ವಹಿಸಿ ದೇಶಕ್ಕೆ ಅಪಾರವಾದ ಕೊಡುಗೆ ನೀಡಿದರು. ಅವರು ಸುದೀರ್ಘ ಕಾಲ ಸಂಸತ್ ಸದಸ್ಯರಾಗಿದ್ದರು, ಇದು ಒಂದು ದಾಖಲೆಯಾಗಿದೆ. ಅಲ್ಲದೆ ಅತಿ ಹೆಚ್ಚು ಕಾಲ ಸಚಿವರಾಗಿಯೂ ಸೇವೆ ಸಲ್ಲಿಸಿದ್ದಾರೆ. ಬಾಬುಜಿ ಅವರು ಯಾವುದೇ ಒಂದು ವರ್ಗಕ್ಕೆ ಸೀಮಿತರಾದವರಲ್ಲ; ಅವರ ತತ್ವ, ಆದರ್ಶ ಮತ್ತು ಸಾಧನೆಗಳು ನಮ್ಮೆಲ್ಲರಿಗೂ ಮಾರ್ಗದರ್ಶನವಾಗಿವೆ. ಅವರು ಹಾಕಿಕೊಟ್ಟ ಹಾದಿಯಲ್ಲಿ ನಾವೆಲ್ಲರೂ ನಡೆಯಬೇಕಿದೆ," ಎಂದು ತಿಳಿಸಿದರು.

# ಕಾಮುಕ ಕೊಲೆ ಆರೋಪಿಗೆ ಜೀವಾವಧಿ ಕಾರಾವಾಸ ಶಿಕ್ಷೆ

**ಹಾಸನ:** ದಿನಾಂಕ: 16/03/2022 ರಂದು ಸಂಜೆ ಸುಮಾರು 04.30 ಗಂಟೆ ಸಮಯದಲ್ಲಿ ಹಾಸನ ಗ್ರಾಮಾಂತರ ಠಾಣೆಯ ವ್ಯಾಪ್ತಿಗೆ ಸೇರಿದ ದೊಡ್ಡಪುರ ಗ್ರಾಮದ ಗುರುಪ್ರಸಾದ್‌ರವರ ಹೆಂಡತಿಯಾದ ಈ ಪ್ರಕರಣದ ಮೃತೆ ರೇವತಿರವರನ್ನು ಆರೋಪಿಯಾದ ಲತೇಶನು ನೀನು ನಿನ್ನ ಗಂಡನನ್ನು ಬಿಟ್ಟು ಬಾ, ನಾನು ನಿನ್ನನ್ನು ಪ್ರೀತಿಸುತ್ತೀದ್ದೇನೆ. ನಿನ್ನನ್ನು ಮದುವೆ ಆಗುತ್ತೇನೆ ಎಂದು ಪೀಡಿಸುತ್ತಿದ್ದು, ಇದಕ್ಕೆ ಮೃತೆ ರೇವತಿ ನನಗೆ ಗಂಡ ಮಕ್ಕಳು ಇದ್ದಾರೆ ಎಂದು ಆರೋಪಿಗೆ ಗದರಿಸಿ ಬೈದು ಕಳುಹಿಸಿದ್ದು, ಪುನಃ ಆರೋಪಿಯು ನಿನ್ನ ಜೊತೆ ಸೆಕ್ಸ್ ಮಾಡಬೇಕು, ನಿನ್ನ ಮೇಲೆ ಆಸೆ ಇದೆ ಆದ್ದರಿಂದ ನೀನು ನನ್ನ ಜೊತೆ ಸಹಕರಿಸು, ನೀನು ಸಹಕರಿಸದಿದ್ದರೆ ನಿನ್ನನ್ನು ಕೊಲೆ ಮಾಡುತ್ತೇನೆಂದು ಹೇಳಿದಾಗ ಮೃತೆಯು ಪುನಃ ಆರೋಪಿಯಾ ಲತೇಶನನ್ನು ಬೈದು ಕಳುಹಿಸಿದ್ದು ಆರೋಪಿಯು ಈ ದ್ವೇಷದಿಂದ ದಿ:16/03/2022 ರಂದು ಸಂಜೆ ಸುಮಾರು 4.00 ರಿಂದ 4.30 ಗಂಟೆಯೊಳಗೆ ರೇವತಿರವರ ಮನೆಯ ಹತ್ತಿರ ಬಂದು ರೇವತಿಯೊಬ್ಬಳೆ ಬಟ್ಟೆ ತೊಳೆಯುತ್ತಿರುವುದನ್ನು ನೋಡಿ ಅವಳ ಹತ್ತಿರ ಹೋಗಿ ಕೈಹಿಡಿದು ಎಳೆದಾಡಿ ನನ್ನನ್ನು ಮದುವೆಯಾಗು, ಸೆಕ್ಸ್ ಮಾಡಬೇಕು, ನನ್ನಜೊತೆ ಸಹಕರಿಸಬೇಕು ಎಂದು ಹೇಳುತ್ತಿದ್ದಾಗ ಆಗ ರೇವತಿ ವಿರೋಧ ವ್ಯಕ್ತಪಡಿಸಿ ಕಿರುಚಾಡಿದಾಗ ಆರೋಪಿ ಲತೇಶ ತಂದಿದ್ದ ಕುಡುಗೋಲಿನಿಂದ ರೇವತಿರವರ ತಲೆ, ಎಡಕಣ್ಣಿನ ಹತ್ತಿರ, ಮೊಣಕೈ ಹತ್ತಿರ, ಮೇಲ್ಕಂಡ ಪ್ರಕರಣದಲ್ಲಿ ಸಾಕ್ಷಿದಾರರನ್ನು ಸರಿಯಾದ ಸಮಯಕ್ಕೆ ವಿಚಾರಣೆಗೆ ಹಾಸನ ಗ್ರಾಮಾಂತರ ಪೊಲೀಸ್ ಠಾಣೆಯ ಕೋರ್ಟ್ ಪೊಲೀಸ್ ಸಿಬ್ಬಂದಿಯಾದ ರವಿಕುಮಾರ್ ಕೆ ಆರ್ ರವರು ಕರೆ ತಂದಿರುತ್ತಾರೆ. ಈ ಪ್ರಕರಣದಲ್ಲಿ ಸರ್ಕಾರದ ಪರವಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ (ಸರ್ಕಾರಿ ಅಭಿಯೋಜಕರು) ಈ.ಡಿ ಶ್ರೀನಿವಾಸ ರವರು ವಾದ ಮಂಡಿಸಿದ್ದರು.

# ಸರ್ಕಾರಿ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ಎಸ್.ಐ.ಆರ್ ಜಾಗೃತಿ ಕಾರ್ಯಕ್ರಮ

**ಚಾಮರಾಜನಗರ:** ಜಿಲ್ಲಾ ಪಂಚಾಯತ್, ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್.ಐ.ಆರ್) ಕುರಿತು ಚಾಮರಾಜನಗರದ ಸರ್ಕಾರಿ ಮಹಿಳಾ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾ ಪಂಚಾಯತ್ ಸಹಾಯಕ ಕಾರ್ಯದರ್ಶಿ ಶ್ರೀಕಂ ಠೇರಾಜೇ ಅರಸ್ ಭಾರತ ಚುನಾವಣಾ ಆಯೋಗವು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯವನ್ನು ಕೈಗೊಳ್ಳಲು ಅಧಿಸೂಚನೆ ಹೊರಡಿಸಿ ವೇಳಾಪಟ್ಟಿಯನ್ನು ನೀಡಿದೆ. ಸಾರ್ವಜನಿಕರಿಗೆ ಅರಿವು ಮೂಡಿಸುವ ಸಲುವಾಗಿ ಜಿಲ್ಲಾ ಪಂಚಾಯತ್ ಸ್ವೀಪ್ ಸಮಿತಿಯು ಜಿಲ್ಲೆಯಾದ್ಯಂತ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಮಾಹಿತಿ ನೀಡಿದರು.

ಮಹಿಳಾ ಪದವಿ ಪೂರ್ವ ಕಾಲೇಜಿನ ಪ್ರಾಂಶಪಾಲರಾದ ನಿರ್ಮಲ ರವರು ಮಾತನಾಡಿ ಕಾಲೇಜಿನಲ್ಲಿ ಇಎಸಿ ಸಮಿತಿ ರಚನೆ ಮಾಡಲಾಗಿದ್ದು, ಎಲ್ಲಾ ವಿಧ್ಯಾರ್ಥಿಗಳಿಗೆ ಎಸ್.ಐಆರ್ ಕುರಿತು ಮಾಹಿತಿ ನೀಡಲಾಗುತ್ತಿದೆ ಎಂದು ತಿಳಿಸಿದರು.



ಇಎಸಿ ಸಮಿತಿಯ ಅಧ್ಯಕ್ಷರಾದ ಸುಮಿತ್ರಾ ರವರು ಮಾತನಾಡಿ ವಿದ್ಯಾರ್ಥಿಗಳು ತಮ್ಮ ಮನೆಗೆ ಬೂತ್ ಮಟ್ಟದ ಅಧಿಕಾರಿಗಳು ಭೇಟಿ ನೀಡಿದಾಗ ಸಹಕಾರ ನೀಡಬೇಕು. ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಎಸ್.ಐ.ಆರ್ ಪ್ರಕ್ರಿಯೆಯು ಎಲ್ಲಾ ಅರ್ಹ ನಾಗರಿಕರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳಿಸುವುದಾಗಿದೆ ಈ ವಿಶೇಷ ಸಮಗ್ರ ಪರಿಷ್ಕರಣೆಯ ಅವಧಿಯಲ್ಲಿ ನಿಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇರುವುದನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

# 15 ಕೋಟಿ ರೂ. ವೆಚ್ಚದ ಈಜುಕೊಳ, ಪೆವಿಲಿಯನ್, ಆಟದ ಅಂಕಣಗಳ ಕಾಮಗಾರಿಗೆ ಶಂಕುಸ್ಥಾಪನೆ

**ಚಾಮರಾಜನಗರ:** ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಈಜುಕೊಳ, ಪೆವಿಲಿಯನ್, ಹಾಗೂ ವಿವಿಧ ಆಟದ ಅಂಕಣಗಳನ್ನು 15 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಿರುವ ಕಾಮಗಾರಿಗೆ ಎಂ.ಎಸ್.ಐ.ಎಲ್. ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಇಂದು ಶಂಕುಸ್ಥಾಪನೆ ನೆರವೇರಿಸಿದರು.

ಸಮಾರಂಭ ಉದ್ದೇಶಿಸಿ ಮಾತನಾಡಿದ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಜಿಲ್ಲಾ ಕೇಂದ್ರದಲ್ಲಿ ಕ್ರೀಡಾಂಗಣದ ಸಮಗ್ರ ಅಭಿವೃದ್ದಿ ಆಗಲಿದೆ. ಈ ಹಿಂದೆಯೇ ಕ್ರೀಡಾಂಗಣದ ಅಭಿವೃದ್ಧಿ ಕಾಮಗಾರಿಗಳು ಆರಂಭವಾಗಬೇಕಿತ್ತು. ಕಾರ ಣಾಂತರದಿಂದ ನೆರವೇರಿರಲಿಲ್ಲ. ಪ್ರಸ್ತುತ 15 ಕೋಟಿ ರೂ. ವೆಚ್ಚದ ಕಾಮಗಾರಿಗೆ ಟೆಂಡರ್ ಆಗಿದ್ದು ಗುದ್ದಲಿಪೂಜೆ ನೆರವೇರಿಸಲಾಗಿದೆ ಎಂದರು. ಈಜು ಕೊಳ, ಪೆವಿಲಿಯನ್ ಹಾಗೂ ವಿವಿಧ ಆಟಗಳ ಅಂಕಣಗಳ ಕಾಮಗಾರಿಯನ್ನು ಕಾಲಮಿತಿಯೊಳಗೆ



ಪೂರ್ಣಗೊಳಿಸಲು ಸೂಚಿಸಲಾಗಿದೆ. ತ್ವರಿತವಾಗಿ ಕಾಮಗಾರಿ ಮುಗಿಸಿ ಕ್ರೀಡಾಪಟುಗಳಿಗೆ ಅನುಕೂಲ ಕಲ್ಪಿಸಲಾಗುವುದು. ಈಗಾಗಲೇ ಬಾಲಕರು ಹಾಗೂ ಬಾಲಕಿಯರಿಗೆ ಪ್ರತ್ಯೇಕ ಕ್ರೀಡಾ ಹಾಸ್ಟೆಲ್ ವ್ಯವಸ್ಥೆ ಸಹ ಮಾಡಲಾಗಿದೆ ಎಂದು ಶಾಸಕರು ತಿಳಿಸಿದರು. ಜಿಲ್ಲಾ ಕೇಂದ್ರದಲ್ಲಿ ಅಭಿವೃದ್ದಿ ಕಾಮಗಾರಿಗಳು ನಡೆಯುತ್ತಿವೆ. ನಗರಕ್ಕೆ ಕುಡಿಯುವ ನೀರು ಪೂರೈಸಲು ಮಾಲಂಗಿಯಿಂದ ನೀರು ಸರಬರಾಜು ಮಾಡುವ ಕಾಮಗಾರಿಯನ್ನು 110 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿ ಕೊಳ್ಳುತ್ತಿದ್ದು, ಇದರ ಟೆಂಡರ್ ಕೂಡ ಆಗಿದೆ. ಅಲ್ಲದೇ 130 ಕೋಟಿ ರೂ. ವೆಚ್ಚದಲ್ಲಿ ಪಟ್ಟಣಕ್ಕೆ ಒಳಚರಂಡಿ ಕಾಮಗಾರಿಗು ಟೆಂಟರ್ ಪ್ರಕ್ರಿಯೆ ನಡೆದಿದೆ ಎಂದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರಿದ ಅಧ್ಯಕ್ಷರಾದ ಹೆಚ್.ವಿ. ಚಂದ್ರು, ಚುಡಾ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನಾ, ಜಿಲ್ಲಾಧಿಕಾರಿ ಶ್ರೀರೂಪ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪ್ರಭಾರ ಸಹಾಯಕ ನಿರ್ದೇಶಕರಾದ ಹೆಚ್.ಎಸ್. ಬಿಂದ್ಯಾ, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಜಯಪ್ರಕಾಶ್, ಹಿರಿಯ ಕ್ರೀಡಾಪಟು ಶ್ರೀನಿವಾಸ ಪ್ರಸಾದ್, ಮುಖಂಡರಾದ ಚಾ.ರಂ. ಶ್ರೀನಿವಾಸಗೌಡ, ರಾಜಪ್ಪ, ಸ್ವಾಮಿ, ಸುರೇಶ್ ನಾಯಕ್, ಪದ್ಮಾ ಪುರುಷೋತ್ತಮ್, ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಶ್ರೀ ಹಾಸನಾಂಬ, ಶ್ರೀ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವಕ್ಕೆ ಅಗತ್ಯ ಸಿದ್ದತೆಗೆ ಸೂಚನೆ

**ಹಾಸನ:** ಶ್ರೀ ಹಾಸನಾಂಬ ದೇವಿ ದರ್ಶನವನ್ನು ಭಕ್ತಾದಿಗಳಿಗೆ ಸುರಕ್ಷಿತ ಹಾಗೂ ಸುಗಮವಾಗಿ ಕಲ್ಪಿಸಲು ಅಗತ್ಯ ಸಿದ್ಧತೆಗೆ ಕ್ರಮವಹಿಸುವಂತೆ ಜಿಲ್ಲಾಧಿಕಾರಿ ಲತಾ ಕುಮಾರಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಶ್ರೀ ಹಾಸನಾಂಬ ಮತ್ತು ಶ್ರೀ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಕುರಿತು ಪೂರ್ವ ಸಿದ್ಧತಾ ಸಭೆ ನಡೆಸಿ ಮಾತನಾಡಿದ ಅವರು ಈ ಬಾರಿ ಅ.29 ರಂದು ದೇವಾಲಯದ ಬಾಗಿಲನ್ನು ತೆರಯಲಾಗುವುದುನ 11 ರಂದು ಬಾಗಿಲು ಮುಚ್ಚಲಾಗುವುದು ಎಂದು ತಿಳಿಸಿದರು.

2025ರಲ್ಲಿ ನಡೆದ ಜಾತ್ರಾ ಮಹೋತ್ಸವವನ್ನು ಜಿಲ್ಲಾ ಉಸ್ತುವಾರಿ ಸಚಿವರ ಮಾರ್ಗದರ್ಶನದಂತೆ ಅತ್ಯಂತ ಯಶಸ್ವಿಯಾಗಿ ನಡೆಸಲು ಶಿಸ್ತು ಹಾಗೂ ನಿಯಮಬದ್ಧವಾಗಿ ಕರ್ತವ್ಯ ನಿರ್ವಹಿಸುವ ಮೂಲಕ ಶ್ರಮವಹಿಸಿದ ಅಧಿಕಾರಿಗಳಿಗೆ ಅಭಿನಂದನೆಗಳು ಹಾಗೂ ಧನ್ಯವಾದಗ



ಳನ್ನು ತಿಳಿಸಿದ ಜಿಲ್ಲಾಧಿಕಾರಿಗಳು ತಾವು ಕರ್ತವ್ಯ ನಿರ್ವಹಿಸಿರುವುದು ನಮಗೆ ತುಂಬಾ ಹೆಮ್ಮೆ ಇದೆ. ಈ ವರ್ಷವೂ ಜಾತ್ರಾ ಮಹೋತ್ಸವವನ್ನು ಯಶಸ್ವಿಯಾಗಿ ನಡೆಸಲು ಕಳೆದ ವರ್ಷ ಆಗಿದ್ದ ಸಣ್ಣಪುಟ್ಟ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ಮುನ್ನಡೆಯಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಜೊತೆಗೆ ಇತರೆ ಮೂಲಗಳಿಂದಲು ಪರಿಗಣಿಸಲು ಒಂದು ಸಮಿತಿ ರಚನೆ ಮಾಡಲು ತಿಳಿಸಿದರು.

ಕಡಿಮೆ ಅವಧಿಯಲ್ಲಿ ಲಕ್ಷಾಂತರ ಭಕ್ತಾಧಿಗಳಿಗೆ ದೇವಿ ದರ್ಶನ ಮಾಡಿಸುವುದು ಜೊತೆಗೆ ಮೂಲಭೂತ ಸೌಕರ್ಯ ಕಲ್ಪಿಸುವುದು ಸವಾಲಿನ ಕೆಲಸ ಆದ್ದಾಗ್ಯೂ ಎಲ್ಲಾ ಅಧಿಕಾರಿಗಳು ಜವಾಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸಿ, ದೇವಿಯ ಜಾತ್ರಾ ಮಹೋತ್ಸವದ ಕೆಲಸ ಮಾಡಲು ಇದೊಂದು ಉತ್ತಮ ಅವಕಾಶ ಎಂದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶುಭಂ ಶುಕ್ಲ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್ ಕುಮಾರ್, ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ, ಉಪ ವಿಭಾಗಾಧಿಕಾರಿ ಜಗದೀಶ್ ಗಂಗಣ್ಣನವರ್ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

### ತಾತ್ಕಾಲಿಕ ಶೌಚಾಲಯದ ಟೆಂಡರ್

ತಾತ್ಕಾಲಿಕ ಶೌಚಾಲಯದ ಟೆಂಡರ್ ತೆಗೆದುಕೊಂಡವರು ಅಗತ್ಯ ಸಿಬ್ಬಂದಿಗಳನ್ನು ಸ್ವಚ್ಚತಾ ಕಾರ್ಯಕ್ಕೆ ನೇಮಕ ಮಾಡಬೇಕು ಜೊತೆಗೆ ಕಾಲಕಾಲಕ್ಕೆ ಸ್ವಚ್ಚತೆ ಆಗುತ್ತಿದೆಯೇ ಎಂಬುದನ್ನು ಪರಿಶೀಲನೆ ಮಾಡಬೇಕು ಎಂದರು. ಕಳೆದ ಬಾರಿ ಭಕ್ತಾದಿಗಳು ಸರತಿಸಾಲಿನಲ್ಲಿ ಸಾಗಲು ಅಳವಡಿಸಿದ್ದ ಬ್ಯಾರಿಕೇಡ್‌ನ ಕಬ್ಬಿಣದ ಪಟ್ಟಿ ಕಾಲಿಗೆ ತಾಗಿ ಪೆಟ್ಟಾಗುತ್ತಿತ್ತು. ಈ ಬಾರಿ ಆ ರೀತಿ ಆಗದಂತೆ ಅಧಿಕಾರಿಗಳು ಗಮನಹರಿಸಿ ಸರಿಯಾದ ರೀತಿಯಲ್ಲಿ ಬ್ಯಾರಿಕೇಡ್ ಅಳವಡಿಕೆಗೆ ಕ್ರಮವಹಿಸಲು ಸೂಚನೆ ನೀಡಿದರು.

# ಮನೋಜ್ ಗೆ ಪಿಹೆಚ್.ಡಿ

ಮೈಸೂರು: ಆಂಗ್ಲಭಾಷೆ ಅಧ್ಯಾಪಕರಾದ ಮನೋಜ್.ಸಿ.ಆರ್. ರವರು ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಪ್ರಾಧ್ಯಾಪಕರಾದ ಡಾ.ನಟರಾಜು ಜಿ, ರವರ ಮಾರ್ಗದರ್ಶನದಲ್ಲಿ " ಟ್ರಾನ್ಸ್ ಫಾರ್ಮೇಶನ್



ಆಫ್ ವುಮೆನ್ಸ್ ಲೈವ್ಸ್: ಸೊಸೈಟಿ ಅಂಡ್ ಕಲ್ಚರ್ ಇನ್ ದ ಶಾರ್ಟ್ ಸ್ಟೋರೀಸ್ ಆಫ್ ಅಲೈಸ್ ಮನ್ರೋ " ಕುರಿತಾಗಿ ಮಂಡಿಸಿದ ಮಹಾಪ್ರಬಂಧಕ್ಕೆ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ.

1976ರಲ್ಲಿ ತುಮಕೂರು ಜಿಲ್ಲೆಯ ಹೊನ್ನುಡಿಕೆಯ ಡಾ. ಚಂದ್ರಪ್ಪ ಮತ್ತು ರಾಜಲಕ್ಷ್ಮಿ ರವರ ಜೇಷ್ಠಪುತ್ರನಾಗಿ ಜನಿಸಿದ್ದು, ಇವರ ತಂದೆ ಡಾ.ಚಂದ್ರಪ್ಪ ಕರ್ನಾಟಕ ಆಡಳಿತ ಸೇವೆ ಅಧಿಕಾರಿಯಾಗಿದ್ದು, ಮೈಸೂರು, ತುಮಕೂರು ಹಾಗೂ ಮಂಗಳೂರು ಮಹಾನಗರ ಪಾಲಿಕೆಗಳಲ್ಲಿ ಆಯುಕ್ತರಾಗಿ ಸೇವೆ ಸಲ್ಲಿಸಿದ್ದಾರೆ. ಮನೋಜ್.ಸಿ.ಆರ್. ರವರು ತಮ್ಮ ಸುದೀರ್ಘ 24 ವರ್ಷಗಳ ಅಧ್ಯಾಪನ ವೃತ್ತಿಯಲ್ಲಿ ತೊಡಗಿದ್ದು, ಸಿದ್ದಗಂಗಾ ಕಾಲೇಜು, ಗುಬ್ಬಿ, ತುಮಕೂರಿನ ಸರ್ಕಾರಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸಿ, ಪ್ರಸ್ತುತ ಕುಣಿಗಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆಂಗ್ಲ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇಂಗ್ಲಿಷ್ ಭಾಷೆ, ಸಾಹಿತ್ಯ, ಸಂವಹನ ಕೌಶಲ್ಯ, ಪತ್ರಿಕೋದ್ಯಮ ಮತ್ತು ಸಾಫ್ಟ್ ಸ್ಕಿಲ್ಸ್‌ಗಳನ್ನು ಬೋಧಿಸಿ ವಿದ್ಯಾರ್ಥಿಗಳ ಜೀವನ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ.

# ನ್ಯಾಯಾಲಯ ಸಂಕೀರ್ಣ ನಿರ್ಮಾಣ ಸ್ಥಳ ಪರಿಶೀಲಿಸಿದ ಹೈಕೋರ್ಟ್ ನ್ಯಾಯಮೂರ್ತಿ

ರಾಮನಗರ: ನಗರದಲ್ಲಿ ಜಿಲ್ಲಾ ನ್ಯಾಯಾಲಯಕ್ಕಾಗಿ ವಿಶಾಲವಾದ ಮತ್ತು ಬೃಹತ್ ಕಟ್ಟಡ ನಿರ್ಮಾಣಕ್ಕೆ ಗುರುತಿಸಲಾಗಿರುವ ಸ್ಥಳವನ್ನು ಹೈಕೋರ್ಟ್ ನ್ಯಾಯಾಧೀಶರು ಹಾಗೂ ಜಿಲ್ಲೆಯ ಆಡಳಿತಾತ್ಮಕ ನ್ಯಾಯ ಮೂರ್ತಿಗಳಾದ ಎಸ್.ವಿಶ್ವಜಿತ್ ಶೆಟ್ಟಿ ಭೇಟಿ ನೀಡಿ ಪರಿಶೀಲಿಸಿದರು.

ನೂತನ ಕಟ್ಟಡ ನಿರ್ಮಾಣದ ನೀಲ ನಕ್ಷೆಯನ್ನು ಪರಿಶೀಲಿಸಿದ ಅವರು, ಹೆದ್ದಾರಿ ಪಕ್ಕದಲ್ಲಿ ಸೂಕ್ತವಾದ ಸ್ಥಳಾವಕಾಶ ದೊರೆತಿದೆ. ಇಲ್ಲಿ ಸುಸಜ್ಜಿತ ಕಟ್ಟಡ ನಿರ್ಮಾಣದಿಂದ ಅನುಕೂಲವಾಗಲಿದೆ. ಭವ್ಯವಾದ ನ್ಯಾಯಾಲಯ ಸಂಕೀರ್ಣ ವೇಗವಾಗಿ ನಿರ್ಮಾಣಗೊಂಡು ಸಾರ್ವಜನಿಕರ ಸೇವೆಗೆ ಲಭ್ಯವಾಗಲಿ ಎಂದು ಆಶಯ ವ್ಯಕ್ತಪಡಿಸಿದರು.

### ನೂತನ ಕಟ್ಟಡದಲ್ಲಿ ವಕೀಲರ ಸಂಘಕ್ಕೆ ಅವಕಾಶಕ್ಕೆ ಮನವಿ

ನಂತರ ಬಾರ್ ಅಸೋಸಿಯೇಷನ್‌ಗೆ ಭೇಟಿ ನೀಡಿದ ಅವರು, ವಕೀಲರೊಂದಿಗೆ ಸಮಾಲೋಚನೆ ನಡೆಸಿದರು. ಹೈಕೋರ್ಟ್ ನ್ಯಾಯಮೂರ್ತಿಗಳು ಸುಸಜ್ಜಿತ ನ್ಯಾಯಾಲಯ ನಿರ್ಮಾಣದ ಕುರಿತು ವಕೀಲರೊಂದಿಗೆ ಮಾಹಿತಿ ಹಂಚಿಕೊಂಡರು. ಈ ವೇಳೆ ಮನವಿ ಮಾಡಿದ ವಕೀಲರ ಸಂಘದ ಅಧ್ಯಕ್ಷ ಕೆ.ಕೆಂಪಯ್ಯ, ಪ್ರಸ್ತುತ



ವಕೀಲರ ಸಂಘ ಕಾರ್ಯನಿರ್ವಹಿಸುತ್ತಿರುವ ಕಟ್ಟಡ ಸಂಘದ ಸ್ವಂತದಲ್ಲ. ಕಾನೂನು ಸೇವಾ ಪ್ರಾಧಿಕಾರದ ಕಟ್ಟಡದಲ್ಲಿ ನಮಗೆ ಅವಕಾಶ ಮಾಡಿಕೊಡಲಾಗಿದೆ. ಸದರಿ ಕಚೇರಿ ಸಹ ತುಂಬಾ ಚಿಕ್ಕದಾಗಿದೆ. ಪ್ರತಿನಿತ್ಯ ರಾಮನಗರದ ನ್ಯಾಯಾಲಯ ಸಂಕೀರ್ಣಕ್ಕೆ 700ಕ್ಕೂ ಅಧಿಕ ವಕೀಲರು ಬಂದು ಹೋಗುತ್ತಾರೆ. ಭವಿಷ್ಯದಲ್ಲಿ ಈ ಸಂಖ್ಯೆ 1000 ದಾಟಬಹುದು. ಈ ಹಿನ್ನೆಲೆಯಲ್ಲಿ ನೂತನವಾಗಿ ನಿರ್ಮಾಣವಾಗುವ ಸುಸಜ್ಜಿತ ನ್ಯಾಯಾಲಯ ಸಂಕೀರ್ಣದಲ್ಲಿ ವಿಶಾಲವಾದ ಸ್ಥಳಾವಕಾಶವನ್ನು ವಕೀಲರ ಸಂಘ ಕಾರ್ಯನಿರ್ವಹಿಸಲು ನೀಡಬೇಕು ಎಂದು ಮನವಿ ಮಾಡಿದರು.

### ನ್ಯಾಯವನದಲ್ಲಿ ಸಸಿ ನೆಟ್ಟ ನ್ಯಾಯಾಧೀಶರು

ನಂತರ ರಾಮನಗರದ ಬಸನಪುರದ ಶ್ರೀ ರಾಮದೇವರ ಬೆಟ್ಟ ರಣಹದ್ದು ವನ್ಯಜೀವಿ ಧಾಮದಲ್ಲಿರುವ ನ್ಯಾಯವನದಲ್ಲಿ ನ್ಯಾ. ಎಸ್.ವಿಶ್ವಜಿತ್ ಶೆಟ್ಟಿ ಸಸಿ ನೆಟ್ಟು, ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ನ್ಯಾ. ಎಂ.ಎಚ್. ಅಣ್ಣಯ್ಯನವರ್, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಸವಿತ ಪಿ. ಆರ್., ವಲಯ ಅರಣ್ಯಾಧಿಕಾರಿ ಮಹಮ್ಮದ್ ಮನ್ಸೂರ್, ಅರಣ್ಯ ಇಲಾಖೆಯ ಸುಷ್ಮಾ, ಪ್ರಾಧಿಕಾರದ ಸಿಬ್ಬಂದಿಗಳು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ತಾಪಂ ಸುಪರ್ದಿಯಲ್ಲಿದ್ದ ಭೂಮಿ, ನ್ಯಾಯಾಲಯಕ್ಕೆ

**ಹಾಲಿ ಇರುವ ಜಿಲ್ಲಾ ನ್ಯಾಯಾಲಯ ಸಂಕೀರ್ಣ ಕಿರಿದಾಗಿದ್ದು ಸುಗಮ ನ್ಯಾಯದಾನ ವ್ಯವಸ್ಥೆಗೆ ಹಲವು ಅಡಚಣೆಗೆಗಳು ಎದುರಾಗುತ್ತಿದ್ದವು. ಇದಕ್ಕೆ ಪರಿಹಾರವಾಗಿ ಸುಸಜ್ಜಿತ ನ್ಯಾಯಾಲಯ ಸಂಕೀರ್ಣ ನಿರ್ಮಾಣ ಮಾಡಿಕೊಡುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿತ್ತು. ಇದಕ್ಕೆ ಸ್ಥಳದ ಅವಶ್ಯಕತೆ ಇತ್ತು. ನಗರದಲ್ಲಿ ತಾಲೂಕು ಪಂಚಾಯಿತಿ ಸುಪರ್ದಿಯಲ್ಲಿದ್ದ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಿರುವ 1 ಎಕರೆ 15 ಗುಂಟೆ ಜಮೀನನ್ನು ನ್ಯಾಯಾಲಯಕ್ಕೆ ಸರ್ಕಾರ ಹಸ್ತಾಂತರಿಸಿತ್ತು. 2026-27ನೇ ಬಜೆಟ್‌ನಲ್ಲಿ ರಾಜ್ಯ ಸರ್ಕಾರ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಸುಸಜ್ಜಿತ ನ್ಯಾಯಾಲಯ ಸಂಕೀರ್ಣ ನಿರ್ಮಾಣದ ಘೋಷಣೆ ಮಾಡಿ, ಅನುದಾನ ಮೀಸಲಿಟ್ಟಿತ್ತು. ಇದೀಗ ಯೋಜನೆಗೆ ವೇಗ ದೊರೆಯುತ್ತಿದೆ. ಲೋಕೋಪಯೋಗಿ ಇಲಾಖೆ ತಯಾರಿಸಿದ ನೀಲನಕ್ಷೆಗೆ ಹೈಕೋರ್ಟ್ ಅನುಮತಿ ನೀಡಿದ್ದು, ಶೀಘ್ರದಲ್ಲೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆಯಾಗಲಿದೆ. ನಂತರ ಟೆಂಡರ್ ಪ್ರಕ್ರಿಯೆ ಅಂತಿಮಗೊಂಡು ವರ್ಷಾಂತ್ಯದ ವೇಳೆ ಕಾಮಗಾರಿ ಆರಂಭಗೊಳ್ಳುವ ಸಾಧ್ಯತೆ ಇದೆ ಎಂದು ತಿಳಿಸಲಾಗಿದೆ.**

## ಕೊಡಗು ಜಿಲ್ಲೆಯ ಮಳೆ ವಿವರ (ಮಿಮೀಗಳಲ್ಲಿ)

ಮಡಿಕೇರಿ:-ಕೊಡಗು ಜಿಲ್ಲೆಯಲ್ಲಿ ಮಂಗಳವಾರ ಬೆಳಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆ ಅವಧಿಯಲ್ಲಿ ಸರಾಸರಿ 57.20 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಇದೇ ದಿನ 27.18 ಮಿ.ಮೀ. ಮಳೆಯಾಗಿತ್ತು. ಜನವರಿಯಿಂದ ಇಲ್ಲಿಯವರೆಗಿನ ಮಳೆ 571.09 ಮಿ.ಮೀ, ಕಳೆದ ವರ್ಷ ಇದೇ ಅವಧಿಯಲ್ಲಿ 1598.66 ಮಿ.ಮೀ ಮಳೆಯಾಗಿತ್ತು.

**ಮಡಿಕೇರಿ** ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 76.63 ಮಿ.ಮೀ. ಕಳೆದ ವರ್ಷ ಇದೇ ದಿನ 44.90 ಮಿ.ಮೀ. ಜನವರಿಯಿಂದ ಇಲ್ಲಿಯವರೆಗಿನ ಮಳೆ 818.52 ಮಿ.ಮೀ, ಕಳೆದ ವರ್ಷ ಇದೇ ಅವಧಿಯಲ್ಲಿ 2308.91 ಮಿ.ಮೀ. ಮಳೆಯಾಗಿತ್ತು.

**ವಿರಾಜಪೇಟೆ** ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 51.50 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಇದೇ ದಿನ 15.20 ಮಿ.ಮೀ. ಜನವರಿಯಿಂದ ಇಲ್ಲಿಯವರೆಗಿನ ಮಳೆ 603.99 ಮಿ.ಮೀ. ಕಳೆದ ವರ್ಷ ಇದೇ ಅವಧಿಯಲ್ಲಿ 1537.20 ಮಿ.ಮೀ. ಮಳೆಯಾಗಿತ್ತು.

**ಪೊನ್ನಂಪೇಟೆ** ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 83.02 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಇದೇ ದಿನ 27.80 ಮಿ.ಮೀ. ಜನವರಿಯಿಂದ ಇಲ್ಲಿಯವರೆಗಿನ ಮಳೆ 571.88 ಮಿ.ಮೀ. ಕಳೆದ ವರ್ಷ ಇದೇ ಅವಧಿಯಲ್ಲಿ 1555.95 ಮಿ.ಮೀ. ಮಳೆಯಾಗಿತ್ತು.

**ಸೋಮವಾರಪೇಟೆ** ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 55.25 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಇದೇ ದಿನ 37.80 ಮಿ.ಮೀ. ಜನವರಿಯಿಂದ ಇಲ್ಲಿಯವರೆಗಿನ ಮಳೆ 604.16 ಮಿ.ಮೀ. ಕಳೆದ ವರ್ಷ ಇದೇ ಅವಧಿಯಲ್ಲಿ 1750.99 ಮಿ.ಮೀ. ಮಳೆಯಾಗಿತ್ತು.

**ಕುಶಾಲನಗರ** ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 19.60 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಇದೇ ದಿನ 10.20 ಮಿ.ಮೀ. ಜನವರಿಯಿಂದ ಇಲ್ಲಿಯವರೆಗಿನ ಮಳೆ 256.79 ಮಿ.ಮೀ. ಕಳೆದ ವರ್ಷ ಇದೇ ಅವಧಿಯಲ್ಲಿ 840.24 ಮಿ.ಮೀ. ಮಳೆಯಾಗಿತ್ತು.

**ಕೊಡಗು ಜಿಲ್ಲೆಯಲ್ಲಿ** ಹೋಬಳಿವಾರು ದಾಖಲಾಗಿರುವ ಮಳೆ ವಿವರ:-ಮಡಿಕೇರಿ 60, ನಾಪೋಕ್ಲು 32, ಸಂಪಾಜೆ 49.50, ಭಾಗಮಂಡಲ 165, ವಿರಾಜಪೇಟೆ 64, ಅಮ್ಮತ್ತಿ 39, ಹುದಿಕೇರಿ 89, ಶ್ರೀಮಂಗಲ 82, ಪೊನ್ನಂಪೇಟೆ 125, ಬಾಳೆಲೆ 36.08, ಸೋಮವಾರಪೇಟೆ 54, ಶನಿವಾರಸಂತೆ 29, ಶಾಂತಳ್ಳಿ 83, ಕೊಡ್ಲಿಪೇಟೆ 55, ಕುಶಾಲನಗರ 10.20, ಸುಂಟಿಕೊಪ್ಪ 29 ಮಿ.ಮೀ.ಮಳೆಯಾಗಿದೆ.

**ಹಾರಂಗಿ ಜಲಾಶಯದ ನೀರಿನ ಮಟ್ಟ (07-07-2026) ವರದಿ**

ಹಾರಂಗಿ ಜಲಾಶಯದ ಗರಿಷ್ಠ ಮಟ್ಟ 2,859 ಅಡಿಗಳು, ಇಂದಿನ ನೀರಿನ ಮಟ್ಟ 2837.12 ಅಡಿಗಳು. ಕಳೆದ ವರ್ಷ ಇದೇ ದಿನ 2853.25 ಅಡಿಗಳು. ಹಾರಂಗಿಯಲ್ಲಿ ಬಿದ್ದ ಮಳೆ 11.60 ಮಿ.ಮೀ., ಕಳೆದ ವರ್ಷ ಇದೇ ದಿನ 7.20 ಮಿ.ಮೀ., ಇಂದಿನ ನೀರಿನ ಒಳಹರಿವು 1657 ಕ್ಯುಸೆಕ್, ಕಳೆದ ವರ್ಷ ಇದೇ ದಿನ 7369 ಕ್ಯುಸೆಕ್., ಇಂದಿನ ನೀರಿನ ಹೊರ ಹರಿವು ನದಿಗೆ 180 ಕ್ಯುಸೆಕ್. ಕಳೆದ ವರ್ಷ ಇದೇ ದಿನ ನೀರಿನ ಹೊರ ಹರಿವು ನದಿಗೆ 5000 ಕ್ಯುಸೆಕ್.

# ಮತದಾರರ ಹೆಸರು ಕೈ ಬಿಡದಿರಿ

## ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿಕೆ । (ಎಸ್‌ಐಆರ್) ತುರ್ತು ಸಭೆ



ಮೈಸೂರು: ಕಾಂಗ್ರೆಸ್ ಕಾರ್ಯಕರ್ತರು ಜಾಗೃತರಾಗಿ ಮತದಾರರ ಪಟ್ಟಿಯಿಂದ ಯಾವುದೇ ಹೆಸರನ್ನು ಕೈ ಬಿಡದಂತೆ ನಿಗಾವಹಿಸಬೇಕು ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ನಗರದ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ(ಎಸ್‌ಐಆರ್) ಸಂಬಂಧ ನಡೆದ ತುರ್ತು ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ಕಾಂಗ್ರೆಸ್ ನೀಡಿರುವ ಮತದಾನದ ಹಕ್ಕನ್ನು ಬಿಜೆಪಿಯು ಮತದಾರ ಪಟ್ಟಿ ಪರಿಷ್ಕರಣೆಯ ಮೂಲಕ ಮತದಾನದ ಹಕ್ಕನ್ನು ಕೀಳಿ ಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದು, ಈ ಬಗ್ಗೆ ಜಾಗರೂಕರಾಗಬೇಕು. ಮತದಾರರ ಪಟ್ಟಿ ಪರಿಷ್ಕರಣೆ ಮಾಡುವ ಬಿಎಲ್‌ಒಗಳಿಗೆ ಕನಿಷ್ಠ ಐದು ಮಂದಿ ಸಹಾಯಕರು ಇದ್ದರೆ ಅನುಕೂಲವಾಗಲಿದೆ. ಈ ಹಿನ್ನಲೆಯಲ್ಲಿ ಬಿಎಲ್‌ಒಗಳಿಂದ ಮತದಾರರಿಗೆ ನೀಡಲಾಗುವ ಅರ್ಜಿಯನ್ನು ಯಾವುದೇ ಲೋಪವಿಲ್ಲದಂತೆ ಭರ್ತಿ ಮಾಡಿ ಮತ್ತೇ ಸಲ್ಲಿಸಲು ಮತದಾರರಿಗೆ ಪಕ್ಷದ ಕಾರ್ಯಕರ್ತರು ನೆರವಾಗಬೇಕು ಎಂದರು.

ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಚುನಾವಣಾ ಆಯೋಗವು ಬಿಎಲ್‌ಒಗಳಿಗೆ ಹೇರಿರುವ ಒತ್ತಡವನ್ನು ಕಡಿಮೆ ಮಾಡಲು ಚುನಾವಣಾ ಆಯೋಗಕ್ಕೆ ಮನವಿ ಸಲ್ಲಿಸಲಾಗುವುದು. ಬಿಎಲ್‌ಒಗಳಿಗೆ ಒಂದು ತಿಂಗಳಿಗೆ 1500 ಮಂದಿಯ ಪರಿಷ್ಕರಣೆ ಮಾಡಬೇಕಿದ್ದು, ದಿನಕ್ಕೆ 50 ಮಂದಿಯ ಪರಿಷ್ಕರಣೆ ಮಾಡಬೇಕೆಂದು ಟಾರ್ಗೆಟ್ ನೀಡಲಾಗಿದೆ. ದಿನವೀಡಿ ಕೆಲಸ ಮಾಡಿದರೂ ಇಷ್ಟು ಮಂದಿಯ ಮತದಾನ ಪಟ್ಟಿ ಪರಿಷ್ಕರಣೆಯನ್ನು ಕೇವಲ ಒಂದು ತಿಂಗಳಲ್ಲಿ ಮಾಡಲು ಸಾಧ್ಯವಿಲ್ಲ. ಈ ಹಿನ್ನಲೆಯಲ್ಲಿ 1500 ಮಂದಿಯ ಬದಲಿಗೆ 1000 ಮಂದಿಯ ಮತದಾರರ ಪಟ್ಟಿಯನ್ನು ಪರಿಷ್ಕರಣೆಗೊಳಿಸಲು ಸಿಮೀತಗೊಳಿಸಲು ಮನವಿ ಸಲ್ಲಿಸಲಾಗುವುದು ಎಂದರು.

ಕೇಂದ್ರ ಸರಕಾರವು ಚುನಾವಣಾ ಆಯೋಗದ ಮೂಲಕ ಮತದಾರರ ಪಟ್ಟಿಯಲ್ಲಿರುವ ಮತದಾರರ ಹೆಸರನ್ನು ಕೈ ಬಿಡಲು 11 ಕ್ಯಾತೆಗಳನ್ನು ಗುರುತು ಮಾಡಿಕೊಂಡಿದೆ. ಹೆಸರು ವ್ಯತ್ಯಾಸವಾದರೂ ಸಹ ಪಟ್ಟಿಯಿಂದ ಹೆಸರು ಕೈ ಬಿಟ್ಟು ಹೋಗಲಿದೆ. ಆದ್ದರಿಂದ ಈ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದರು. ಸಭೆಯಲ್ಲಿ ಶಾಸಕ ಕೆ.ಹರೀಶ್ ಗೌಡ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ಆನಂದ್, ಈಶ್ವರ್ ಚಕ್ಕಡಿ, ಕೂರ್ಗಳ್ಳಿ ಮಹದೇವು ಇದ್ದರು.

## ಮೇಲುಸೇತುವೆ ಕಾಮಗಾರಿ ಪರಿಶೀಲನೆ

**ಮೈಸೂರು:** ನಗರದಲ್ಲಿ ಪ್ರಗತಿಯಲ್ಲಿರುವ ಮೇಲುಸೇತುವೆ ನಿರ್ಮಾಣ ಕಾಮಗಾರಿಯನ್ನು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಈ ವೇಳೆ ಕಾಮಗಾರಿಯ ಪ್ರಗತಿ, ಗುಣಮಟ್ಟ ಹಾಗೂ ಅನುಷ್ಠಾನದ ವಿವಿಧ ಅಂಶಗಳ ಕುರಿತು ಅಧಿಕಾರಿಗಳೊಂದಿಗೆ ಸಮಗ್ರ ಚರ್ಚೆ ನಡೆಸಿದ ಸಚಿವರು, ಕಾಮಗಾರಿಯನ್ನು ನಿಗದಿತ ಕಾಲಮಿತಿಯೊಳಗೆ ಉತ್ತಮ ಗುಣಮಟ್ಟದೊಂದಿಗೆ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಕಾಮಗಾರಿ ನಡೆಯುವ ಅವಧಿಯಲ್ಲಿ ಸಾರ್ವಜನಿಕರಿಗೆ ಯಾವುದೇ ರೀತಿಯ ಸಂಚಾರ ತೊಂದರೆ ಅಥವಾ ಅನಾನುಕೂಲ ಉಂಟಾಗದಂತೆ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು, ಸುರಕ್ಷತೆ ಮತ್ತು ಸುಗಮ ಸಂಚಾರ ನಿರ್ವಹಣೆಗೆ ಆದ್ಯತೆ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ ಇನ್ನಿತರರು ಉಪಸ್ಥಿತರಿದ್ದರು.



## ರಾಜಕೀಯ ಪ್ರೇರಿತ ದೂರಿಗೆ ಬೆಲೆ ಇಲ್ಲ: ಸಚಿವ ಡಾ.ಯತೀಂದ್ರ

**ಮೈಸೂರು:** ಎಸ್ ಐಆರ್ ಪ್ರಕ್ರಿಯೆ ಮಾಡುತ್ತಿರುವುದು ಕೇಂದ್ರ ಸರ್ಕಾರ. ಅವರು ಪ್ರತಿಯೊಂದನ್ನ ನಿರ್ದೇಶನ ಮಾಡುತ್ತಾರೆ. ಆದರೂ ಕೂಡ ಸುಖಾಸುಮ್ಮನೆ ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ, ಜೆಡಿಎಸ್ ನಾಯಕರು ಟೀಕೆ ಮಾಡುತ್ತಿದ್ದು, ರಾಜಕೀಯ ಪ್ರೇರಿತ ದೂರಿಗೆ ಆಯೋಗ ಬೆಲೆ ಕೊಡುವುದಿಲ್ಲ ಎಂದು ನಗರಾಭಿವೃದ್ಧಿ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ಧರಾಮಯ್ಯ ವಾಗ್ದಾಳಿ ನಡೆಸಿದರು.

ನಗರದಲ್ಲಿ ಮಂಗಳವಾರ ನಗರಾಭಿವೃದ್ಧಿ ಸಚಿವ ಸ್ಥಾನದಿಂದ ಯತೀಂದ್ರ ಸಿದ್ದರಾಯ್ಯ ಕೈ ಬಿಡಬೇಕೆಂದು ಸಿಎಂಗೆ ಪತ್ರ ವಿಚಾರ ಕುರಿತು ಪ್ರತಿಕ್ರಿಯಿಸಿ, ಈಗಾಗಲೇ ಈ ಬಗ್ಗೆ ಸ್ಪಷ್ಟನೆ ಕೊಟ್ಟಿದ್ದೇನೆ. ಮುಡಾ ಕೇಸ್ ಲೋಕಾಯುಕ್ತದಿಂದ ಸಂಪೂರ್ಣ ತನಿಖೆ ಆಗಿದೆ. ತನಿಖೆ ರಿಪೋರ್ಟ್ ಕೂಡ ಸಲ್ಲಿಸಲಾಗಿದೆ. ಜನಪ್ರತಿನಿಧಿನಗಳ ನ್ಯಾಯಾಲಯವು ಇದನ್ನ ಒಪ್ಪಿದೆ. ಹೀಗಿದ್ದರೂ ಮೇಲ್ಮನವಿ ಸಲ್ಲಿಸಿದ್ದಾರೆ. ತನಿಖೆ ಪೂರ್ಣಗೊಂಡಿರುವುದರಿಂದ ನಾವು ಪ್ರಭಾವ ಬೀರಲು ಸಾಧ್ಯವಿಲ್ಲ. ಇವರು ಮಾಡುತ್ತಿರುವ ಆರೋಪ ಸತ್ಯಕ್ಕೆ ದೂರವಾದದ್ದು ಎಂದರು. ಪಕ್ಷದಲ್ಲಿ ಸಿದ್ದರಾಮಯ್ಯರನ್ನು ಕಡೆಗಣಿಸಲಾಗುತ್ತಿದೆ ಎಂಬ ವಿಚಾರ ಕುರಿತು ಪ್ರತಿಕ್ರಿಯಿಸಿ, ಸಿದ್ದರಾಮಯ್ಯರನ್ನ ಕಡೆಗಣಿಸುವ ಪ್ರಶ್ನೆ ಇಲ್ಲ. ಬ್ಯಾನರ್ ನಲ್ಲಿ ಅವರ ಫೋಟೊ ಹಾಕಿಲ್ಲ, ಪೋಸ್ಟರ್ ಹಾಕಿಲ್ಲ ಅನ್ನೋ ವಿಚಾರಕ್ಕೆ ನಮ್ಮ ತಂದೆ ತಲೆ ಕೆಡಿಸಿಕೊಳ್ಳೊದಿಲ್ಲ ಎಂದು ಹೇಳಿದರು.

**ಅಪಪ್ರಚಾರಕ್ಕೆ ಕಿವಿಗೊಡದಿರಿ**

**ಬಿಜೆಪಿ ಪಕ್ಷದ ಕಾರ್ಯಕರ್ತರು ಮತದಾರರಿಗೆ ಸುಳ್ಳು ಸುದ್ದಿಯ ಅಪಪ್ರಚಾರ ಮಾಡುತ್ತಿದ್ದಾರೆ. ನಮ್ಮ ಕಾರ್ಯಕರ್ತರು ಅಂತಹ ಅಪಪ್ರಚಾರ ಹಾಗೂ ಗೊಂದಲಗಳಿಗೆ ಕಿವಿಗೊಡಬಾರದು. ಪ್ರತಿಯೊಂದು ಮನೆಗೂ ಹೋಗಿ ಅಲ್ಲಿನ ಮತದಾರರ ಮಾಹಿತಿ ಸಂಗ್ರಹಿಸಿ ಅವರನ್ನು ಮತಪಟ್ಟಿಗೆ ಸೇರಿರುವ ಬಗ್ಗೆ ಖಚಿತ ಮಾಡುವ ಮೂಲಕ ಪ್ರತಿಯೊಬ್ಬರ ಮತದ ಹಕ್ಕು ಕಸಿಯುವ ಬಿಜೆಪಿಯ ಪ್ರಯತ್ನವನ್ನು ತಡೆಬೇಕಿದೆ.**

-**ಎಂ.ಲಕ್ಷ್ಮಣ್** ಕೆಪಿಸಿಸಿ ವಕ್ತಾರ

# ಮಕ್ಕಳಲ್ಲಿ ಪರಿಸರದ ಬಗ್ಗೆ ಕಾಳಜಿ ಬೆಳೆಸಲು ಕರೆ

ರಾಮನಗರ: ಪರಿಸರದ ಬಗ್ಗೆ ಮಕ್ಕಳಲ್ಲಿ ಕಾಳಜಿ ಬೆಳೆಸಬೇಕು, ಗಿಡ ನೆಟ್ಟು ಮರವನ್ನಾಗಿ ಬೆಳೆಸಲು ಪೋಷಕರು ಮತ್ತು ಸಮಾಜದ ಹಿರಿಯರು ಪ್ರೋತ್ಸಾಹಿಸಬೇಕು, ಪರಿಸ ರದ ಬಗ್ಗೆ ತಾತ್ಸಾರ ಮನೋಭಾವ ಬೇಡ ಎಂದು ರಾಮ ನಗರ ತಾಲ್ಲೂಕು ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷ ಯು.ನರಸಿಂಹಯ್ಯ ಕರೆ ನೀಡಿದರು.

ತಾಲ್ಲೂಕಿನ ಶ್ಯಾನುಭೋಗನಹಳ್ಳಿ ಗ್ರಾವ ದಲ್ಲಿ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮಂಗಳವಾರ ಗಿಡ ನೆಡುವ ಕಾರ್ಯಕ್ರಮ ಮತ್ತು ಶಾಲಾ ವಿದ್ಯಾರ್ಥಿಗಳಿಗೆ ಪರಿಸರ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು. ವಿದ್ಯಾರ್ಥಿ ಗಳು ಆಟ ಪಾಠದ ಜೊತೆಗೆ ಪರಿಸರದ ಬಗ್ಗೆ ಒಲವು ಬೆಳೆಸಿಕೊಳ್ಳಬೇಕು, ವಿಶೇಷವಾಗಿ ರೈತ ಕುಟುಂಬದ ಮಕ್ಕಳು, ತಮ್ಮ ಪಾಲಕರ ವ್ಯವಸಾಯವನ್ನು ತಿಳಿದುಕೊಳ್ಳುವುದರ ಜೊತೆಗೆ ಅರಣ್ಯ ಕೃಷಿಯ ಬಗ್ಗೆಯೂ ಒಲವು ಬೆಳೆಸಿಕೊಳ್ಳಬೇಕು. ಕೃಷಿ ಭೂಮಿಯಲ್ಲಿ ಆರ್ಥಿಕ ಆದಾಯಕ್ಕೆ ಕಾರಣವಾಗುವ ಮರಗಳನ್ನು ಬೆಳೆಸಿದರೆ,



ಕುಟುಂಬದ ಆರ್ಥಿಕತೆಗೂ ಪೋರಕವಾಗಲಿದೆ ಎಂದರು.

### ಪ್ರಕೃತಿ ಸಮತೋಲನ ಕಾಪಾಡುವುದು ಮುಖ್ಯ

ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಮಾಜಿ ಅಧ್ಯಕ್ಷ ಹಾಲಿ ಸದಸ್ಯ ಎಂ.ಆರ್. ಶಿವಕುಮಾರಸ್ವಾಮಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಅರಣ್ಯ ಪ್ರದೇಶ ಕಡಿಮೆಯಾಗುತ್ತಿದೆ. ಜನಸಂಖ್ಯೆ ಹೆಚ್ಚಿದಂತೆಲ್ಲಾ ಹಸಿರು ಪ್ರದೇಶ, ರೈತರ ಕೃಷಿ ಭೂಮಿಯೂ ವಿಸ್ತಾರ ಕಡಿಮೆಯಾಗುತ್ತಿದೆ. ಇದು ಪ್ರಕೃತಿ ಸಮತೋಲನದಲ್ಲಿ ಏರುಪೇರಿಗೆ ಕಾರಣವಾಗುತ್ತಿದೆ. ಪ್ರಕೃತಿ ಸಮತೋಲನ ಕಾಪಾಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ. ಹೀಗಾಗಿ ನಾವು ಮತ್ತಷ್ಟು ಹೆಚ್ಚು ಮರ, ಗಿಡ ಬೆಳೆಸಲು ಮುಂದಾಗಬೇಕಾದ ಅನಿವಾರ್ಯತೆ ನಮ್ಮ ಮುಂದಿದೆ ಎಂದರು.

### ನಾಡಿಗೆ ಕಾಡು ಪ್ರಾಣಿಗಳ ಲಗ್ಗೆ, ಸಂದೇಶ ಏನು?

ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಉಪಾಧ್ಯಕ್ಷೆ ವಿನೋದ ಕೆ. ಪಟೇಲ್ ಮಾತನಾಡಿ ಕಾಡು ನಾಡಾಗುತ್ತಿದೆ ಪ್ರಾಣಿಗಳು ನಾಡಿಗೆ ಲಗ್ಗೆ ಇಡುತ್ತಿವೆ. ಇದು ನಾವು ಅರಣ್ಯ ನಾಶ ಮಾಡುತ್ತಿದ್ದೇವೆ ಎಂದರ್ಥ. ಕಾಡು ಪ್ರಾಣಿಗಳು ನಾಡಿಗೆ ಲಗ್ಗೆ ಇಡುತ್ತಿರುವುದು, ಅರಣ್ಯ ನಾಶ ವಾಗುತ್ತಿರುವುದಕ್ಕೆ, ಸ್ಪಷ್ಟತೆಯನ್ನು ಕೊಡುತ್ತಿವೆ ಎಂದರು. ಆಧುನಿಕ ಜೀವನ ಶೈಲಿಯಲ್ಲಿ ಪ್ರಕೃತಿ ಮಾತೆಯನ್ನು ನಾವು ಮರೆಯುತ್ತಿದ್ದೇವೆ. ಇದರಿಂದ ಪ್ರಕೃತಿ ಮುನಿದು ಹಲವು ಅವಘಡಗಳು ಕಾರಣವಾಗುತ್ತಿವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಸಹಕಾರ ಬ್ಯಾಂಕ್ ನಿರ್ದೇಶಕರುಗಳಾದ ಆರ್. ಮಲ್ಲೇಶ್, ಹೆಚ್.ಕೆ. ನಂಜಪ್ಪ (ಗೋಪಿ), ಶಿವಣ್ಣ, ಎಲ್. ಎಂ. ಸಂತೋಷ್, ಜೆ.ಬಿ. ಪುಟ್ಟಮಾರೇಗೌಡ, ರಾಜಣ್ಣ, ಜಯಲಕ್ಷ್ಮಮ್ಮ, ಗೋವಿಂದನಾಯ್ಕ, ಚಂದ್ರೇಗೌಡ, ಹೆಚ್.ಎನ್. ಸುಮಿತ್ರ, ಕರಿಹುಚ್ಚಮ್ಮ, ಜಿಲ್ಲಾ ವ್ಯವಸ್ಥಾಪಕ ಸುರೇಶ್, ಬ್ಯಾಂಕ್ ವ್ಯವಸ್ಥಾಪಕ ರಾಜೇಶ್ ಇದ್ದರು.

**ಆಷಾಢ ವಿಶೇಷ ದರ್ಶನ**

# ಚಾಮುಂಡಿಬೆಟ್ಟ: 2000 ರೂ.ನಿಗಧಿ ವಿರೋಧಿಸಿ ಪ್ರತಿಭಟನೆ

ಮೈಸೂರು: ಆಷಾಢ ಶುಕ್ರವಾರದಂದು ಶ್ರೀ ಚಾಮುಂಡೇಶ್ವರಿ ದೇವರ ವಿಶೇಷ ದರ್ಶನಕ್ಕೆ 2000 ರೂ. ನಿಗದಿ ಮಾಡಿರುವ ರಾಜ್ಯ ಸರ್ಕಾರದ ಕ್ರಮ ಖಂಡಿಸಿ ಹಳೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಕರ್ನಾಟಕ ಸೇನೆ ಪಡೆಯಿಂದ ಪ್ರತಿಭಟಿಸಿ ಆಕ್ರೋಶ ವ್ಯಕ್ತಪಡಿಸಲಾಯಿತು.

ಭಕ್ತಾದಿಗಳೇ 2.000ರೂ. ಇದ್ದರೆ ಆಷಾಢ ಮಾಸದಲ್ಲಿ ಚಾಮುಂಡಿ ಬೆಟ್ಟಕ್ಕೆ ಬನ್ನಿ. ಇಲ್ಲವಾದರೆ ಮನೆಯಿಂದಲೇ ತಾಯಿಗೆ ಕೈ ಮುಗಿದು ಬಿಡಿ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆ ನೇತೃತ್ವವಹಿಸಿದ್ದ ಕರ್ನಾಟಕ ಸೇನಾಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ ಮಾತನಾಡಿ, ಉಳ್ಳ ಭಕ್ತಾದಿಗಳ ಭಕ್ತಿಯ ಪರಾಕಾಷ್ಠೆಯ ಹೆಸರಲ್ಲಿ, ವಿಶೇಷ ದರ್ಶನದ ಹೆಸರಲ್ಲಿ, ರಾಜ್ಯ ಸರ್ಕಾರ 2000 ರೂಪಾಯಿಯನ್ನು ಲೂಟಿ ಮಾಡಲು ಹೊರಟಿದೆ. ವಿಶೇಷ ದರ್ಶನದಿಂದಾಗಿ ಸರ್ಕಾರ ಉಳಿದ ಭಕ್ತಾದಿಗಳನ್ನು ನಿರ್ಲಕ್ಷಿಸಿ ಕಡೆಗಣಿಸುತ್ತಿದೆ. ರಾಜ್ಯದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವ ಮುಂಚೆ, ಬಿಟ್ಟಿ ಭಾಗ್ಯಗಳನ್ನು ಘೋಷಿಸಿ, ಅವುಗಳಿಗೆ ಹಣ ಹೊಂದಿಸಲು ಸಾಧ್ಯವಾಗದೆ,



ದಿವಾಳಿಯಾಗಿ ಈಗ ಈ ರೀತಿ ಹಿಂದೂ ಧಾರ್ಮಿಕ ಕ್ಷೇತ್ರಗಳ ಮೇಲೆ ಕಣ್ಣು ಹಾಕಿ, ಭಕ್ತರಿಂದ ಹಣ ವಸೂಲಿ ಮಾಡಲು ಹೊರಟಿರುವುದು ಅತ್ಯಂತ ಖಂಡನೀಯ ಎಂದು ಕಿಡಿಕಾರಿದರು.

ಜೊತೆಗೆ ಈ ವರ್ಷದಿಂದ ಚಾಮುಂಡಿ ಬೆಟ್ಟ ಪ್ರಾಧಿಕಾರ ಹಾಗೂ ಜಿಲ್ಲಾಡಳಿತ ದರ್ಶನದ 50 ರೂ ಹಾಗೂ 300 ರೂಗಳ ವಿಶೇಷ ದರ್ಶನಗಳ ಟಿಕೆಟ್ಗಳನ್ನು ರದ್ದು ಮಾಡುತ್ತಿರುವುದು ಅತ್ಯಂತ ನೋವಿನ ಸಂಗತಿ ಆಗಿದೆ. ಜಗತ್ಪ್ರಸಿದ್ಧ ಚಾಮುಂಡೇಶ್ವರಿ ಬೆಟ್ಟ ಮೈಸೂರು ಮಹಾರಾಜರ ಕೊಡುಗೆ ಹಾಗೂ ಆಸ್ತಿ. ಭಕ್ತಾದಿಗಳಿಗೆ ದೇವಿಯ ದರ್ಶನ ಉಚಿತವಾಗಿ ಸಿಗಲೆಂದು ಇದನ್ನು ಮಹಾರಾಜರು ಸ್ಥಾಪಿಸಿರುವುದು. ಆದರೆ, ಈಗ ರಾಜ್ಯ ಸರ್ಕಾರ 2000 ರೂಪಾಯಿಗಳ ಟಿಕೆಟ್ ನೆಪದಲ್ಲಿ, ಬೆಟ್ಟದಲ್ಲಿ ವ್ಯಾಪಾರೀಕರಣ ಮಾಡುತ್ತಿರುವುದು ಅತ್ಯಂತ ನಾಚಿಕೆಗೇಡಿನ ಸಂಗತಿ. ಈ 2000 ರೂ. ವಿಶೇಷ ದರ್ಶನ ತಿರುಪತಿ ದೇವಸ್ಥಾನದಲ್ಲಿ ಇಲ್ಲ, ಧರ್ಮಸ್ಥಳದಲ್ಲಿಯೂ ಇಲ್ಲ ಹಾಗೂ ಕುಕ್ಕೆ ಸುಬ್ರಹ್ಮಣ್ಯದಲ್ಲೂ ಸಹ ಇರುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

2000 ರೂ.ಗೆ ನಾವು ಕಿಟ್ ನೀಡುತ್ತೇವೆ ಎಂದು ಚಾಮುಂಡಿ ಬೆಟ್ಟದ ಪ್ರಾಧಿಕಾರ ಹೇಳುತ್ತದೆ. ಆಷಾಢದಲ್ಲಿ ಜನರು ದೇವಿಯ ದರ್ಶನ ಮಾಡಲು ಬರುತ್ತಾರೆಯೇ ವಿನಃ ಯಾವುದೇ ಕಿಟ್ ಜನರಿಗೆ ಬೇಕಿಲ್ಲ. ಚಾಮುಂಡಿ ಬೆಟ್ಟ ಪ್ರಾಧಿಕಾರ ಮೊದಲು 2000 ರೂ ಟಿಕೆಟ್ ಪಡೆದು ಆಗಮಿಸುವ ಸುಮಾರು 100 ಭಕ್ತಾದಿಗಳಿಗೆ ಕಿಟ್ ನೀಡಿ, ಫೋಟೋ, ವಿಡಿಯೋ ತೆಗೆದುಕೊಂಡು, ತದನಂತರ ಒಬ್ಬರಿಗೂ ನೀಡುವುದಿಲ್ಲ. ಸಾವಿರಾರು ಕಿಟ್ಗಳ ಲೆಕ್ಕ ನೀಡುತ್ತಾರೆ. ಇದರಿಂದ ಜನರ ಹಣ, ಬೆಟ್ಟದ ಅಧಿಕಾರಿಗಳಿಂದ ಪೂರ್ತಿ ದುರುಪಯೋಗವಾಗುತ್ತದೆ. ಕಳೆದ ವರ್ಷಗಳಂತೆ 50 ರೂ. ಹಾಗೂ 300 ರೂ. ದರ್ಶನದ ವ್ಯವಸ್ಥೆಯನ್ನು ಬೆಟ್ಟದ ಪ್ರಾಧಿಕಾರ ಮುಂದುವರಿಸಬೇಕು ಎಂದು ಆಗ್ರಹಿಸಿದರು.ಮೆಟ್ಟಿಲು ಹತ್ತಿ ದಣಿದು ಬರುವ ಭಕ್ತಾದಿಗಳಿಗೆ ನೇರ ದರ್ಶನದ ವ್ಯವಸ್ಥೆಯನ್ನು ಕಲ್ಪಿಸಲಿ ಹಾಗೂ ಜೊತೆಗೆ ಮೆಟ್ಟಿಲು ಹತ್ತಿ ಬರುವ ಭಕ್ತಾದಿಗಳಿಗೆ ಸಮರ್ಪಕ ಶೌಚಾಲಯದ ವ್ಯವಸ್ಥೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಈ ಬಾರಿಯಾದರೂ ಕಲ್ಪಿಸಲೇಬೇಕು ಎಂದು ಒತ್ತಾಯಿಸಿದರು. ಗೋಲ್ಡನ್ ಸುರೇಶ್, ಪ್ರಭುಶಂಕರ್, ಕೃಷ್ಣಪ್ಪ, ಪ್ರಜೀಶ್, ಸಿಂದುವಳ್ಳಿ ಶಿವಕುಮಾರ್, ಗಿರೀಶ್, ಬೋಗಾದಿ ಸಿದ್ದೇಗೌಡ, ಮಧುವನ ಚಂದ್ರು, ಸೋಮೇಗೌಡ, ಶಿವಲಿಂಗಯ್ಯ, ಹೊನ್ನೇಗೌಡ, ಮಂಜುಳಾ, ಶೋಭಾ ರಾಣಿಗೌಡ, ವಿಜಯೇಂದ್ರ, ನಾಗೇಂದ್ರ, ಕೃಷ್ಣೇಗೌಡ, ಶ್ರೀನಿವಾಸ , ಸುಜಾತಾ, ಜ್ಯೋತಿ ಮತ್ತಿತರರು ಇದ್ದರು.

# ರಸಗೊಬ್ಬರ ಮಾರಾಟಗಾರರಿಗೆ ಜಿಲ್ಲಾ ಮಟ್ಟದ ತಾಂತ್ರಿಕ ಕಾರ್ಯಾಗಾರ: ಡೀಸಿ ಡಾ. ಕುಮಾರ



**ಮಂಡ್ಯ :** ಗುಣಮಟ್ಟದ ಕೃಷಿ ಪರಿಕರಗಳನ್ನು ರೈತರಿಗೆ ತಲುಪಿಸುವುದು ಮತ್ತು ಮಣ್ಣಿನ ಆರೋಗ್ಯ ರಕ್ಷಿಸುವುದು ಪ್ರತಿಯೊಬ್ಬ ರಸಗೊಬ್ಬರ ಮಾರಾಟಗಾರರ ಆದ್ಯ ಕರ್ತವ್ಯವಾಗಿದೆ. ಮಾರಾಟಗಾರ ರಿಗಾಗಿ ಈ ತಾಂತ್ರಿಕ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ . ವ್ಯಾಪಾರವನ್ನು ಕಾನೂನುಬದ್ಧವಾಗಿ ನಡೆಸುವುದು ಮಾತ್ರವಲ್ಲದೆ, ಹೊಸ ತಂತ್ರಜ್ಞಾನ ಮತ್ತು ಕೃಷಿ ಪದ್ಧತಿಗಳ ಬಗ್ಗೆ ಸಂಪೂರ್ಣ ಜ್ಞಾನವನ್ನು ಪಡೆಯಬಹುದು ಎಂದು ಜಿಲ್ಲಾಧಿಕಾರಿಗಳಾದ ಡಾ. ಕುಮಾರ ರವರು ತಿಳಿಸಿದರು.

ಡಾ. ಬಿ. ಆರ್ ಅಂಬೇಡ್ಕರ್ ಭವನದಲ್ಲಿ ಮಂಗಳವಾರ ನಡೆದ ಜಿಲ್ಲಾ ಪಂಚಾಯತ್, ಕೃಷಿ ಇಲಾಖೆ ಮತ್ತು ಕೃಷಿ ಸಮಾಜ ಸಹಯೋಗದಲ್ಲಿ ದಲ್ಲಿ ಮಾರಾಟಗಾರರಿಗೆ ರಸಗೊಬ್ಬರ ಗುಣ ನಿಯಂತ್ರಣ –ಸಮರ್ಪಕ –ಸಮತೋಲನ ರಸಗೊಬ್ಬರ ನಿರ್ವಹಣೆ ಕಾರ್ಯಾಗಾರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಸಗೊಬ್ಬರ ತಯಾರಕರು ಮತ್ತು ವಿತರಕರು ಸರ್ಕಾರದ ಕಾನೂನು ಕಾಯಿದೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ರಸಗೊಬ್ಬರದ ಜೊತೆಗೆ ಅನಗತ್ಯ ಕೀಟನಾಶಕ ಅಥವಾ ಇತರ ಉತ್ಪನ್ನಗಳನ್ನು ಕಡ್ಡಾಯವಾಗಿ ಖರೀದಿಸುವಂತೆ ರೈತರ ಮೇಲೆ ಒತ್ತಡ ಹೇರುವುದು ಅಪರಾಧವಾಗಿದ್ದು ರಸಗೊಬ್ಬರ ತಯಾರಕರು ಮತ್ತು ವಿತರಕರು ರೈತರ ಹಿತಶಕ್ತಿಗೆ ಎಲ್ಲರೂ ಸಮನ್ವಯತೆಯಿಂದ ಸಹಕಾರಿಯಾಗಬೇಕು ಎಂದರು.

ರೈತ ದೇಶದ ಬೆನ್ನೆಲುಬು ರೈತರು ಬೆಳೆದ ಬೆಳೆಗೆ ಉತ್ತಮ ಬೆಲೆ ಫಲಿಸಿದರೆ ರೈತರು ಸ್ವಾವಲಂಬಿಯಾಗಲು ಸಾಧ್ಯವಾಗುತ್ತದೆ. ಆದ್ದರಿಂದ ರೈತರಿಗೆ ಸಿಗಬೇಕಾದ ಸೌಲಭ್ಯಗಳನ್ನು ಒದಗಿಸುವುದು ನಮ್ಮ ಜವಾಬ್ದಾರಿ ಯಾಗಿದೆ. ಹಾಗಾಗಿ ಮಾರಾಟಗಾರರು ಮತ್ತು ರೈತರು ಸಾಮರಸ್ಯದಿಂದ ಇರಬೇಕು ಎಂದು ತಿಳಿಸಿದರು.

ರಸಗೊಬ್ಬರದ ಕೃತಕ ಅಭಾವ ಸೃಷ್ಟಿಸುವುದು, ಅನ್ಯ ಜಿಲ್ಲೆಗಳಿಗೆ ಕಳ್ಳಸಾಗಣೆ ಮಾಡುವುದು ಅಥವಾ ಕಳಪೆ ಗೊಬ್ಬರ ಮಾರಾಟ ಮಾಡುವುದು ಶಿಕ್ಷಾರ್ಹ ಅಪರಾಧವಾಗಿದ್ದು ಅನಧಿಕೃತ ದಾಸ್ತಾನು ಮಾರಾಟ ಮತ್ತು ಸಾಗಾಣಿಕೆ ಕುರಿತು ಮಾಹಿತಿ ದೊರೆತಲ್ಲಿ ಕಾನೂನು ಕ್ರಮ ಕೈಗೊಳ್ಳಗುವುದು ಮತ್ತು ಪರವಾನಗಿಯನ್ನು ರದ್ದು ಮಾಡಲಾಗುತ್ತದೆ ಎಂದು ತಿಳಿಸಿದರು.

ಮುಂಗಾರು ಮಳೆ ವೈಫಲ್ಯದಿಂದ ನೀರಿನ ಕೊರತೆ ಇರುವುದರಿಂದ ರೈತರಿಗೆ ಪರ್ಯಾಯ ಬೆಳೆಗಳಾದ ರಾಗಿ, ನವಣೆ ಮುಸಗಿನಜೋಳ, ಅರ್ಕ, ಹುರುಳಿ, ಅಲಸಂದೆ ಬೆಳೆಗಳನ್ನು ಬೆಳೆಯುವಂತೆ ಮಾಹಿತಿಯನ್ನು ನೀಡಲಾಗಿದ್ದು ರೈತರು ಪರ್ಯಾಯ ಬೆಳೆಗಳನ್ನು ಬೆಳೆಯಲು ಹೆಚ್ಚು ಒತ್ತು ನೀಡಬೇಕು ಎಂದು ಕಾರ್ಯಕ್ರಮದಲ್ಲಿ ತಿಳಿಸಿದರು.

ಮಂಡ್ಯ ಜಿಲ್ಲಾ ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಜಯಸ್ವಾಮಿ ಜಿ. ಎಸ್ ರವರು ಮಾತನಾಡಿ ಮಾರಾಟಗಾರರ ಸಮಸ್ಯೆಗಳಿಗೆ ಕಾನೂನು ಅನ್ವಯ ಜಿಲ್ಲಾಡಳಿತ ಮತ್ತು ಕೃಷಿ ಇಲಾಖೆಯು ಸಹಕರಿಸುತ್ತದೆ. ರೈತರಿಗೆ ಅನುಕೂಲವಾಗುವಂತೆ ರಸಗೊಬ್ಬರ ಒದಗಿರುವುದು ನಮ್ಮ ಜವಾಬ್ದಾರಿಯಾಗಿದೆ ಆ ನಿಟ್ಟಿನಲ್ಲಿ ಮಾರಾಟಗಾರರು ಮತ್ತು ಕೃಷಿಕರು ಸಮನ್ವಯತೆಯಿಂದ ಸಹಕಾರಿಯಾಗಬೇಕು ಎಂದರು. ರಸಗೊಬ್ಬರ ತಯಾರಕರು ಮತ್ತು ವಿತರಕರು ಸರ್ಕಾರದ ಕಾನೂನು ಕಾಯಿದೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಮತ್ತು ರೈತರಿಗೆ ಉತ್ತಮ ರಸಗೊಬ್ಬರ ಒದಗಿಸುವುದರ ಜೊತೆಗೆ ರೈತರು ಸ್ವಾವಲಂಬಿಯಾಗಿ ಮತ್ತು ರೈತರ ಅಭಿವೃದ್ಧಿಯಾಗಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಕಾರ್ಯಾಗಾರದಲ್ಲಿ ಮೈಸೂರು ವಿಭಾಗದ ಜಾಗೃತ ಕೋಶ ಜಂಟಿ ಕೃಷಿ ನಿರ್ದೇಶಕರಾದ ರಾಮಕೃಷ್ಣ, ಸಂಪನ್ಮೂಲ ವ್ಯಕ್ತಿಗಳಾದ ವೆಂಕಟರಮಣಪ್ಪ, ಜಿಲ್ಲಾ ಕೃಷಿ ಸಮಾಜದ ಅಧ್ಯಕ್ಷರಾದ ನಾಗರಾಜು ಸಿ. ಎಂ, ಮಂಡ್ಯ ಜಿಲ್ಲಾ ಬಿತ್ತನೆ ಬೀಜ ಕೀಟನಾಶಕ ಮತ್ತು ರಸಗೊಬ್ಬರ ಮಾರಾಟಗಾರರ ಸಂಘದ ಅಧ್ಯಕ್ಷರಾದ ರಮೇಶ್, ಮಂಡ್ಯ ಜಿಲ್ಲಾ ಸಹಾಯಕ ಕೃಷಿ ನಿರ್ದೇಶಕರು ಸುನೀತಾ ಹೆಚ್. ಎಂ. ಉಪಸ್ಥಿತರಿದ್ದರು

# ಶರಣಪ್ಪ ಸಲಾದಪುರಗೆ

## ಡಾ. ಜಿ.ಮಾದೇಗೌಡ ಸಮಾಜ ಸೇವಾ ಪ್ರಶಸ್ತಿ



**ಬೆಂಗಳೂರು:** ಡಾ. ಜಿ.ಮಾದೇಗೌಡ ಪ್ರತಿಷ್ಠಾನದ ವತಿಯಿಂದ ನೀಡಲಾಗುವ 2026ನೇ ಸಾಲಿನ ಡಾ. ಜಿ.ಮಾದೇಗೌಡ ರಾಜ್ಯಮಟ್ಟದ ಸಮಾಜ ಸೇವಾ ಪ್ರಶಸ್ತಿಗೆ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷರಾದ ಶರಣಪ್ಪ ಸಲಾದಪುರ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿ ಪ್ರಧಾನ ಸಮಾರಂಭವು, ಮಂಡ್ಯ ನಗರದ ಗಾಂಧಿ ಭವನದಲ್ಲಿ ಜುಲೈ 10, 2026ರಂದು ಮಧ್ಯಾಹ್ನ 3–30 ಗಂಟೆಗೆ ನಡೆಯಲಿದೆ.

**ಶರಣಪ್ಪ ಸಲಾದಪುರ ರವರ ಪರಿಚಯ :** 21–01–1957ರಂದು ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಸಲಾದಪುರ ಗ್ರಾಮದಲ್ಲಿ ಜನಿಸಿದರು. ತಂದೆ ಶ್ರೀ ಮಲ್ಲಪ್ಪ ಹಾಗೂ ತಾಯಿ ಶ್ರೀಮತಿ ಚಂದ್ರಮ್ಮ. ಕೃಷಿಕ ಕುಟುಂಬದ ಹಿನ್ನೆಲೆಯಿಂದ ಬಂದಿರುವ ಅವರು, ತಮ್ಮ ತಂದೆಯಿಂದ ಬಳುವಳಿಯಾಗಿ ಬಂದ ನಿಷ್ಠೆ, ಪ್ರಾಮಾಣಿಕತೆ, ಶಿಸ್ತು ಮತ್ತು ನೈತಿಕ ಮೌಲ್ಯಗಳನ್ನು ಜೀವನದುದ್ದಕ್ಕೂ ಅಳವಡಿಸಿಕೊಂಡು ಆದರ್ಶವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದಾರೆ.

ರೈತ ನಾಯಕರು ಹಾಗೂ ಸಮಾಜ ಸೇವಕರಾಗಿ ಹಲವು ದಶಕಗಳಿಂದ ಜನಪರ ಸೇವೆಯಲ್ಲಿ ತೊಡಗಿಸಿಕೊಂಡಿರುವ ಅವರು, ಮೌಲ್ಯಾಧಾರಿತ ವ್ಯಕ್ತಿತ್ವದಕಾರಣದಿಂದ ಸಗರನಾಡಿನಜನರ ಪ್ರೀತಿಗೆ ಪಾತ್ರರಾಗಿ ಸಗರ ನಾಡಿನಗಾಂಧಿ" ಎಂಬ ಹೆಸರಿನಿಂದ ಜನಮಾನಸದಲ್ಲಿ ಗುರುತಿಸಿಕೊಂಡಿದ್ದಾರೆ.

ಪದವಿ ವಿದ್ಯಾರ್ಥಿಯಾಗಿದ್ದಾಗಲೇ ಲೋಕನಾಯಕ ಪ್ರೊ.ಜಯಪ್ರಕಾಶ್ ನಾರಾಯಣ, ಜಾರ್ಜ್ ಫನಾರ್ಂಡಿಸ್ ಹಾಗೂ ಪ್ರೊ. ಮಧುದಂಡವತೆ ಅವರ ವಿಚಾರಧಾರೆಗಳಿಂದ ಪ್ರೇರಿತರಾಗಿ ಸಮಾಜವಾದಿ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ನಂತರ ಮಹಾತ್ಮಗಾಂಧೀಜಿ, ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಬಸವಣ್ಣ ಅವರ ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಮಾನವೀಯತೆಯ ಚಿಂತನೆಗಳನ್ನು ಜೀವನದ ಆದರ್ಶಗಳಾಗಿ ಅಳವಡಿಸಿಕೊಂಡು ಆರೋಗ್ಯಕರ ಹಾಗೂ ಸಮಾನತೆಯ ಸಮಾಜ ನಿರ್ಮಾಣಕ್ಕಾಗಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ.

"ಈ ನಾಡಿನ ರೈತಾಪಿ ಸಮುದಾಯದ ಏಳಿಗೆಯೇ ಕರ್ನಾಟಕದ ಸಮೃದ್ಧಿಗೆ ಮೂಲ" ಎಂಬ ಧ್ಯೆಯವಾಕ್ಯವನ್ನು ಜೀವನದಲ್ಲಿ ಅಳವಡಿಸಿಕೊಂಡು ರೈತರ ಹಿತಾಸಕ್ತಿಗಾಗಿ ಅವಿರತವಾಗಿ ಹೋರಾಟ ನಡೆಸುತ್ತಿದ್ದಾರೆ. ಕಳೆದ ಮೂರು ದಶಕಗಳಲ್ಲಿ ನೂರಾರುರೈತ ಹೋರಾಟಗಳನ್ನು ಸಂಘಟಿಸಿ, ರೈತರ ಸಮಸ್ಯೆಗಳಿಗೆ ಪರಿಹಾರ ದೊರಕಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಜಮೀನ್ದಾರರ ಪಾಳೇಗಾರಿಕೆಯ ಮನೋಭಾವವನ್ನು ದೃಢವಾಗಿ ವಿರೋಧಿಸಿ, ಹೈದರಾಬಾದ್–ಕರ್ನಾಟಕ ಭಾಗದ ರೈತಪರ ನಾಯಕರಾಗಿ ಗುರುತಿಸಿಕೊಂಡಿದ್ದಾರೆ.

ರೈತರ ಅಭಿವೃದ್ಧಿ, ಸಮಾಜಮುಖಿಕಾರ್ಯ, ನೈತಿಕರಾಜಕಾರಣ ಮತ್ತುಜನಪರ ಸೇವೆಯ ಮೂಲಕ ಸಲ್ಲಿಸಿರುವ ಅಮೋಘ ಕೊಡುಗೆಯನ್ನು ಗೌರವಿಸಿ, ಡಾ. ಜಿ. ಮಾದೇಗೌಡ ಪ್ರತಿಷ್ಠಾನ ವತಿಯಿಂದ 2026ನೇ ಸಾಲಿನ ರಾಜ್ಯಮಟ್ಟದ ಸಮಾಜ ಸೇವಾ ಪ್ರಶಸ್ತಿ ಮೊತ್ತ ರೂ 25,000/– (ಇಪ್ಪತ್ತೈದು ಸಾವಿರ) ನಗದು ಬಹುಮಾನ ಹಾಗೂ ಪ್ರಶಸ್ತಿ ಫಲಕವನ್ನು ನೀಡಿ ಶರಣಪ್ಪ ಸಲಾದಪುರಅವರನ್ನು ಗೌರವಿಸಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

# ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆ ಅರಿವು ಅಗತ್ಯ



**ರಾಮನಗರ:** ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದ ಜೊತೆಗೆ ಪರಿಸರ ಸಂರಕ್ಷಣೆಯ ಮಹತ್ವವನ್ನು ಅರಿತು ಮರಗಳನ್ನು ಬೆಳೆಸುವ ಮೂಲಕ ಪ್ರಕೃತಿ ಉಳಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು ಎಂದು ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷ ಯು.ನರಸಿಂಹಯ್ಯ ಹೇಳಿದರು.

ರಾಮನಗರ ತಾಲೂಕಿನ ಶ್ಯಾನುಭೋಗನಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಗಿಡ ನೆಡುವ ಕಾರ್ಯಕ್ರಮ ಹಾಗೂ ವಿದ್ಯಾರ್ಥಿಗಳಿಗೆ ಪರಿಸರ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮ ಪೋಷಕರಿಗೆ ಕೃಷಿಯೊಂದಿಗೆ ಅರಣ್ಯ ಕೃಷಿಯ ಮಹತ್ವವನ್ನು ತಿಳಿಸಬೇಕು. ಖಾಲಿ ಜಾಗಗಳಲ್ಲಿ ಹಾಗೂ ಜಮೀನಿನ ಅಂಚುಗಳಲ್ಲಿ ಮರಗಳನ್ನು ಬೆಳೆಸುವುದರಿಂದ ಪರಿಸರ ಸಮತೋಲನ ಕಾಪಾಡುವುದರ ಜೊತೆಗೆ ರೈತರಿಗೆ ಹೆಚ್ಚುವರಿ ಆದಾಯವೂ ದೊರೆಯುತ್ತದೆ ಎಂದು ತಿಳಿಸಿದರು.

ಮುಂದಿನ ಪೀಳಿಗೆಗೆ ಉತ್ತಮ ಪರಿಸರವನ್ನು ಉಳಿಸಬೇಕಾದರೆ ಪ್ರತಿಯೊಬ್ಬರೂ ಮರ ನೆಟ್ಟು ಬೆಳೆಸುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಪ್ರಕೃತಿಯೊಂದಿಗೆ ಹೊಂದಾಣಿಕೆ ಸಾಧಿಸಿದರೆ ಮಾತ್ರ ಸುಸ್ಥಿರ ಜೀವನ ಸಾಧ್ಯವಾಗುತ್ತದೆ ಎಂದು ಅವರು ಹೇಳಿದರು.

ಬ್ಯಾಂಕ್‌ನ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಎಂ.ಆರ್.ಶಿವಕುಮಾರಸ್ವಾಮಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಅರಣ್ಯ ಪ್ರದೇಶಗಳು ಕ್ಷೀಣಿಸುತ್ತಿದ್ದು, ಜನಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಪರಿಸರ ಸಮತೋಲನಕ್ಕೆ ಹೆಚ್ಚಿನ ಮರಗಳ ಅಗತ್ಯವಿದೆ. ಅಭಿವೃದ್ಧಿ ಕಾಮಗಾರಿಗಳಿಂದ ನಾಶವಾಗುತ್ತಿರುವ ಮರಗಳಿಗೆ ಪರ್ಯಾಯವಾಗಿ ಹೊಸ ಗಿಡಗಳನ್ನು ನೆಟ್ಟು ಬೆಳೆಸುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಹೇಳಿದರು.

ಬ್ಯಾಂಕ್ ಉಪಾಧ್ಯಕ್ಷ ವಿನೋದ್ ಕೆ.ಪಟೇಲ್ ಮಾತನಾಡಿ, ಅರಣ್ಯ ನಾಶದಿಂದ ಕಾಡುಪ್ರಾಣಿಗಳು ನಾಡಿಗೆ ಬರುತ್ತಿರುವ ಘಟನೆಗಳು ಹೆಚ್ಚಾಗುತ್ತಿವೆ. ಪ್ರಕೃತಿಯನ್ನು ನಿರ್ಲಕ್ಷಿಸಿದ ಪರಿಣಾಮವಾಗಿ ಹವಾಮಾನ ವೈಪರೀತ್ಯ ಸೇರಿದಂತೆ ಹಲವು ಸಮಸ್ಯೆಗಳು ಎದುರಾಗುತ್ತಿವೆ. ಉತ್ತಮ ಪರಿಸರ ನಿರ್ಮಾಣಕ್ಕಾಗಿ ಹೆಚ್ಚಿನ ಪ್ರಮಾಣದಲ್ಲಿ ಗಿಡಗಳನ್ನು ಬೆಳೆಸಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಬ್ಯಾಂಕ್ ನಿರ್ದೇಶಕರಾದ ಆರ್.ಮಲ್ಲೇಶ್, ಹೆಚ್.ಕೆ.ನಂಜಪ್ಪ (ಗೋಪಿ), ಶಿವಣ್ಣ, ಎಲ್.ಎಂ. ಸಂತೋಷ್, ಜೆ.ಬಿ.ಪುಟ್ಟಮಾರೇಗೌಡ, ರಾಜಣ್ಣ, ಜಯಲಕ್ಷ್ಮಮ್ಮ, ಗೋವಿಂದನಾಯಕ, ಚಂದ್ರೇಗೌಡ, ಹೆಚ್.ಎನ್.ಸುಮಿತ್ರಾ, ಕರಿಹುಚ್ಚಮ್ಮ, ಜಿಲ್ಲಾ ವ್ಯವಸ್ಥಾಪಕ ಸುರೇಶ್ ಹಾಗೂ ಬ್ಯಾಂಕ್ ವ್ಯವಸ್ಥಾಪಕ ರಾಜೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಸಹಕಾರದಿಂದ ಅಭಿವೃದ್ಧಿ ಸಾಧ್ಯ: ಡಾ.ಎಂ.ವಿ.ವೆಂಕಟೇಶ್



**ರಾಮನಗರ:** ಮನುಷ್ಯ ಹುಟ್ಟಿನಿಂದ ಸಾವಿನವರೆಗೂ ಸಹಕಾರದೊಂದಿಗೆ ಜೀವನ ನಡೆಸುತ್ತಾನೆ. ಸಹಕಾರ ಕ್ಷೇತ್ರವು ಸಮಾಜದ ಎಲ್ಲ ಚಟುವಟಿಕೆಗಳಲ್ಲೂ ಮಹತ್ವದ ಪಾತ್ರ ವಹಿಸುತ್ತಿದ್ದು, ಸಹಕಾರದಿಂದ ಮಾತ್ರ ಸಮಗ್ರ ಅಭಿವೃದ್ಧಿ ಸಾಧ್ಯ ಎಂದು ಸಹಕಾರ ಇಲಾಖೆಯ ಸಹಕಾರ ಸಂಘಗಳ ನಿಬಂಧಕರಾದ ಡಾ. ಎಂ.ವಿ. ವೆಂಕಟೇಶ್ ಹೇಳಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸಹಕಾರ ಇಲಾಖೆ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಬೆಂಗಳೂರು ದಕ್ಷಿಣ ಜಿಲ್ಲಾ ಸಹಕಾರ ಒಕ್ಕೂಟ ಹಾಗೂ ಜಿಲ್ಲೆಯ ವಿವಿಧ ಸಹಕಾರ ಸಂಘಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಸಹಕಾರ ಸಪ್ತಾಹ ಆಚರಣೆ–2026 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಹಕಾರ ಇಲಾಖೆಯನ್ನು ಇನ್ನಷ್ಟು ಬಲಪಡಿಸಲು ಹಾಗೂ ಸಹಕಾರ ಕ್ಷೇತ್ರದ ಮಹತ್ವವನ್ನು ಜನರಿಗೆ ತಿಳಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರತಿವರ್ಷ ಸಹಕಾರ ಸಪ್ತಾಹವನ್ನು ಆಚರಿಸುತ್ತಿವೆ. 'ಸಹಕಾರದಿಂದ ಸಮೃದ್ಧಿ' ಎಂಬ ಧ್ಯೇಯದೊಂದಿಗೆ ಜೂನ್ 29ರಿಂದ ಜುಲೈ 6ರವರೆಗೆ ರಾಜ್ಯಾದ್ಯಂತ ಸಹಕಾರ ಸಪ್ತಾಹವನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಮನುಷ್ಯನ ಜೀವನದ ಪ್ರತಿಯೊಂದು ಹಂತದಲ್ಲೂ ಸಹಕಾರ ಕ್ಷೇತ್ರದ ನೇರ ಅಥವಾ ಪರೋಕ್ಷ ಸಂಬಂಧವಿದೆ. ರೈತರ ಅಭಿವೃದ್ಧಿ, ಬಡತನ ನಿರ್ಮೂಲನೆ, ಗ್ರಾಮೀಣ ಆರ್ಥಿಕ ಪ್ರಗತಿ ಸೇರಿದಂತೆ ದೇಶದ ಅಭಿವೃದ್ಧಿಯಲ್ಲಿ ಸಹಕಾರ ಸಂಘಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಅಭಿಪ್ರಾಯಪಟ್ಟರು.

ಮಹಾರಾಷ್ಟ್ರ, ಗುಜರಾತ್ ಹಾಗೂ ಕೇರಳ ರಾಜ್ಯಗಳಲ್ಲಿ ಸಹಕಾರ ಕ್ಷೇತ್ರವು ಅತ್ಯಂತ ಬಲಿಷ್ಠವಾಗಿದೆ. ಸಹಕಾರ ಸಂಘಗಳನ್ನು ಇನ್ನಷ್ಟು ಸದೃಢಗೊಳಿಸುವ ಮೂಲಕ ರೈತರ ಆದಾಯ ಹೆಚ್ಚಿಸುವುದು, ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸುವುದು ಹಾಗೂ ದೇಶದ ಅಭಿವೃದ್ಧಿಗೆ ವೇಗ ನೀಡಬಹುದು ಎಂದು ತಿಳಿಸಿದರು.

ರಾಜ್ಯದ ಪ್ರತಿಯೊಂದು ಗ್ರಾಮದಲ್ಲೂ ಸಹಕಾರ ಸಂಘಗಳನ್ನು ಶಕ್ತಿಕೇಂದ್ರಗಳನ್ನಾಗಿ ರೂಪಿಸುವ ಉದ್ದೇಶದಿಂದ ಸರ್ಕಾರ ಕಾರ್ಯನಿರ್ವಹಿಸುತ್ತಿದೆ. ಕೇವಲ ಸಾಲ ವಿತರಣೆ ಮಾತ್ರವಲ್ಲದೆ, 25ಕ್ಕೂ ಹೆಚ್ಚು ವಿವಿಧ ಸೇವೆಗಳನ್ನು ಒದಗಿಸುವ ಬಹುಉದ್ದೇಶದ ವಾಣಿಜ್ಯ ಕೇಂದ್ರಗಳಾಗಿ ಸಹಕಾರ ಸಂಘಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಹೇಳಿದರು.

ರೈತರ ಮೂಲಭೂತ ಅಗತ್ಯಗಳನ್ನು ಪೂರೈಸುವಲ್ಲಿ ಸಹಕಾರ ಇಲಾಖೆಯ ಪಾತ್ರ ಮಹತ್ವದ್ದಾಗಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ವಿವಿಧ ಸೇವೆಗಳನ್ನು ಪರಿಣಾಮಕಾರಿಯಾಗಿ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸಹಕಾರ ಸಂಘಗಳಲ್ಲಿ ಕಾರ್ಯನಿರ್ವಹಿಸುವವರು ಪ್ರಾಮಾಣಿಕತೆ ಹಾಗೂ ದಕ್ಷತೆಯಿಂದ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಎಚ್.ಎನ್. ಅಶೋಕ್ ಮಾತನಾಡಿ, ಸರ್ಕಾರಿ ನೌಕರರ ವೇತನ ಸೇರಿದಂತೆ ವಿವಿಧ ಸರ್ಕಾರಿ ವಹಿವಾಟುಗಳು ಜಿಲ್ಲಾ ಮಟ್ಟದ ಡಿಸಿಸಿ ಬ್ಯಾಂಕ್‌ಗಳ ಮೂಲಕ ನಡೆಯುವಂತಾದರೆ ಸಹಕಾರಿ ಬ್ಯಾಂಕುಗಳ ಬೆಳವಣಿಗೆಗೆ ನೆರವಾಗುತ್ತದೆ. ಈ ಕುರಿತು ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದರು.

ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಸಹಕಾರ ಕ್ಷೇತ್ರಕ್ಕೆ ಉತ್ತಮ ಅವಕಾಶಗಳಿವೆ. ಹಾಲು ಉತ್ಪಾದನೆಯಲ್ಲಿ ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆ ಮುಂಚೂಣಿಯಲ್ಲಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಧನಂಜಯ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಮಂಜು, ಲಿಂಗೇಶ್ ಕುಮಾರ್, ಜೆಆರ್‌ಸಿಎಸ್ ಡಾ.ಉಮೇಶ್, ಜಂಟಿ ನಿಬಂಧಕ ಪುಂಡಲೀಕ ಎಲ್.ಸಾಧುರೆ, ನಿರ್ದೇಶಕರಾದ ಚಂದ್ರೇಗೌಡ, ರಾಜಣ್ಣ, ಕ್ಯಾಸಾಪುರ ಶ್ರೀಧರ್, ಕೆ.ಪಿ. ಗುರುಸ್ವಾಮಿ, ಸಹಕಾರ ಉಪನಿಬಂಧಕಿ ಕವಿತಾ, ಸಹಾಯಕ ನಿಬಂಧಕ ಪ್ರದೀಪ್ ಕುರ್ಮಾ, ಸಹಕಾರ ಅಭಿವೃದ್ಧಿ ಅಧಿಕಾರಿ ಮಂಜುನಾಥ್ ಸೇರಿದಂತೆ ವಿವಿಧ ಸಹಕಾರ ಸಂಘಗಳ ಪದಾಧಿಕಾರಿಗಳು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

# ಸಹಸ್ರ ಸಸಿ ನೆಡುವ ಅಭಿಯಾನ ಜು.12ಕ್ಕೆ

**ಮಂಡ್ಯ:** ಪರಿಸರ ಸಂರಕ್ಷಣೆಗೆ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಜು.12 ರಂದು ಬೆಳಿಗ್ಗೆ 9.30ಕ್ಕೆ ವಿಶ್ವ ಪರಿಸರ ದಿನಾಚರಣೆ–2026 ಅಂಗವಾಗಿ ಮಾತೃಗೊಂದು ಮರುಸಹಸ್ರ ಸಸಿ ನೆಡುವ ಅಭಿಯಾನ 4ನೇ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ನಾಗಮಂಗಲ ತಾಲೂಕಿನ ಪಡುವಳಪಟ್ಟಣ ಗ್ರಾಮದ ಕಾನನ್ ಬ್ರಹ್ಮದಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ಸಸಿ ನೆಡುವ ಮೂಲಕ ಹಸಿರು ವಿಸ್ತರಣೆಗೆ ಮಹತ್ವದ ಕೊಡುಗೆ ನೀಡಲಾಗುವುದು ಎಂದು ಹೇಳಿದರು.

ಕಾರ್ಯಕ್ರಮವನ್ನು ಶಿಸ್ತಿನಿಂದ ಹಾಗೂ ಯಶಸ್ವಿಯಾಗಿ ನಡೆಸಲು ಎಲ್ಲಾ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಸ್ಥಳದ ಸ್ವಚ್ಛತೆ, ನೀರಿನ ವ್ಯವಸ್ಥೆ, ನೆರಳಿನ ವ್ಯವಸ್ಥೆ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಸರಿಯಾಗಿ ಕಲ್ಪಿಸಬೇಕು ಎಂದು ಸೂಚಿಸಿದರು. ಯಾವುದೇ ಲೋಪವಾಗದಂತೆ ಪೂರ್ವಸಿದ್ಧತೆ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಕಾರ್ಯಕ್ರಮದ ದಿನ ಶಾಲಾಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ಹಾಗೂ ವಿವಿಧ ಸಂಘಸಂಸ್ಥೆಗಳ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಲಾಯಿತು. ಪರಿಸರ ಸಂರಕ್ಷಣೆಯ ಮಹತ್ವವನ್ನು ಜನರಿಗೆ ತಲುಪಿಸುವುದು ಈ ಅಭಿಯಾನದ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು.ಸಭೆಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರು, ಸದಸ್ಯ ಕಾರ್ಯದರ್ಶಿಗಳು, ಜಿಪಂ ಸಿಇಒ ಕೆ.ಆರ್.ನಂದಿನಿ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



# ತಹಶೀಲ್ದಾರ್ ಹಾಗೂ ಉಪವಿಭಾಗಾಧಿಕಾರಿಯನ್ನು ಸೇವೆಯಿಂದ ವಜಾಗೊಳಿಸಲು ಒತ್ತಾಯ




**ಮಂಡ್ಯ:** ಪತಿಯ ಜಮೀನು ಪತ್ನಿ ಹೆಸರಿಗೆ ಪೌತಿಕಾತೆ ಮಾಡದ ಕೆ.ಆರ್.ಪೇಟೆ ತಹಶೀಲ್ದಾರ್ ಹಾಗೂ ಪಾಂಡವಪುರ ಉಪವಿಭಾಗಾಧಿಕಾರಿಯನ್ನು ಸೇವೆ ಯಿಂದ ವಜಾ ಮಾಡುವಂತೆ ಒತ್ತಾಯಿಸಿ ಜು.9ರಂದು ಪಾಂಡವಪುರ ಉಪವಿಭಾಗಾಧಿಕಾರಿ ಕಚೇರಿ ಎದುರು ಪ್ರತಿಭಟನೆ ಮಾಡುವುದಾಗಿ ದಲಿತ ಸಂಘರ್ಷ ಸಮಿತಿಯ ದೇವರಾಜು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರಕಾರದಿಂದ ನೀಡಲಾದ ದರಕಾಸ್ತು ಜಮೀನನ್ನು ಪತಿಯ ಸಾವಿನ ನಂತರ ಚೌಡಮ್ಮ ಹೆಸರಿಗೆ ಮಾಡಲು ಅನಗತ್ಯ ತೊಂದರೆ ನೀಡಲಾಗುತ್ತಿದೆ. ಇದು ಅಧಿಕಾರಿಗಳ ಜಾತಿವಾದಿತನ, ದನದಾಹಿ, ದಲಿತ ವಿರೋಧಿ ನೀತಿಯನ್ನು ತೋರುತ್ತದೆ ಎಂದು ಆರೋಪಿಸಿದರು.

ಈ ಸಂಬಂಧ ರಾಜಸ್ವ ನಿರೀಕ್ಷಕಿ ಚಂದ್ರಕಲಾ ಅವರು ಪಾಂಡವಪುರ ಉಪವಿಭಾಗಾಧಿಕಾರಿ ನ್ಯಾಯಾಲಯದ ಆದೇಶ ನಿರ್ಲಕ್ಷಿಸಿ ತಹಶೀಲ್ದಾರ್ ಅವರಿಗೆ ತಪ್ಪಾದ ವರದಿ ನೀಡಿದ್ದಾರೆ. ಇದರಿಂದ ಹಾಲಿ ಉಪವಿಭಾಗಾಧಿಕಾರಿಗಳು ಸಿವಿಲ್ ನ್ಯಾಯಾಲಯದ ವ್ಯಾಪ್ತಿಗೆ ಬರದ ಪಿಟಿಸಿಎಲ್ ಪ್ರಕರಣವಾಗಿ ಪರಿಗಣಿಸಿ ಆದೇಶ ನೀಡಿದ್ದಾರೆ ಎಂದು ದೂರಿದರು.

ಈ ಹಿಂದೆ ಇದ್ದ ಉಪವಿಭಾಗಾಧಿಕಾರಿಗಳ ಆದೇಶ ಧಿಕ್ಕರಿಸಿ ಪಿಟಿಸಿಎಲ್ ಕಾಯ್ದೆಯ ಅರಿವಿಲ್ಲದೇ ಗಂಡನ ಜಮೀನನ್ನು ಪೌತಿಕಾತೆ ಮಾಡದೇ ಕಾನೂನು ಬಾಹಿರವಾಗಿ ತಹಶೀಲ್ದಾರ್ ಮತ್ತು ಪಾಂಡವಪುರ ಹಾಲಿ ಉಪವಿಭಾಗಾಧಿಕಾರಿಗಳು ತಮ್ಮ ಕೇಸ್‌ವರ್ಕರ್ ಪುನೀತ್ ಹೇಳಿದಂತೆ ನಡೆದುಕೊಳ್ಳುತ್ತಿದ್ದಾರೆ. ಈ ಸಂಬಂಧ ಕಂದಾಯ ಇಲಾಖೆಯಿಂದ ತನಿಖೆ ನಡೆಸಬೇಕು. ಕಾನೂನು ವಿರೋಧಿ ನೀತಿ ಅನುಸರಿಸುತ್ತಿರುವ ಉಪವಿಭಾಗಾಧಿಕಾರಿ ಶ್ರೀನಿವಾಸ್ ಹಾಗೂ ತಹಶೀಲ್ದಾರ್ ಉಮಮಹೇಶ್ವರಪ್ಪ ಅಶೋಕ, ಮತ್ತವರ ಕೇಸ್‌ವರ್ಕರ್ ಪುನೀತ್, ಬೂಕನಕೆರೆ ರಾಜಸ್ವ ನಿರೀಕ್ಷಕಿ ಚಂದ್ರಕಲಾ ಅವರನ್ನು ಸೇವೆಯಿಂದ ವಜಾ ಮಾಡಬೇಕು ಎಂದು ಆಗ್ರಹಿಸಿದರು.

ಗೋಷ್ಠಿಯಲ್ಲಿ ರಮೇಶ್, ಗಂಗಾಧರ್, ಚೌಡಮ್ಮ, ಶಿವಲಿಂಗಯ್ಯ ಇತರರಿದ್ದರು.

# ವಿದ್ಯಾರ್ಥಿಗಳು ಸತತ ಪರಿಶ್ರಮದಿಂದ ಓದಿದಾಗ ಮಾತ್ರ ಯಶಸ್ಸು ಸಾಧ್ಯ: ಪ್ರಸನ್ನಕುಮಾರ್ ಅಭಿಮತ



**ಮಳವಳ್ಳಿ:** ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಹತ್ತಿರ ಬರು ವವರೆಗೂ ಉದಾಸೀನತೆಯಿಂದ ನಡೆದು ಕೊಳ್ಳುತ್ತಾರೆ. ಪರೀಕ್ಷೆ ಸಮೀಪಿಸಿದಾಗ ಪುಸ್ತಕ ಹಿಡಿದು ಓದಲು ಮುಂದಾಗುತ್ತಾರೆ. ಇದು ಒಳ್ಳೆಯ ದಲ್ಲ. ಸತತ ಪರಿಶ್ರಮದಿಂದ ಓದಿದಾಗ ಮಾತ್ರ ಯಶಸ್ಸು ಕಾಣಲು ಸಾಧ್ಯ ಎಂದು ಶಾಲಾಶಿಕ್ಷಣ(ಪದವಿ ಪೂರ್ವ) ಇಲಾಖೆಯ ಉಪನಿರ್ದೇಶಕರಾದ ಪ್ರಸನ್ನಕುಮಾರ್ ತಿಳಿಸಿದರು.

ತಾಲ್ಲೂಕಿನ ಸರಗೂರು ಹ್ಯಾಂಡ್ ಪೋಸ್ಟ್‌ನಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಜುಲೈ 03ರ ಶುಕ್ರವಾರ ಸಾಂಸ್ಕೃತಿಕ, ಕ್ರೀಡಾಚಟುವಟಿಕೆಗಳ ಉದ್ಘಾಟನೆ ಮತ್ತು ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಹಾಗೂ ಸರ್ಕಾರಿ ಶುಲ್ಕ ಪಾವತಿ,ಸಮವಸ್ತ್ರ, ನೋಟ್ ಬುಕ್,ಪ್ರಾಕ್ಟಿಕಲ್ ಬುಕ್ ವಿತರಣಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಗುರುಗಳು ಹೇಳಿಕೊಟ್ಟ ಪಾಠ ಪ್ರವಚನಗಳನ್ನು ಶ್ರದ್ಧೆಯಿಂದ ಓದಬೇಕು. ಮನೆಗೆ ಹೋದ ಬಳಿಕ ಅಂದಿನ ಪಾಠಗಳನ್ನು ಅಂದೇ ಮನನ ಮಾಡಿಕೊಳ್ಳಬೇಕು. ನೂರಕ್ಕೆ ನೂರರಷ್ಟು ಫಲಿತಾಂಶಕ್ಕೆ ಶ್ರಮಿಸಿ ಓದಬೇಕು, ನಿಮ್ಮ ತಂದೆ ತಾಯಿ, ನಿಮ್ಮ ಊರಿಗೆ ಕೀರ್ತಿ ತರುವಂತರಾಗಬೇಕು" ಎಂದು ತಿಳಿಸಿದರು

ಲಯನ್ಸ್ ಜಿಲ್ಲೆ317ಉ ನ ಎರಡನೇ ಉಪಜಿಲ್ಲಾ ರಾಜ್ಯಪಾಲರಾದ ಲಯನ್ ಎಂ ಸಿದ್ದೇಗೌಡ ಮಾತನಾಡಿ"ಈ ಹಿಂದೆ ನಾವು ವಿದ್ಯಾಭ್ಯಾಸ ಮಾಡುವ ವೇಳೆ ಸುಮಾರು ಐದರಿಂದ ಆರು ಕಿಲೋಮೀಟರ್ ದೂರ ನಡೆದು ಕೊಂಡು ಶಾಲೆಗೆ ಹೋಗುತ್ತಿದ್ದವು. ಅಂದು ನಾವು ಪಟ್ಟಂತ ಶ್ರಮದ ಫಲದಿಂದಲೇ ಇಂದು ಉನ್ನತ ಹುದ್ದೆಯಲ್ಲಿದ್ದೇವೆ ಪ್ರಾಂಶುಪಾಲರಾದ ಹನುಮಂತಯ್ಯ ರವರು ಬರೀ ಪಾಠಮಾಡಬಹುದಿತ್ತು. ಆದರೆ ಗ್ರಾಮೀಣಪ್ರದೇಶದ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ದಾನಿಗಳ ನೆರವಿನಿಂದ ಸಮವಸ್ತ್ರ, ನೋಟ್ ಬುಕ್ ಕೊಡಿಸುವುದರ ಜೊತೆಗೆ,ಸರ್ಕಾರಿ ಶುಲ್ಕ ಪಾವತಿ ಮಾಡಿಸುತ್ತಿದ್ದಾರೆ.ನೀವು ಇದರ ಉಪಯೋಗ ಪಡೆದುಕೊಂಡು ಉನ್ನತ ಅಧಿಕಾರಿಗಳಾಗಿ ಬಡ ವಿದ್ಯಾರ್ಥಿಗಳಿಗೆ ತಮ್ಮ ಕೈಲಾದ ಸೇವೆ ಮಾಡಿ"ಎಂದು ತಿಳಿಸಿದರು.

ಪ್ರಾಂಶುಪಾಲರಾದ ಹನುಮಂತಯ್ಯ ಅಧ್ಯಕ್ಷತೆ ವಹಿಸಿದ್ದರು.

ದ್ವಿತೀಯ ಪಿಯುಸಿಯಲ್ಲಿ ನೂರಕ್ಕೆ ನೂರು ಫಲಿತಾಂಶ ನೀಡಿರುವ ಉಪನ್ಯಾಸಕರನ್ನು ಮತ್ತು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿರುವ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು

ಲಯನ್ಸ್ ಲಿಯೋ ಕ್ಲಬ್ ನ ಜಿಲ್ಲಾ ಅಧ್ಯಕ್ಷ ರಾದ ಲ.ಬಿ ಜೆ ಮನು,ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಬಿ ಕುಮಾರಸ್ವಾಮಿ, ಮಂಡ್ಯದ ಪ್ರಾಂಶುಪಾಲರಾದ ಗುರು ಲಿಂಗೇಗೌಡ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಉಪನ್ಯಾಸಕರಾದ ಡಾ.ಎನ್ ಕೃಷ್ಣಪ್ಪ, ಎಸ್ ಜಯಶ್ರೀ, ಶೋಭ,ವಿ.ಗಿರಿಧರ,ಕುಂದೂರನಾಯಕ, ಲೋಕೇಶ್ ಕುಮಾರ್ ಮುಂತಾದವರು ಉಪಸ್ಥಿತರಿದ್ದರು

# ಮಡಿವಾಳ ಸಮುದಾಯಕ್ಕೆ ಎಂಎಲ್‌ಸಿ ಸ್ಥಾನ ನೀಡಬೇಕು: ಕೆ.ವಿ. ಅಮರ್‌ನಾಥ್ ಪರ ಗುರುರಾಜ್ ಆಗ್ರಹ




**ಮಂಡ್ಯ:** ಕಾಂಗ್ರೆಸ್ ಪಕ್ಷದಲ್ಲಿರುವ ಮಡಿವಾಳ ಸಮುದಾಯದ ಕೆ.ವಿ.ಅಮರ್‌ನಾಥ್ ಅವರಿಗೆ ರಾಜ್ಯ ಸರಕಾರವು ವಿಧಾನ ಪರಿಷತ್ ಸದಸ್ಯ ಸ್ಥಾನ ನೀಡಬೇಕೆಂದು ಶ್ರೀ ವೀರಮಡಿವಾಳ ಮಾಚಿದೇವ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ಬಿ.ಟಿ.ಗುರುರಾಜ್ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜು.25ರಂದು 5 ವಿಧಾನಪರಿಷತ್ ಸದಸ್ಯತ್ವ ಸ್ಥಾನಗಳು ಖಾಲಿಯಾಗಲಿವೆ. ಅದರಲ್ಲಿ ಒಂದು ಸ್ಥಾನವನ್ನು ಮಡಿವಾಳ ಸಮುದಾಯಕ್ಕೆ ಕಾಂಗ್ರೆಸ್ ಸರಕಾರ ನೀಡಲು ಮುಂದಾಗಬೇಕು ಎಂದರು.

ರಾಜ್ಯದಲ್ಲಿ ಬಿಜೆಪಿ ಪಕ್ಷ ಮಡಿವಾಳ ಸಮುದಾಯದವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಿದೆ. ಆದರೆ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಸಮುದಾಯಕ್ಕೆ ಈ ರೀತಿಯ ರಾಜಕೀಯ ಅವಕಾಶ ನೀಡಿಲ್ಲ. ಕಳೆದ ವಿಧಾನಸಭೆ ಚುನಾವಣೆ ವೇಳೆ ತುಮಕೂರು ಜಿಲ್ಲೆಯಲ್ಲಿ ಮಡಿವಾಳರ ಬೃಹತ್ ಜನಜಾಗೃತಿ ಸಮಾವೇಶದಲ್ಲಿ ಸಮುದಾಯಕ್ಕೆ ಒಂದು ಎಂಎಲ್‌ಸಿ ಸ್ಥಾನ ನೀಡಿ, ವಿಧಾನಸಭೆಗೆ ಸ್ಪರ್ಧಿಸಲು ಅವಕಾಶ ನೀಡುವುದಾಗಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಹಾಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ ನೀಡಿದ್ದರು ಎಂದು ಹೇಳಿದರು.

ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಗೆಲ್ಲಲು ಮಡಿವಾಳ ಸಮುದಾಯ ಸಂಪೂರ್ಣ ಬೆಂಬಲ ನೀಡಿದೆ. ಆದ್ದರಿಂದ ಕೆ.ವಿ.ಅಮರ್‌ನಾಥ್ ಅವರಿಗೆ ಎಂಎಲ್‌ಸಿ ಸ್ಥಾನ ನೀಡಬೇಕು. ಇಲ್ಲದಿದ್ದರೆ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸದಂತೆ ನಿರ್ಣಯ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಗೋಷ್ಠಿಯಲಿ ಮಂಡ್ಯ ಜಿಲ್ಲಾ ಮಡಿವಾಳರ ಸಂಘದ ಜಿಲ್ಲಾಧ್ಯಕ್ಷ ಎಂ.ಎನ್.ರವಿ, ಮುಖಂಡರಾದ ಗೋವಿಂದಪ್ಪ, ಕೃಷ್ಣ, ಶಿವಲಿಂಗಯ್ಯ, ಶಂಕರಪ್ಪ, ನಾರಾಯಣ ಇತರರಿದ್ದರು.

# ಅರಣ್ಯ ಇಲಾಖೆ ದಿನಗೂಲಿ ಹಾಗೂ ಹೊರಗುತ್ತಿಗೆ ನೌಕರರಿಗೆ ಕನಿಷ್ಠ ವೇತನ ನೀಡಲು ಆಗ್ರಹ




**ಮಂಡ್ಯ:** ರಾಜ್ಯ ವ್ಯಾಪ್ತಿ ಅರಣ್ಯ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ದಿನಗೂಲಿ ಹಾಗೂ ಹೊರಗುತ್ತಿಗೆ ನೌಕರರಿಗೆ ಕನಿಷ್ಠ ವೇತನ ನೀಡುವಂತೆ ಹಾಗೂ ನಾನಾ ಬೇಡಿಕೆಗಳನ್ನು ಈಡೇರಿಸಲು ಸರಕಾರ ಮುಂದಾಗಬೇಕು ಎಂದು ಕರ್ನಾಟಕ ರಾಜ್ಯ ಅರಣ್ಯ ಇಲಾಖೆಯ ದಿನಗೂಲಿ ಹಾಗೂ ಎಸ್ಸಿ, ಎಸ್ಟಿ ನೌಕರರ ಸಂಘದ ರಾಜ್ಯಾಧ್ಯಕ್ಷ ಎಚ್.ಚಂದ್ರಪ್ಪ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರಕಾರವು ವಿವಿಧ ಅನುಸೂಚಿತ ಏಕಪರೂಪ ಕರಡು ಅಧಿಸೂಚನೆಯನ್ವಯ ಪರಿಷ್ಕರಣೆ ಮಾಡಿ ಎಲ್ಲ ವರ್ಗದ ಕಾರ್ಮಿಕರಿಗೂ ಸಮಾನ ಕನಿಷ್ಠ ವೇತನ ನಿಗಧಿ ಪಡಿಸಿದೆ. ಆದರೆ ಗುತ್ತಿಗೆದಾರ ಸಂಸ್ಥೆಗಳು ಹಿಂದಿನ ಕನಿಷ್ಠ ವೇತನವನ್ನೇ ನೀಡುತ್ತಿವೆ ಎಂದು ದೂರಿದರು.

ರಾಜ್ಯದಲ್ಲಿ ಅರಣ್ಯ ಇಲಾಖೆಯ ದಿನಗೂಲಿ ಹಾಗೂ ಹೊರಗುತ್ತಿಗೆ ನೌಕಕರನ್ನು ನೇಮಕ ಮಾಡಿಕೊಂಡಿರುವ ಸಂಸ್ಥೆ ಯಾವುದು ಎಂಬುದು ತಿಳಿದಿಲ್ಲ. ಪರಿಷ್ಕೃತ ಕನಿಷ್ಠ ವೇತನ 23 ಸಾವಿರ ಇದೆ. ಹಿಂದಿನ ಕುಶಲ ನೌಕರರಿಗೆ 18,523 ರೂ, ಅಕುಶಲ ನೌಕರರಿಗೆ 16,250ರೂ, ಹಾಗೂ ಅರೆ ಕುಶಲ ನೌಕರರಿಗೆ 16,120ರೂ.ಗಳ ಕನಿಷ್ಠ ವೇತನ ನೀಡುತ್ತಿಲ್ಲ. ತಮ್ಮಿಚ್ಚೆಗೆ ಬಂದಂತೆ 12ರಿಂದ 15 ಸಾವಿರ ರೂ.ಗಳನ್ನು ವೇತನವಾಗಿ ನೀಡಲಾಗುತ್ತಿದೆ ಎಂದು ಆರೋಪಿಸಿದರು.

ಕೂಡಲೇ ರಾಜ್ಯ ಸರಕಾರ ಪರಿಷ್ಕೃತ ಕನಿಷ್ಠ ವೇತನ ನೀಡಬೇಕು ಇಲ್ಲವಾದಲ್ಲಿ ಆಗಸ್ಟ್ ತಿಂಗಳಿನಿಂದ ಅನಿರ್ಧಿಷ್ಟಾವಧಿ ಧರಣಿ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಶಿವಣ್ಣ, ಮರೀಗೌಡ, ಕುಮಾರ, ಸುಕನ್ಯಮ್ಮ, ನಾಗೇಶ್ ಇದ್ದರು.

# ಅರಿಷಿಣ ಕುಂಕುಮದ ಮಹತ್ವ



| ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.



ನಮ್ಮ ಹಿಂದೂ ಸಂಪ್ರದಾಯದಲ್ಲಿ ಅರಿಷಿಣ ಕುಂಕುಮಕ್ಕೆ ಪವಿತ್ರ ಸ್ಥಾನವಿದ್ದು ಯಾವುದೇ ಪೂಜೆ ಹಾಗೂ ಇನ್ನಿತರ ಸಮಾರಂಭದಲ್ಲಿ ಇವುಗಳನ್ನು ವಿಶೇಷವಾಗಿ ಬಳಸಿಕೊಳ್ಳುತ್ತಾರೆ. ಮದುವೆ,ಮುಂಜಿ,ಗೃಹಪ್ರವೇಶ,ಹಬ್ಬಹರಿದಿನಗಳಲ್ಲಿ ಮನೆಗೆ ವಸ್ತುಗಳನ್ನು ತರುವ ಮೊದಲು ಶುಭಸಂಕೇತವಾಗಿ ಅರಿಷಿಣ ಕುಂಕುಮ ತರಿಸಿ ಮುಂದಿನ ತಯಾರಿ ಮಾಡುತ್ತಾರೆ.ಸ್ತ್ರೀಯರು ತಮ್ಮ ಹಣೆಗೆ ಕುಂಕುಮ,ಕೆನ್ನೆಗೆ ಅರಿಷಿಣ ಹಚ್ಚುವ ಪದ್ಧತಿ ನಡೆದುಬಂದಿದೆ.

ಅರಿಷಿಣ– ಇದು ಶುದ್ಧೀಕರಣದ ಸಂಕೇತ.ಹೆಣ್ಣು ಋತುಮತಿಯಾದಾಗ ಶುದ್ಧವಾಗಲು ಅರಿಷಿಣದ ನೀರನ್ನು ಬಳಸುತ್ತಾರೆ.ಮದುವೆ ಹೆಣ್ಣುಗಂಡಿಗೆ ಮದುವೆಯ ಮೊದಲು ಅರಿಷಿಣ ಶಾಸ್ತ್ರ ಮಾಡುತ್ತಾರೆ.ಹೆಣ್ಣಿಗೆ ಅರಿಷಿಣ ಶಾಸ್ತ್ರವೆಂದರೆ ಚಿನ್ನದ ದೇವತೆ ಅರಿಷಿಣ ಚಿನ್ನದ ಗುಣಗಳು ಬರಲಿ ಎನ್ನುವ ನಂಬಿಕೆ ಇದೆ.ನಂಬಿಕೆಯ ಪ್ರಕಾರ ಅರಿಷಿಣ ಸೂರ್ಯ,ಅದೃಷ್ಟ,ಫಲವತ್ತತೆಯ ಸಂಕೇತವಾಗಿದೆ.ಮನುಷ್ಯನ ಆಂತರಿಕ ಶಕ್ತಿಮತ್ತು ಏಳಿಗೆಯನ್ನು ಎತ್ತಿಹಿಡಿಯುತ್ತದೆ. ಆದ್ದರಿಂದ ಪವಿತ್ರ ಪೂಜಾಸಮಯದಲ್ಲಿ ಅರಿಷಿಣವನ್ನು ಬಳಸುತ್ತಾರೆ.ಅರಿಷಿಣ ಹಳದಿ ಅಥವಾ ಕಿತ್ತಳೆ ಬಣ್ಣದಲ್ಲಿ ಲಭ್ಯವಿರುತ್ತದೆ.ಹಳದಿ ಬಣ್ಣ ಕನ್ಯತ್ವ ಹಾಗೂ ಇಂದ್ರಿನಿಗ್ರಹಗಳ ದ್ಯೋತ್ಯಕವಾಗಿದ್ದರೆ ಕಿತ್ತಳೆ ಬಣ್ಣ ಸ್ಥೈರ್ಯ,ಧೈರ್ಯ,ತ್ಯಾಗದ ಸಂಕೇತವಾಗಿದೆ.

ಆರೋಗ್ಯದ ದೃಷ್ಟಿಯಿಂದ ಅರಿಷಿಣದ ಪಾತ್ರ– ಬೆಚ್ಚನೆಯ ಹಾಲಿಗೆ ಅಥವಾ ಬಿಸಿನೀರಿಗೆ ಅರಿಷಿಣ ಸೇರಿಸಿ ಸೇವಿಸುವದು ಉತ್ತಮ.ಇದು ದೇಹದಲ್ಲಿರುವ ಆಮ್ಲ,ರಕ್ತದ ಹಿಮ್ಮುಖ ಹರಿವನ್ನು,ಶೀತ,ಕೆಮ್ಮು ನಿವಾರಕವಾಗಿದೆ.ಸಣ್ಣಪುಟ್ಟ ಗಾಯಗಳನ್ನು ಗುಣಪಡಿಸುವದಲ್ಲದೇ,ತ್ವಚೆಗೆ ಹೊಳಪನ್ನು ನೀಡಿ ಆರೋಗ್ಯದಿಂದ ಸಂರಕ್ಷಿಸುತ್ತದೆ.

ಕುಂಕುಮ– ಅನಾದಿಕಾಲದಿಂದಲೂ ಕುಂಕುಮವನ್ನು ಸ್ತ್ರೀಯರು ಬಳಸುತ್ತಾ ಬಂದಿದ್ದಾರೆ. ಉತ್ತರ ಭಾರತದಲ್ಲೆ ಮದುವೆಯಾದ ಸ್ತ್ರೀಯರು ಪತಿಯ ದೀರ್ಘಾಯುಷ್ಯದ ಸಂಕೇತವೆಂದು ತಮ್ಮ ಬೈತಲೆಗೆ ಸಿಂಧೂರವೆಂದು ಧರಿಸುತ್ತಾರೆ. ಕುಂಕುಮವನ್ನು ಪೂಜೆಯ ಅಕ್ಷತೆಗೆ,ಮದುವೆ ಅಕ್ಷತೆಗೆ,ಗೆಜ್ಜೆವಸ್ತ್ರಕ್ಕೆ ಉಪಯೋಗಿಸುತ್ತಾರೆ.

ಅರಿಷಿಣ,ಕುಂಕುಮ ಎರಡೂ ನಮ್ಮ ಸಂಸ್ಕೃತಿಯ ಅತ್ಯಂತ ಪೂಜನೀಯ ವಸ್ತುಗಳಾಗಿವೆ.

# ನೇಮರ್: ಬೀದಿ ಚೆಂಡಿನಿಂದ ಶಿಖರದೆಡೆಗೆ



| ಡಾ.ಸುಧಾಕರ.ಜಿ.ಲಕ್ಕವಳ್ಳಿ



ಸ್ಫೂರ್ತಿ ಸುಧೆ - 62

ನೇಮರ್ ಡಾ ಸಿಲ್ವಾ ಸ್ಯಾಂಟೋಸ್ ಜೂನಿಯರ್ ಬ್ರೆಜಿಲ್‌ನ ಕಾಲ್ಚೆಂಡಿನ ಮಾಂತ್ರಿಕ.ಮೊಗಿ ದಾಸ್ ಕ್ರೂಜೆಸ್‌ನ ಪುಟ್ಟ ಗುಡಿಸಲಿನಲ್ಲಿ ಮೇಣದಬತ್ತಿ ಮಿನುಗುತ್ತಿತ್ತು.ಬಡತನದ ನಡುವೆ ಹದಿನಾಲ್ಕರ ಹುಡುಗನಿಗೆ ಯುರೋಪಿನಿಂದ ಆಹ್ವಾನ.ತಂದೆ ತಡೆದರು: ಹಸಿ ಮಣ್ಣು,ಇನ್ನೂ ಕಾದು ನೋಡೋಣ.ಬೀದಿಗಿಳಿದರೆ ಆ ಪಾದಗಳಲ್ಲಿ ಚೆಂಡು ಮಂತ್ರವಾದಿಯಂತೆ ಕುಣಿಯುತ್ತಿತ್ತು. ಹದಿನೇಳರ ಪ್ರಾಯಕ್ಕೆ ಸ್ಯಾಂಟೋಸ್ ಪರ ನೂರನೇ ಗೋಲು! ಪೀಲೆ ನಂತರ ಆ ಶಿಖರವನ್ನೇರಿದ ಮೊದಲ ಬಾಲಪ್ರತಿಭೆ.ಸ್ಯಾಂಟೋಸ್‌ನಿಂದ ಕ್ಯಾಟಲೋನಿಯಾಕ್ಕೆ ಹಾರಿ ಮೆಸ್ಸಿ–ಸ್ವಾರೆಜ್ ಜೊತೆ ಮೂವರು ಮಾಂತ್ರಿಕರು ಎನಿಸಿಕೊಂಡರು.

2014ರ ವಿಶ್ವಕಪ್‌ನಲ್ಲಿ ಬೆನ್ನಿಗೆ ಬರಸಿಡಿಲು.ವೈದ್ಯರು ಬೆಚ್ಚಿಬಿದ್ದರು: ಎರಡು ಬೆರಳಗಲ ಪಕ್ಕಕ್ಕಾದರೆ ಗಾಲಿಕುರ್ಚಿಯೇ ಬದುಕು.ಇಡೀ ಬ್ರೆಜಿಲ್ ಕಂಬನಿಯ ಕಡಲಾಯಿತು. ಆದರೆ 2016ರ ರಿಯೋ ಒಲಿಂಪಿಕ್ಸ್‌ನಲ್ಲಿ ನಿರ್ಣಾಯಕ ಪೆನಾಲ್ಟಿ. ಮರಕಾನಾ ಮೌನ. ಚೆಂಡು ಬಲೆಯ ಒಡಲ ಸೇರಿತು! ದೇಶಕ್ಕೆ ಮೊದಲ ಒಲಿಂಪಿಕ್ ಚಿನ್ನದ ಸಂಭ್ರಮ.ದಾಖಲೆಯ ಮೊತ್ತಕ್ಕೆ ಪ್ಯಾರಿಸ್‌ಗೆ ಹಾರಿದಾಗ ಹಣದಾಸೆ ಎಂಬ ಆಪಾದನೆ.

ಗಾಯಗಳ ಸರಮಾಲೆ,ಅಪಹಾಸ್ಯ,ಸಾಮಾಜಿಕ ಜಾಲತಾಣದ ಬಿರುಗಾಳಿಯ ನಡುವೆಯೂ ಅವರು ಬೆನ್ನಟ್ಟಿದ್ದು ಗೋಲನ್ನೇ.

ಪೀಲೆ ಅವರ ದಾಖಲೆ ಮುರಿದು ದೇಶದ ಚಿರಂತನ ಗೋಲು ದೊರೆ. 2026ರ ಫಿಫಾ ವಿಶ್ವಕಪ್ ಅಂಗಳದಲ್ಲಿ ಕೊನೆಯ ಪಂದ್ಯವನ್ನಾಡಿ ಅಂತಾರಾಷ್ಟ್ರೀಯ ಫುಟ್ಬಾಲ್‌ಗೆ ಭಾವುಕ ವಿದಾಯ ಹೇಳಿದರು. ಕ್ರೀಡಾಂಗಣ ತುಂಬೆಲ್ಲ ಕಣ್ಣೀರಿನ ಕಡಲು.ಆಟ ನಿಂತರೂ ಕನಸು ನಿಂತಿಲ್ಲ.

ಇಂದು ನೇಮರ್ ಸಂಸ್ಥೆ ಮೂಲಕ ಸಾವಿರಾರು ಬಡ ಮಕ್ಕಳ ಪಾಲಿನ ಬೆಳಕು.ಬೀಳುತ್ತೇವೆ, ನೆಲಕಚ್ಚುವುದಿಲ್ಲ ಎಂಬುದೇ ಅವರ ಮಂತ್ರ. ಗಾಯವಾದರೂ ಗುರಿ ಬಿಡದ ನೇಮರ್ ಅವರ ಬದುಕೇ ಸ್ಫೂರ್ತಿ ಕನಸಿದ್ದರೆ ಕಲ್ಲೂ ಹೂವಾಗುತ್ತದೆ.



# ಟಿವಿ ಮಾಧ್ಯಮದಲ್ಲಿ ಜ್ಯೋತಿಷ್ಯದ ಅತಿರೇಕ

ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ಟ್ರೋಲ್ ಹಾಗೂ ಆಕ್ರೋಶಕ್ಕೆ ಈಡಾದ ಒಂದು ಟಿವಿ ಕಾರ್ಯಕ್ರಮದ ಪ್ರಸಂಗವನ್ನು ಗಮನಿಸಿದರೆ, ಇಂದಿನ ಜ್ಯೋತಿಷ್ಯದ ಉದ್ಯಮ ಎಷ್ಟು ಕೆಳಮಟ್ಟಕ್ಕೆ ಇಳಿದಿದೆ ಎಂಬುದು ಸ್ಪಷ್ಟವಾಗುತ್ತದೆ. ತನ್ನನ್ನು ತಾನು ಸಂಖ್ಯಾಶಾಸ್ತ್ರಜ್ಞ (Numerologist) ಎಂದು ಕರೆದುಕೊಳ್ಳುವ ಜ್ಯೋತಿಷಿಯೊಬ್ಬ, ಖಾಸಗಿ ವಾಹಿನಿಯೊಂದರ ನೇರ ಪ್ರಸಾರದಲ್ಲಿ ಅತ್ಯಂತ ಬೇಜವಾಬ್ದಾರಿಯುತ ಹಾಗೂ ಅಸಹ್ಯಕರ ಹೇಳಿಕೆಯೊಂದನ್ನು ನೀಡಿದರು.

ಅವರ ಪ್ರಕಾರ, "ಯಾರ ಪೃಷ್ಠ ಭಾಗ (buttocks) ಚಿಕ್ಕದಾಗಿರುತ್ತದೆಯೋ ಅವರು ಅದೃಷ್ಟವಂತರು! ಚಿತ್ರನಟ ರಜನಿಕಾಂತ್ ಅವರಿಗೆ ಪೃಷ್ಠ ಭಾಗ ಚಿಕ್ಕದಾಗಿದೆ, ಹಾಗಾಗಿಯೇ ಅವರು ಅಷ್ಟು ದೊಡ್ಡ ಮಟ್ಟಕ್ಕೆ ಬೆಳೆದರು" ಎಂದು ವಿಶ್ಲೇಷಿಸಿದರು. ಅಷ್ಟಕ್ಕೇ ನಿಲ್ಲದ ಅವರು, ತನ್ನ ವಾದವನ್ನು ಸಮರ್ಥಿಸಿಕೊಳ್ಳಲು, "ಲಕ್ಷ್ಮಿಯು ಯಾವಾಗಲೂ ಹಿಂಭಾಗದಲ್ಲಿ ವಾಸಿಸುತ್ತಾಳೆ, ಅದಕ್ಕಾಗಿಯೇ ನಾವು ಹಸುವಿನ ಹಿಂಭಾಗಕ್ಕೆ (ಗೋಮಾತೆಯ ಪೃಷ್ಠಕ್ಕೆ) ನಮಸ್ಕರಿಸುತ್ತೇವೆ" ಎಂಬ ವಿಚಿತ್ರ ತರ್ಕವನ್ನು ಮಂಡಿಸಿದರು!

ವಿಜ್ಞಾನ ಯುಗದಲ್ಲಿ ಇಂತಹ ಹಾಸ್ಯಾಸ್ಪದ, ವೈಜ್ಞಾನಿಕ ಆಧಾರರಹಿತ ಹಾಗೂ ಸಾರ್ವಜನಿಕವಾಗಿ ಮಾತನಾಡಲು ಯೋಗ್ಯವಲ್ಲದ ಕೀಳುಮಟ್ಟದ ಮಾತುಗಳು'ಜ್ಯೋತಿಷ್ಯ' ಮತ್ತು 'ಶಾಸ್ತ್ರ'ದ ಹೆಸರಿನಲ್ಲಿ ಪ್ರತಿದಿನ ಬಿತ್ತರವಾಗುತ್ತಿವೆ. ಮಾಧ್ಯಮಗಳು ಟಿ.ಆರ್.ಪಿ (TRP) ಗಾಗಿ ಇಂತಹ ಬೇಜವಾಬ್ದಾರಿ ಹೇಳಿಕೆಗಳಿಗೆ ವೇದಿಕೆ ಕಲ್ಪಿಸುತ್ತಿರುವುದು ಅತ್ಯಂತ ಕಳವಳಕಾರಿ ಸಂಗತಿ. ಒಬ್ಬ ಮನುಷ್ಯನ ಯಶಸ್ಸನ್ನು ಅವನ ಕಠಿಣ ಪರಿಶ್ರಮ, ಪ್ರತಿಭೆ ಅಥವಾ ಬುದ್ಧಿವಂತಿಕೆಯಿಂದ ಅಳೆಯುವ ಬದಲು, ಶಾರೀರಿಕ ಅಂಗಾಗಗಳ ಗಾತ್ರಕ್ಕೆ ಮತ್ತು ಅದೃಷ್ಟಕ್ಕೆ ಮುಡಿಪಾಗಿಡುವುದು ಮನುಷ್ಯನ ವಿವೇಚನಾ ಶಕ್ತಿಯನ್ನೇ ಅಪಹಾಸ್ಯ ಮಾಡಿದಂತೆ.

ಇಂದಿನ ಇಪ್ಪತ್ತೊಂದನೇ ಶತಮಾನವು ವಿಜ್ಞಾನ ಮತ್ತು ತಂತ್ರಜ್ಞಾನದ ಸುಗ್ಗಿ ಕಾಲ. ನಾವು ಮಂಗಳ ಗ್ರಹಕ್ಕೆ ನೌಕೆಯನ್ನು ಕಳುಹಿಸುತ್ತಿದ್ದೇವೆ, ಕೃತಕ ಬುದ್ಧಿಮತ್ತೆಯ (AI) ಮೂಲಕ ಜಗತ್ತನ್ನೇ ಬದಲಿಸುತ್ತಿದ್ದೇವೆ. ಆದರೆ ವಿಪರ್ಯಾಸವೆಂದರೆ, ವೈಜ್ಞಾನಿಕವಾಗಿ ಇಷ್ಟು ಮುಂದುವರಿದರೂ ನಮ್ಮ ಮಾನಸಿಕತೆ ಮಾತ್ರ ಇನ್ನೂ ಸಾವಿರಾರು ವರ್ಷಗಳ ಹಿಂದಿನ ಅಸ್ಪಷ್ಟ ನಂಬಿಕೆಗಳಲ್ಲೇ ಸುರುಳಿ ಸುತ್ತಿಕೊಂಡಿದೆ. ಇದಕ್ಕೆ ಒಂದು ಉದಾಹರಣೆಯನ್ನು ನೋಡೋಣ.

ಪ್ರತಿದಿನ ಬೆಳಿಗ್ಗೆ ಎದ್ದ ಕೂಡಲೇ ದೂರದರ್ಶನ ವಾಹಿನಿಗಳನ್ನು ಗಮನಿಸಿ; ಅಲ್ಲಿ ವಿಜ್ಞಾನದ ಚರ್ಚೆಗಳಿಗಿಂತ 'ಗ್ರಹಗತಿ'ಗಳ ಚರ್ಚೆಯೇ ಜೋರಾಗಿರುತ್ತದೆ. ಬೆಳಿಗ್ಗೆ 6 ರಿಂದ 9 ಗಂಟೆಯವರೆಗೆ ಬಹುತೇಕ ಎಲ್ಲ ವಾಹಿನಿಗಳು ಜ್ಯೋತಿಷ್ಯದ ಕಾರ್ಯಕ್ರಮಗಳನ್ನೇ ಬಿತ್ತರಿಸುತ್ತವೆ. ಹನ್ನೆರಡು ರಾಶಿಗಳ ಭವಿಷ್ಯವನ್ನು ಕೇಳದೆಯೇ ಮನೆಯಿಂದ ಹೊರಬೀಳದ, ಬಣ್ಣ ಬಣ್ಣದ ಉಂಗುರಗಳನ್ನು ತೊಟ್ಟು , ನಾನಾ ಬಣ್ಣದ ದಾರಗಳನ್ನು ಕೈಗೆ ಕಟ್ಟಿಕೊಂಡು ಅದೃಷ್ಟಕ್ಕಾಗಿ ಕಾಯುವ ಒಂದು ದೊಡ್ಡ ವರ್ಗವೇ ಸೃಷ್ಟಿಯಾಗಿದೆ. ಈ "ಜ್ಯೋತಿಷ್ಯದ ಅತಿಯಾದ ಅವಲಂಬನೆ" ಮನುಷ್ಯನ ಸಹಜ ಶಕ್ತಿಯನ್ನು ಮರೆಸುತ್ತಿದೆಯೇ ಎಂಬ ಆತಂಕ ಮೂಡುವುದು ಸಹಜ.

ಕೌಟಿಲ್ಯನು ಜ್ಯೋತಿಷ್ಯವನ್ನು ಅತಿಯಾಗಿ ಬೆನ್ನು ಹತ್ತಿ ಹೋಗುವುದನ್ನು ಈ ಶ್ಲೋಕದ ಮುಖಾಂತರ ಟೀಕಿಸಿದ್ದಾನೆ .

**ನಕ್ಷತ್ರಂ ಅತಿಪೃಚ್ಛಂತಂ ಬಾಲಮರ್ಥೋಽತಿವರ್ತತೇ ।**
**ಅರ್ಥೋಽ ಹ್ಯರ್ಥಸ್ಯ ನಕ್ಷತ್ರಂ ಕಿಂ ಕರಿಷ್ಯಂತಿ ತಾರಕಾಃ ॥**

ಅವಶ್ಯವಾಗಿ ಮಾಡಬೇಕಾದ ಕಾರ್ಯದಲ್ಲಿಯೂ ಕೂಡ ನಕ್ಷತ್ರ ಅನುಕೂಲತೆಯನ್ನು ನೋಡುವವನಿಗೆ ಅರ್ಥವು ಅಂದರೆ ಹಣವು ಸಿಗುವುದಿಲ್ಲ .

ಈ ಶ್ಲೋಕವು ಮಾನವನ ಮೂಢನಂಬಿಕೆಯನ್ನು ಖಂಡಿಸುತ್ತದೆ. ಒಬ್ಬ ವ್ಯಕ್ತಿಯು ತನ್ನ ಕೈಗೆ ಬಂದ ಕೆಲಸವನ್ನು ತಕ್ಷಣವೇ ಮಾಡಲು ಪ್ರಾರಂಭಿಸಬೇಕು. ಅದನ್ನು ಬಿಟ್ಟು, "ಇಂದು ಒಳ್ಳೆಯ ದಿನವೇ?", "ಈಗ ನಕ್ಷತ್ರ ಬಲವಿದೆಯೇ?" ಎಂದು ಜ್ಯೋತಿಷ್ಯ ಅಥವಾ ಮುಹೂರ್ತವನ್ನು ಅತಿಯಾಗಿ ಪರೀಕ್ಷಿಸುತ್ತಾ ಕಾಲಹರಣ ಮಾಡಿದರೆ, ಆ ಶುಭ ಸಮಯಕ್ಕಾಗಿ ಕಾಯುವಷ್ಟರಲ್ಲಿ ಕೈಗೆ ಬಂದ ಸುವರ್ಣಾವಕಾಶವು ಕೈತಪ್ಪಿ ಹೋಗುತ್ತದೆ. ಇಲ್ಲಿ 'ಬಾಲಂ' ಎಂದರೆ ಕೇವಲ ಮಗುವಲ್ಲ, ವಿವೇಚನೆ ಇಲ್ಲದ ಮೂರ್ಖ ಎಂದರ್ಥ.

ಯಾವುದೇ ಒಂದು ಕಾರ್ಯವನ್ನು ಸಾಧಿಸಲು ಇರುವ ಅತ್ಯಂತ ದೊಡ್ಡ ಮುಹೂರ್ತವೆಂದರೆ ಆ ಕೆಲಸವನ್ನು ಮಾಡುವ ದೃಢ ಸಂಕಲ್ಪ ಮತ್ತು ಶ್ರಮ. ನಾವು ಮಾಡುವ ಪ್ರಾಮಾಣಿಕ ಪ್ರಯತ್ನವೇ ನಮಗೆ ಯಶಸ್ಸನ್ನು ತಂದುಕೊಡುವ ನಿಜವಾದ 'ನಕ್ಷತ್ರ'. ನಾವೇನೂ ಮಾಡದೆ ಕೇವಲ ಆಕಾಶದಲ್ಲಿರುವ ಗ್ರಹಗತಿಗಳು ಅಥವಾ ನಕ್ಷತ್ರಗಳನ್ನು ನಂಬಿ ಕುಳಿತರೆ ಅವು ನಮ್ಮ ಭಾಗ್ಯವನ್ನು ಬದಲಾಯಿಸಲು ಸಾಧ್ಯವಿಲ್ಲ.

ಕೊನೆಯ ಸಾಲು "ಕಿಂ ಕರಿಷ್ಯಂತಿ ತಾರಕಾಃ" ಎಂಬುದು ಅತ್ಯಂತ ತಾರ್ಕಿಕ ಪ್ರಶ್ನೆಯಾಗಿದೆ. ಆಕಾಶದಲ್ಲಿ ಕೋಟ್ಯಂತರ ಮೈಲಿ ದೂರದಲ್ಲಿರುವ ಜಡ ನಕ್ಷತ್ರಗಳು ಭೂಮಿಯ ಮೇಲಿರುವ ಮನುಷ್ಯನ ಸೋಲು–ಗೆಲುವನ್ನು ನಿರ್ಧರಿಸಲು ಸಾಧ್ಯವಿಲ್ಲ. ಯಶಸ್ಸು ಬೇಕಾದಾಗ ಕಠಿಣ ಪರಿಶ್ರಮವೇ ಏಕೈಕ ಮಾರ್ಗ. . ಈ ಶ್ಲೋಕವು ನಮಗೆ ಸೋಮಾರಿತನವನ್ನು ಬಿಟ್ಟು, ಅತಿಯಾದ ಅದೃಷ್ಟದ ಭ್ರಮೆಯಿಂದ ಹೊರಬಂದು, ಪ್ರಸ್ತುತ ಕ್ಷಣದಲ್ಲಿ ಕರ್ತವ್ಯ ಪ್ರಜ್ಞೆಯಿಂದ ಬದುಕಲು ಪ್ರೇರೇಪಿಸುತ್ತದೆ.

**ಇಂದಿನ ದಿನಗಳಲ್ಲಿ ಜ್ಯೋತಿಷ್ಯದ ಅತಿರೇಕ :** ಜ್ಯೋತಿಷ್ಯ ಎಂಬುದು ಮೂಲತಃ ಒಂದು ಕಾಲಗಣನೆಯ ಶಾಸ್ತ್ರವಾಗಿತ್ತು. ಋತುಮಾನಗಳ ಬದಲಾವಣೆ, ಮಳೆಯ ಮುನ್ಸೂಚನೆಗಾಗಿ ಇದನ್ನು ಬಳಸಲಾಗುತ್ತಿತ್ತು. ಮದುವೆ, ಉಪನಯನ ಮುಂತಾದ ಷೋಡಶ ಸಂಸ್ಕಾರಕ್ಕೆ ಬಹುವಾಗಿ ಸೀಮಿತವಾಗಿದ್ದ ಜ್ಯೋತಿಷ್ಯ ಇಂದು ದೊಡ್ಡ ವ್ಯಾಪಾರವಾಗಿದೆ . ಇಂದು ಅದು 'ಭಯ' ಮತ್ತು 'ಆಸೆ'ಗಳನ್ನು ಬಂಡವಾಳ ಮಾಡಿಕೊಂಡಿರುವ ದೊಡ್ಡ ಉದ್ಯಮ. ಮನುಷ್ಯನಿಗೆ ತನ್ನ ಭವಿಷ್ಯದ ಬಗ್ಗೆ ಇರುವ ಅನಿಶ್ಚಿತತೆಯೇ ಈ ಉದ್ಯಮದ ಇಂಧನ.

ಸಮಾಜದ ಮೇಲೆ ಇದರ ಪರಿಣಾಮ ಭೀಕರವಾದುದು. ಯಾವಾಗ ಒಬ್ಬ ವ್ಯಕ್ತಿ ತನ್ನ ಸೋಲಿಗೆ ತನ್ನ ಗ್ರಹಗತಿಗಳೇ ಕಾರಣ ಎಂದು ನಂಬುತ್ತಾನೋ, ಆಗ ಅವನು ತನ್ನ ತಪ್ಪುಗಳನ್ನು ತಿದ್ದಿಕೊಳ್ಳುವ ಪ್ರಯತ್ನವನ್ನೇ ಬಿಟ್ಟುಬಿಡುತ್ತಾನೆ. "ನನ್ನ ಜಾತಕದಲ್ಲೇ ಹೀಗಿದೆ, ನಾನು ಏನು ಮಾಡಲು ಸಾಧ್ಯ?" ಎಂಬ ಅಸಹಾಯಕತೆ ಅವನನ್ನು ಅಕರ್ಮಣ್ಯನನ್ನಾಗಿ ಮಾಡುತ್ತದೆ. ಇದು ಕೇವಲ ವ್ಯಕ್ತಿಯ ಸೋಲಲ್ಲ, ಇಡೀ ಸಮಾಜದ ಪ್ರಗತಿಗೆ ಒದಗುವ ಕಂಟಕ. ಪ್ರತಿಭೆ ಇದ್ದರೂ ಆತ್ಮವಿಶ್ವಾಸದ ಕೊರತೆಯಿಂದ ಎಷ್ಟೋ ಯುವಕರು "ಶನಿ ದೆಸೆ" ಅಥವಾ "ರಾಹು ಕಾಲ"ಕ್ಕೆ ಹೆದರಿ ಅವಕಾಶಗಳನ್ನು ಕಳೆದುಕೊಳ್ಳುತ್ತಿದ್ದಾರೆ.

ಕನ್ನಡದ ದಾರ್ಶನಿಕ ಕವಿ ಡಿ.ವಿ. ಗುಂಡಪ್ಪನವರು 83 ವರ್ಷಗಳ ಹಿಂದೆ ಬರೆದ 'ಮಂಕುತಿಮ್ಮನ ಕಗ್ಗ'ದಲ್ಲಿ ಈ ವಿಷಯದ ಕುರಿತು ಅತ್ಯಂತ ಪ್ರಬುದ್ಧವಾಗಿ ಚರ್ಚಿಸಿದ್ದಾರೆ. ಅವರು ವಿಧಿಯನ್ನು ನಂಬದವರಲ್ಲ, ಆದರೆ ವಿಧಿಯ ಹೆಸರಿನಲ್ಲಿ ಕುಳಿತುಕೊಳ್ಳುವವರನ್ನು ಅವರು ಕಟುವಾಗಿ ಟೀಕಿಸುತ್ತಾರೆ.

ಇಂದಿನ ದಿನಗಳಲ್ಲಿ ಜ್ಯೋತಿಷಿಗಳು "ಗ್ರಹ ಶಾಂತಿ" ಅಥವಾ "ದೋಷ ನಿವಾರಣೆ"ಯ ಹೆಸರಿನಲ್ಲಿ ಗ್ರಹಗಳ ಗತಿಯನ್ನೇ ಬದಲಿಸುತ್ತೇವೆ ಎಂಬ ಭ್ರಮೆಯನ್ನು ಹುಟ್ಟಿಸುತ್ತಿದ್ದಾರೆ. ಆದರೆ ಡಿ.ವಿ.ಜಿ ಅವರು ನೇರವಾಗಿ ಪ್ರಶ್ನಿಸುತ್ತಾರೆ:

**ಗ್ರಹಗತಿಯ ತಿದ್ದುವನೆ ಜೋಯಿಸನು ಜಾತಕದಿ?** ?
**ವಿಹಿತವಾಗಿಹುದದರ ಗತಿ ಸೃಷ್ಟಿ ವಿಧಿಯಿಂ** ?
**ಸಹಿಸಿದಲ್ಲದೆ ಮುಗಿಯದಾವ ದಶೆ ಬಂದೊಡಂ** ?
**ಸಹನೆ ವಜ್ರದ ಕವಚ – ಮಂಕುತಿಮ್ಮ** ? 366 ?

ಆಕಾಶದ ಗ್ರಹಗಳು ಪ್ರಕೃತಿಯ ನಿಯಮದಂತೆ ಸಾಗುತ್ತವೆ. ಅವುಗಳ ಹಾದಿಯನ್ನು ಯಾವ ಜ್ಯೋತಿಷಿಯೂ ಬದಲಿಸಲಾರ. ಬದುಕಿನಲ್ಲಿ ಯಾವುದೋ ಕಷ್ಟದ "ದಶೆ" ಬಂದಾಗ ಅಥವಾ ಗ್ರಹಚಾರ ಕೆಟ್ಟಾಗ, ಪವಾಡಗಳ ಮೊರೆ ಹೋಗುವ ಬದಲು ಅದನ್ನು ಅನುಭವಿಸುವ ತಾಳ್ಮೆ ಬೇಕು. ಇಲ್ಲಿ ಡಿ.ವಿ.ಜಿ ಒಂದು ಅದ್ಭುತವಾದ ರೂಪಕವನ್ನು ಬಳಸಿದ್ದಾರೆ?"ಸಹನೆ ವಜ್ರದ ಕವಚ". ಕಷ್ಟಗಳು ಬಂದಾಗ ಅವುಗಳನ್ನು ತಡೆಯಲು ಜ್ಯೋತಿಷಿಯ ಪರಿಹಾರಗಳಿಗಿಂತ ನಮ್ಮೊಳಗಿನ 'ಸಹನೆ' ನಮಗೆ ರಕ್ಷಣೆ ನೀಡುತ್ತದೆ.

ಜ್ಯೋತಿಷ್ಕನ ಬಳಿ ಹೋಗಿ ನಿನ್ನ ಜಾತಕವ ತೋರಿಸಿದರೆ,ಅವನಿಗೆ ನಿನ್ನ ಗ್ರಹ ಗತಿಯನ್ನು ತಿದ್ದಲು ಸಾಧ್ಯವೇ? ಇಲ್ಲ,ಏಕೆಂದರೆ ನೀ ಈ ಜಗತ್ತಿಗೆ ಬಂದಾಗಲೇ ನಿನ್ನ ಗ್ರಹಗತಿಯನ್ನು ವಿಧಿ ನಿರ್ಧರಿಸಿಬಿಟ್ಟಿದೆ. ಹಾಗಾಗಿ ಯಾವ ದೆಶೆಯಾದರೂ, ಬಂದದ್ದನ್ನು ಅನುಭವಿಸಿಯೇ ತೀರಬೇಕು. ಹಾಗೆ ಅನುಭವಿಸುವಾಗ ಬರುವ ನೋವು ಸಂಕಷ್ಟಗಳನ್ನು ಸಹಿಸಲು ನಿನಗೆ ಬೇಕಾದದ್ದು ?ಸಹನೆ? ಎಂಬ ?ವಜ್ರದ ಕವಚ? ಎಂದು ಜನರ ಭವಿಷ್ಯವನ್ನು ಹೇಳಿದ್ದಾರೆ .

?ಹಣೆ ಬರಹಕ್ಕೆ ಹೊಣೆ ಯಾರು" ಎನ್ನುವುದು ಸಾಮಾನ್ಯವಾಗಿ ನಾವು ಕೇಳುವ ಮಾತು.ಅಂದರೆ ಎಲ್ಲರಿಗೂ ಗೊತ್ತು,ವಿಧಿಬರಹವನ್ನು ತಿದ್ದಿ ಬರೆಯಲು ಸಾಧ್ಯವಿಲ್ಲ ಎಂದು. ಆದರೂ ತಮ್ಮ ಅಥವಾ ತಮ್ಮವರ ಜಾತಕವನ್ನು ಹಿಡಿದು ಹಲವಾರು ಜ್ಯೋತಿಷ್ಕರ ಮನೆ ಬಾಗಿಲಿಗೆ ಓಡುವ ಜನರಿಗೆ ಕೊರತೆಯೇನೂ ಇಲ್ಲ. ಒಂದು ಬೀಜ ತನ್ನ ತಾಯಿಮರದಿಂದ ಹೇಗೆ ತಾನು ?ಆಗುವ? ಮರದ ಎಲ್ಲ ಗುಣಗಳನ್ನೂ ತನ್ನಲ್ಲೇ ಅಡಗಿಸಿಕೊಂಡು ಬಂದಿರುತ್ತದೆಯೋ, ಹಾಗೆಯೇ ಪ್ರತೀ ಜೀವಿಯೂ ಒಂದು ದೇಹಧಾರಣೆ ಮಾಡುವಾಗಲೇ, ತನ್ನೆಲ್ಲ ವಿಧಿಬರಹವನ್ನೂ ಹೊತ್ತು ತಂದಿರುತ್ತದೆ. ಅದನ್ನು ಬದಲಾಯಿಸಲು ಸಾಧ್ಯವೇ ಇಲ್ಲ.

ಸ್ವಾಮಿ ವಿವೇಕಾನಂದರ ಈ ಪ್ರಸಿದ್ಧ ಉಕ್ತಿಯನ್ನು ನಾವು ಯಾವಾಗಲೂ ಜ್ಞಾಪಕವಿಟ್ಟುಕೊಳ್ಳಬೇಕು

?Take the whole responsibility on your own shoulders, and know that you are the creator of your own destiny. All the strength and succor you want is within yourselves."

ಸ್ವಾಮಿ ವಿವೇಕಾನಂದರ ಈ ಅಮೂಲ್ಯ ನುಡಿಯು ಮಾನವನ ಆತ್ಮವಿಶ್ವಾಸ ಮತ್ತು ಸ್ವಾವಲಂಬನೆಯನ್ನು ಬಡಿದೆಬ್ಬಿಸುವ ದಿವ್ಯ ಮಂತ್ರವಾಗಿದೆ. ನಮ್ಮ ಜೀವನದ ಪ್ರತಿಯೊಂದು ಸೋಲು, ಗೆಲುವು, ಸುಖ ಮತ್ತು ಕಷ್ಟಗಳಿಗೆ ನಾವೇ ಸಂಪೂರ್ಣ ಜವಾಬ್ದಾರರು ಹೊರತು ಗ್ರಹಗತಿಗಳಾಗಲಿ ಅಥವಾ ಅದೃಷ್ಟವಾಗಲಿ ಅಲ್ಲ ಎಂಬುದು ಇದರ ಮುಖ್ಯ ಸಂದೇಶ.

ನಾವು ನಮ್ಮ ಹಣೆಬರಹವನ್ನು ದೂಷಿಸುವುದನ್ನು ನಿಲ್ಲಿಸಿ, ಸ್ವಪ್ರಯತ್ನವನ್ನು ನಂಬಬೇಕು. ನಮ್ಮ ಭವಿಷ್ಯವನ್ನು ನಾವೇ ರೂಪಿಸಿಕೊಳ್ಳುವ ಶಿಲ್ಪಿಗಳು. ನಮಗೆ ಬೇಕಾದ ಅಪ್ರತಿಮ ಶಕ್ತಿ, ಧೈರ್ಯ ಮತ್ತು ಸಮಾಧಾನಗಳು ಹೊರಗೆಲ್ಲೂ ಇಲ್ಲ; ಅವು ನಮ್ಮ ಒಳಗೇ ಅಡಗಿವೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಆಂತರಿಕ ಸಾಮರ್ಥ್ಯವನ್ನು ಗುರುತಿಸಿ, ಕಠಿಣ ಪರಿಶ್ರಮ ಪಟ್ಟರೆ ಎಂತಹ ಕಷ್ಟದ ಪರಿಸ್ಥಿತಿಯನ್ನೂ ಬದಲಾಯಿಸಬಹುದು.

ಹೊರಗಿನ ಯಾವುದೇ ಶಕ್ತಿ ನಮಗೆ ಶಾಶ್ವತ ಸಹಾಯ ಮಾಡಲಾರದು. ಸ್ವಯಂ ಜವಾಬ್ದಾರಿಯನ್ನು ಹೊತ್ತುಕೊಂಡು ಮುನ್ನಡೆದಾಗ ಮಾತ್ರ ಮನುಷ್ಯನಲ್ಲಿ ನೈಜ ನಾಯಕತ್ವ ಗುಣ ಮತ್ತು ಧೀಮಂತಿಕೆ ಮೂಡುತ್ತದೆ. ಮೂಢನಂಬಿಕೆಗಳನ್ನು ಬದಿಗಿಟ್ಟು, ತನ್ನನ್ನು ತಾನು ನಂಬುವವನು ಜಗತ್ತನ್ನೇ ಗೆಲ್ಲಬಲ್ಲನು. ಸಂಕ್ಷಿಪ್ತವಾಗಿ ಹೇಳುವುದಾದರೆ, ಸ್ವಾವಲಂಬನೆ ಹಾಗೂ ಆತ್ಮಶಕ್ತಿಯೇ ಯಶಸ್ಸಿನ ಏಕೈಕ ರಹಸ್ಯ ಎಂದು ವಿವೇಕಾನಂದರು ಈ ಮೂಲಕ ಸ್ಪಷ್ಟಪಡಿಸಿದ್ದಾರೆ.

ಭಾರತೀಯ ಸಂಸ್ಕೃತಿಯು "ಕರ್ಮ ಸಿದ್ಧಾಂತ"ವನ್ನು ಬೋಧಿಸುತ್ತದೆ. ಅಂದರೆ, ನಾವು ಮಾಡುವ ಕೆಲಸಕ್ಕೆ ತಕ್ಕ ಫಲ ಸಿಗುತ್ತದೆ ಎಂಬುದೇ ಇದರ ಸಾರ. ಹೀಗಿರುವಾಗ, ಕೆಲಸ ಮಾಡದೆಯೇ ಗ್ರಹಗಳಿಗೆ ಶಾಂತಿ ಮಾಡಿಸಿದರೆ ಫಲ ಸಿಗುತ್ತದೆ ಎಂದು ನಂಬುವುದು ನಮ್ಮ ಮೂಲ ಸಂಸ್ಕೃತಿಗೇ ವಿರುದ್ಧವಾದುದು. ರಾಮಾಯಣದಲ್ಲಿ ರಾಮನು ವನವಾಸಕ್ಕೆ ಹೋಗುವಾಗ ಅಥವಾ ಮಹಾಭಾರತದಲ್ಲಿ ಕೃಷ್ಣನು ಪಾಂಡವರಿಗೆ ಮಾರ್ಗದರ್ಶನ ನೀಡುವಾಗ ಎಲ್ಲಿಯೂ ಜ್ಯೋತಿಷ್ಯದ ಕಾರಣ ನೀಡಿ ಕರ್ತವ್ಯದಿಂದ ವಿಮುಖರಾಗುವಂತೆ ಹೇಳಲಿಲ್ಲ. ಬದಲಾಗಿ, ಸವಾಲುಗಳನ್ನು ಎದುರಿಸುವುದೇ ಜೀವನ ಎಂದು ಕಲಿಸಿಕೊಟ್ಟರು.

ವೈಜ್ಞಾನಿಕ ಮನೋಭಾವ (Scientific Temper) ಎಂದರೆ ಕೇವಲ ವಿಜ್ಞಾನ ಓದುವುದಲ್ಲ, ಅದು ಬದುಕನ್ನು ನೋಡುವ ಒಂದು ದೃಷ್ಟಿಕೋನ. ಗ್ರಹಗಳು ಆಕಾಶದಲ್ಲಿರುವ ಬೃಹತ್ ಕಾಯಗಳು. ಅವುಗಳ ಗುರುತ್ವಾಕರ್ಷಣೆ ಭೂಮಿಯ ಮೇಲೆ ಇರಬಹುದು, ಆದರೆ ಅವು ನಮ್ಮ ಪರೀಕ್ಷೆಯ ಅಂಕಗಳನ್ನೋ ಅಥವಾ ಉದ್ಯೋಗದ ಬಡ್ತಿಯನ್ನೋ , ನಮ್ಮ ಹಣಕಾಸಿನ ಸ್ಥಿತಿಯನ್ನು ನಿರ್ಧರಿಸುವುದಿಲ್ಲ. ಅದನ್ನು ನಿರ್ಧರಿಸುವುದು ನಮ್ಮ ಓದು ಮತ್ತು ಕೌಶಲ ಮಾತ್ರ.

ನಕ್ಷತ್ರಗಳು ಆಕಾಶದಲ್ಲಿ ಮಿನುಗುತ್ತಿರಲಿ, ಅವುಗಳ ಚಂದವನ್ನು ಸವಿಯೋಣ. ಆದರೆ ನಮ್ಮ ಬದುಕಿನ ಹಡಗಿಗೆ ಅವುಗಳನ್ನೇ ದಿಕ್ಸೂಚಿ ಮಾಡಿಕೊಳ್ಳುವುದು ಬೇಡ. ನಮ್ಮ ಬುದ್ಧಿಶಕ್ತಿ, ನಮ್ಮ ಪರಿಶ್ರಮ ಇವೇ ನಮ್ಮನ್ನು ಯಶಸ್ಸಿನತ್ತ ಮುನ್ನಡೆಸುವ ನಿಜವಾದ ನಕ್ಷತ್ರಗಳು.

ಮಾಧ್ಯಮಗಳು ಮತ್ತು ಸಮಾಜದ ಹಿರಿಯರು ಅಂಧಶ್ರದ್ಧೆಯನ್ನು ಪ್ರೋತ್ಸಾಹಿಸುವ ಬದಲು, ಸತ್ಯ ಮತ್ತು ಶ್ರಮದ ಹಾದಿಯನ್ನು ಜನರಿಗೆ ತೋರಿಸಿಕೊಡಬೇಕಿದೆ. ಮುಂಜಾನೆಯ ಕಿರಣಗಳು ನಮ್ಮಲ್ಲಿ ಹೊಸ ಆಶಾವಾದವನ್ನು ತುಂಬಬೇಕೇ ಹೊರತು, ಗ್ರಹಗತಿಗಳ ಭಯವನ್ನಲ್ಲ. ನೆನಪಿಡಿ, "ನಿಮ್ಮ ಗುರಿಯೇ ನಿಮ್ಮ ನಕ್ಷತ್ರ. ? ಆ ನಕ್ಷತ್ರದ ಬೆಳಕಿನಲ್ಲಿ ನಿಮ್ಮ ಹಾದಿಯನ್ನು ನೀವೇ ಕಂಡುಕೊಳ್ಳಿ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email: Swamynathann@gmail.com

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,